ಮಾಡಿ ಯಾವ ರೀತಿ ಮಾಡೋಣವೆಂದು ತೀರ್ಮಾನ ಮಾಡೋಣ. ಸದ್ಯಕ್ಕೆ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ ಇದನ್ನು ಇಲ್ಲಿಗೆ ಬಿಟ್ಟು ಮುಂದಕ್ಕೆ ಹೋಗಿ ಕಾರ್ಯಕಲಾಪಗಳನ್ನು ನಡೆಸೋಣ.

ಅಧ್ಯಕ್ಷರು:- ಆಯಿತು. ದಯವಿಟ್ಟು ತಮ್ಮ ಸ್ಥಾನಕ್ಕೆ ತೆರಳಿ. ಎಲ್ಲರೂ ಸೇರಿ ಮಾಡೋಣ.

ಶ್ರೀ ಡಿ.ಕೆ. ಶಿವಕುಮಾರ್:- We will take all of you into confidence and look in to that.

(ಈ ಹಂತದಲ್ಲಿ ಭಾರತೀಯ ಜನತ ಪಕ್ಷದ ಸದಸ್ಯರುಗಳು ಬಾವಿಯಿಂದ ಹೊರನಡೆದು ತಮ್ಮ ತಮ್ಮ ಸ್ಥಾನಗಳಿಗೆ ಹೋದರು.)

ಅಧ್ಯಕ್ಷರು:- ಬೋಪಯ್ಯನವರು continue ಮಾಡಿ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):- ಮಾನ್ಯ ಅಧ್ಯಕ್ಷರೆ, ನಾನು ಅರಣ್ಯ ಇಲಾಖೆಯ Organization structure ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಈ ರೀತಿ ಆಯಿತು. IFS Cadre ನ 164 ಹುದ್ದೆಗಳಿದ್ದು, ಅವರೆಲ್ಲರೂ ಇಲಾಖೆಯಲ್ಲಿಯೇ ಇದ್ದಾರೆಯೇ? On deputation ಇದ್ದಾರೆಯೇ? ಅದೆಲ್ಲದರ ಬಗ್ಗೆ ಮಾಹಿತಿಯನ್ನು ಕೊಡಬೇಕು ಮತ್ತು ಇಷ್ಟೊ ಜನರಿಗೆ ಏನು ಕೆಲಸ ಎನ್ನುವ ಮಾಹಿತಿಯೂ ಸಹ ಬೇಕು. ನಮ್ಮ ರಾಜ್ಯದಲ್ಲಿ 13 division ಇದೆ. ಇಷ್ಟು ಜನಕ್ಕೆ ಏನು ಕೆಲಸ? ನಾನು ಆಗಲೇ ಹೇಳಿದ ಹಾಗೆ, ನನ್ನ ಜಿಲ್ಲೆಯಲ್ಲಿ ಇಬ್ಬರು CCF ಇದ್ದಾರೆ. ಅವರಿಗೆ ಇಲ್ಲಿ ಏನು ಕೆಲಸ ಎಂದು ಗೊತ್ತಿಲ್ಲ. ಇದರ ಜೊತೆಗೆ, ಕೆಲವು ಹುದ್ದೆಗಳನ್ನು direct IFS ಯಾರು ಆಗಿರುತ್ತಾರೆ ಅವರಿಗೆ ಕೊಡುತ್ತಾರೆ. ಪಾಪ, ಕರ್ನಾಟಕದಲ್ಲಿ ಯಾರು Ranger ನಿಂದ promotion ಆಗಿ ಬರುತ್ತಾರಲ್ಲ ಅವರಿಗೆ ಇಲ್ಲ. ಅಷ್ಟು ವ್ಯವಸ್ಥೆಯನ್ನು ಈ IFS ಅಧಿಕಾರಿಗಳು ಮಾಡಿಕೊಂಡಿದ್ದಾರೆ. IFS ಎಂದರೆ, I First safe

ಎಂದು ಹೇಳುತ್ತಾರೆ. ಇದರಲ್ಲಿ ಆ ವ್ಯವಸ್ಥೆಯು ಇದೆ. ನಮ್ಮಲ್ಲಿ regular DFO ಇದ್ದಾರೆ. only eligibility direct IFS. Wild Life DFO post ಯಾರು direct IFS ಇದ್ದಾರೆ ಅವರಿಗೆ ಹಾಗೂ ಬೇರೆ Social Forest, plantation ಇಡೀ ಅರಣ್ಯದೊಳಗೆ ಸುತ್ತಾಡಿ, ಬೆಳೆಸಿ, ranger, ಅಥವಾ ಇನ್ನೂ ಕೆಳಗೆ Forester ಆಗಿದ್ದವರೂ ಬರುವುದಕ್ಕೆ ಅವಕಾಶಗಳು ಇದೆ. ಈ ವ್ಯತ್ಯಾಸ ಇರಬಾರದು. ಈ difference ಇರಬಾರದು. ಅವರು ಇವರಿಗಿಂತ more experience, ಇವರಿಗಿಂತ ಚೆನ್ನಾಗಿ ಅರಣ್ಯದ ಬಗ್ಗೆ ತಿಳಿದುಕೊಂಡು, ಕರ್ನಾಟಕ ಎಂದು ಒಂದಿಷ್ಟು ಕಾಳಜಿ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಏಕೆ ಅವರಿಗೆ eligibility ಇಲ್ಲ? ಅದನ್ನು ತೆಗೆದು ಹಾಕಬೇಕು. ಈ ವ್ಯತ್ಯಾಸಗಳನ್ನು ತೆಗೆದುಹಾಕಬೇಕೆಂದು ನಾನು ಹಿಂದೆಯೂ ಕೂಡ ಹೇಳಿದ್ದೆ. ಇದನ್ನು ವ್ಯವಸ್ಥಿತವಾಗಿ ಮಾಡಿಕೊಂಡಿದ್ದಾರೆ. ಎಲ್ಲಾ postings ತೆಗೆದು ನೋಡಿದರೆ ನಮ್ಮಲ್ಲಿ ಐದು DFO post ಇವೆ. ಎಷ್ಟು ಜನ ಇದ್ದಾರೆ ಎಂದರೆ, ಇಬ್ಬರೇ. ಉಳಿದವರು ಎಲ್ಲಿ ಇದ್ದಾರೆಂದು ಗೊತ್ತಿಲ್ಲ. ಸಣ್ಣ ಜಿಲ್ಲೆಗೆ Created posts five. ಬೇರೆ ಬೇರೆ ಜಿಲ್ಲೆಯಿಂದ ಮಾಹಿತಿ ತೆಗೆದುಕೊಂಡರೆ ಎಷ್ಟು ಎಂದು ನೋಡಬೇಕಾಗುತ್ತದೆ. ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ನಾನು ಈ ಸರ್ಕಾರದಲ್ಲಿ ಆಯಿತು ಎಂದು ಹೇಳುತ್ತಿಲ್ಲ. ತಲಾತಲಾಂತರಗಳಿಂದ ನಡೆದುಕೊಂಡು ಬಂದಿದೆ. ಇವರು I First Safe ಎನ್ನುವುದನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿದ್ದಾರೆ. ಕಾಯಿದೆ ಪ್ರಕಾರ ಒಂದಿಷ್ಟು ಕೆಲಸಗಳನ್ನೆಲ್ಲಾ ಮಾಡಬೇಕೆಂದು ಹಾಕಿಕೊಂಡಿದ್ದಾರೆ. ಕಳ್ಳಸಾಗಾಣಿಕೆ, ಬೇಟೆ ಆಡುವುದನ್ನು ತಡೆಯುವುದು, ಬೆಂಕಿಯಿಂದ ಸಂರಕ್ಷಣೆ, ಇತರ ಕಾರಣಗಳಿಂದ ಈಗ ಇರುವ ಸಸ್ಯೆ ಮತ್ತು ವನ್ಯಜೀವಿಗಳ ಸಂರಕ್ಷಣೆ ಇವರ ಜವಾಬ್ದಾರಿ ಎಂದು ಮಾಡಿಕೊಂಡಿದ್ದಾರೆ. ಎಷ್ಟರಮಟ್ಟಿಗೆ ಮಾಡುತ್ತಿದ್ದಾರೆ ಎನ್ನುವುದನ್ನು ಇವತ್ತು ನಾವು ನೋಡಲೇ ಬೇಕಾಗಿದೆ. ಈ ಕಳ್ಳಸಾಗಾಣಿಕೆ ತಡೆಯಲು ಒಂದು forest squad ಇದೆ. ನಮ್ಮ ಜಿಲ್ಲೆಯಲ್ಲಿ ಒಂದು DFO forest squad ಇದೆ. ಅದರಲ್ಲಿ ಒಬ್ಬರು DFO ಎಂದರೆ ಅವರ ಕೈಕೆಳಗೆ ACF, RFOs 2–3 ಜನ ಇವರೆಲ್ಲಾ

ಇದ್ದಾರೆ. ಇದರ ಜೊತೆಗೆ, Forest CID Cell, police ರದ್ದು ಇದೆ. ಇಷ್ಟು ಇದ್ದರೂ ಕೂಡ ಇಡೀ ರಾಜ್ಯದಲ್ಲಿ ಇರಬಹುದು ಎಂದು ನನ್ನ ಭಾವನೆ. ಈ ಕಳ್ಳಸಾಗಣಿಕೆಯನ್ನು ಎಷ್ಟು ತಡೆದಿದ್ದೀರಿ? ಮಾಹಿತಿ ಎಲ್ಲಾ ಕೊಟ್ಟಿದ್ದಾರೆ. ಉದಾಹರಣೆಗೆ ಒಬ್ಬರ ಮನೆಯಲ್ಲಿ ಒಂದಿಷ್ಟು Rose wood ಸಿಕ್ಕಿತು. ಇದರ ಬಗ್ಗೆ ಪ್ರಭಾವಿ ನಾಯಕರ ಪುತ್ರನ ಮನೆಯಲ್ಲಿ 25 ಲಕ್ಷ ರೂ. ಬೆಲೆಯ ಬಿ.ಟಿ. ಮರ ಪತ್ತೆ ಎಂದು ಪತ್ರಿಕೆಗಳಲ್ಲಿ ದೊಡ್ಡದಾಗಿ ಫೋಟೋ ಹಾಕಿದರು. ಪ್ರಭಾವಿ ನಾಯಕರು ಯಾರು? ಅದು ಇರಲಿ. ಬಿ.ಟಿ. ಮರ ಎಲ್ಲಿಂದ ಬಂತು? ಆ source stem ಎಲ್ಲಿ? ಅದನ್ನು ಕಂಡುಹಿಡಿಯಬೇಕು. ಆದರೆ, ಇವರು ಕಂಡುಹಿಡಿಯುವ ಕೆಲಸಕ್ಕೆ ಹೋಗುವುದಿಲ್ಲ. ಏಕೆಂದರೆ, ಇವರು ಕಂಡುಹಿಡಿಯುವುದಕ್ಕೆ ಹೋದರೆ ಇವರ ಬುಡಕ್ಕೆ ಬರುತ್ತದೆ. ಒಂದು ಅರಣ್ಯದಿಂದ ಕದ್ದಿರುತ್ತಾರೆ ಅಥವಾ Deemed forest ನಿಂದ ಕದ್ದಿರುತ್ತಾರೆ. ಅಲ್ಲಿ ಕದ್ದಿದ್ದನ್ನು ಏನಾದರೂ ಕಂಡುಹಿಡಿದು, ಯಾವುದೇ ಒಂದು chart sheet ಮಾಡಬೇಕಾದರೆ the stem has to the racked out ಎಂದು section 27 ರಲ್ಲಿ very clear ಇದೆ. ಇಲ್ಲದಿದ್ದರೆ acquittal. Forest cases investigation ನಲ್ಲಿ ಎಷ್ಟು conviction ಆಗುತ್ತದೆ ಎನ್ನುವುದು ಗೊತ್ತಿರುವ ವಿಷಯವಾಗಿದೆ. ಮಾಡುವುದೇ ಇಲ್ಲ. ಈ ರೀತಿಯ ವ್ಯವಸ್ಥೆಗಳಲ್ಲಿ ಇವರು ಕಳ್ಳಸಾಗಾಣಿಕೆಯನ್ನು ನಿಲ್ಲಿಸಬೇಕು. ಇದರ ಜೊತೆಗೆ ಅದಕ್ಕೆ ಸಂಬಂಧಪಟ್ಟ ಹೆಡ್ ಯಾರು ಇದ್ದಾರೆ ಅವರ ವಾಸ ಎಲ್ಲಿ? ಎಂದರೆ, ಅರಣ್ಯ ಭವನದಲ್ಲಿ. ಅವರು ಅರಣ್ಯ ಭವನದಲ್ಲಿ ಏನು ಮಾಡುತ್ತಿದ್ದಾರೆ? ನಮಗೆ ಗೊತ್ತಿಲ್ಲ. ಅವರು ಏನು ಮಾಡುತ್ತಿದ್ದಾರೆಂದು ಹೇಳಬೇಕು. ಅಷ್ಟು ಜನಕ್ಕೆ ಅರಣ್ಯ ಭವನದೊಳಗೆ ಏನು ಕೆಲಸ? ಅವರನ್ನು ನೀವು ಬಿಳಿ ಆನೆಗಳ ತರಹ ಸಾಕಿಕೊಂಡಿದ್ದೀರಲ್ಲಾ. ಅವರು ನಿಮ್ಮನ್ನು structure of the Forest Department ನಲ್ಲಿ ಬಿಟ್ಟು ಬಿಟ್ಟಿದ್ದಾರೆ. ಅರಣ್ಯ ಮಂತ್ರಿಗಳಿಲ್ಲ, ಪ್ರಧಾನ ಕಾರ್ಯದರ್ಶಿಗಳಿಲ್ಲ. ನಾನು ಮೊದಲೇ ಹೇಳಿದ ಹಾಗೆ, ಅವರಿಗೂ, ಇವರಿಗೂ ಯಾವುದೇ ಸಂಬಂಧವಿಲ್ಲ. ತಾವು structure of the Forest Department ಅನ್ನು ನೋಡಿದ್ದೀರಿ ಎಂದು

ಕಾಣುತ್ತದೆ. The structure of the Forest department starts with Chief Conservator of Forest, forest force, ಈ ಕಡೆಗೆ wild life. No, Principal Secretary, no Forest Minister. ಇದು ಏಕೆ ಎಂದು ಗೊತ್ತಿಲ್ಲ? ಹಾಗಾದರೆ, ಅರಣ್ಯ ಮಂತ್ರಿಗಳು ಲೆಕ್ಕಕ್ಕೆ ಇಲ್ಲ, ಪ್ರಧಾನ ಕಾರ್ಯದರ್ಶಿಗಳು ಲೆಕ್ಕಕ್ಕೆ ಇಲ್ಲ. ಇದು ಒಂದು ರೀತಿಯ ಸರ್ವಾಧಿಕಾರದ ಭಾವನೆಯಾಗಿದೆ. ಇದು ಸರಿ ಆಗಬೇಕು. ನಿಮ್ಮ ಪ್ರಾಮಾಣಿಕತೆ ಮೇಲೆ ತಾವು ಪ್ರಯತ್ನ ಮಾಡುತ್ತಿದ್ದೀರಿ. ನಿಮ್ಮ ಕಾಲದಲ್ಲಾದರೂ ಇದು ಸರಿ ಆಗಬೇಕು ಎನ್ನುವುದು ನನ್ನ ಆಶಯ. ನಮ್ಮ ಭಾಗದಲ್ಲಿ ಕಳ್ಳಸಾಗಣಿಕೆ ಯಾವ ರೀತಿ ನಡೆಯುತ್ತಿದೆ ಎಂದರೆ, ನಮ್ಮ ಭಾಗದ ಬಾರ್ಡ್‌ರ್‌ಗಳಾದ ಕೇರಳ, ಕರ್ನಾಟಕದಲ್ಲಿ ಮಳೆ ಬರುವಾಗ ನಮ್ಮ ಹೆಚ್ಚು ಹೊಳೆಗಳು ಕೇರಳಕ್ಕೆ ಹರಿಯುತ್ತವೆ. ಇವರು ಅಲ್ಲಿ ಬಂದು ಮರವನ್ನು ಕಡಿದು ಆ ಹೊಳೆಗೆ ಹಾಕಿ ಬಿಟ್ಟು ಬಿಡುವುದು. ಅಲ್ಲಿ ಹೋಗಿ ಸಂಗ್ರಹಣೆ ಮಾಡುವುದು. ಕೇರಳದಲ್ಲಿ ಯಾವುದೇ ರೂಲ್ಸ್ ಇಲ್ಲ. ಮರ ಕಾಯಲಿಕ್ಕೆ 164 ಜನ ಇದ್ದಾರೆ. ಹುದ್ದೆ ಎಲ್ಲಾ fill ಆಗಿದೆ. Forest Guard, Watchers, foresters ಎಷ್ಟು vacancies ಇದೆಯೆಂದು ತಾವು ಉತ್ತರದಲ್ಲಿ ಹೇಳಬೇಕು. ಇವರು daily wages ನಲ್ಲಿ appoint ಮಾಡಿಕೊಳ್ಳುತ್ತಾರೆ. ಇವರು ಅವರಿಗೆ ಸಂಬಳನೇ ಕೊಡುವುದಿಲ್ಲ. ಅವರಿಗೆ ಆರು ತಿಂಗಳಿಗೊಮ್ಮೆ, ಇಷ್ಟ ಬಂದ ಹಾಗೆ ಸಂಬಳ ಕೊಡುತ್ತಾರೆ. ಇವರು ಬದುಕಬೇಕಲ್ಲಾ. ಅದಕ್ಕೆ ಇವರು ಮರ ಕಳ್ಳರ ಜೊತೆ ಸೇರಿಕೊಂಡು ಮರ ಕಡಿಯುವುದಕ್ಕೆ ಅವರೇ ಸಹಾಯ ಮಾಡುತ್ತಾರೆ. ಮರ ಕಡಿದು ಹೊಳೆಗೆ ಹಾಕುತ್ತಾರೆ, ತೆಗೆದುಕೊಂಡು ಹೋಗುತ್ತಾರೆ. ಇದು ನಿರಂತರವಾಗಿ ನಡೆಯುತ್ತಿದೆ. ನಮ್ಮಲ್ಲಿ ಮುಂಡ್ರೋಟ್ ಎಂಬ ಭಾಗವಿದೆ. ಭಾಗಮಂಡಲದಿಂದ ಕೆಳ ಭಾಗ, ಅದು border. ಅಲ್ಲಿ ಹೊಳೆ ದೊಡ್ಡದಾಗಿ ಹರಿಯುತ್ತದೆ. ಈ ಕಡೆ ಸ್ವಲ್ಪ ಭಾಗ ಕೇರಳಕ್ಕೆ ಸೇರುತ್ತದೆ. ನಾವು ಒಂದು ಸಣ್ಣ ಬ್ರಿಡ್ಜ್, ಇನ್ನೊಂದು ಹೀಗೆ ಎಲ್ಲವನ್ನು ಮಾಡಿದರೆ ಅದಕ್ಕೆ 28 ತಕಾರಾರು ತೆಗೆಯುತ್ತಾರೆ. ಅದಕ್ಕೆ ಸುಪ್ರೀಂಕೋರ್ಟ್ Wild life Act ಬರುತ್ತದೆ, ಮತ್ತೊಂದು ಬರುತ್ತದೆ. ಹೀಗೆ ಏನೇನು ಕಾನೂನು ಇದೆ

ಅವೆಲ್ಲವನ್ನೂ ಹೇಳಿಬಿಡುತ್ತಾರೆ. 2006ರಲ್ಲಿ ಕೇರಳದವರು ಒಂದು ದೊಡ್ಡ ಬ್ರಿಡ್ಜ್ ಕಟ್ಟಿ ಇಟ್ಟಿದ್ದಾರೆ. ನಾನು object ಮಾಡುವುದಕ್ಕೂ ಹೇಳಿದೆ. ಇದನ್ನು ಕಟ್ಟುವುದಕ್ಕೆ ಬಿಡಬೇಡಿ ನಮ್ಮ ಮರ ನಾಶವಾಗುತ್ತದೆ ಎಂದು ಹೇಳಿದ್ದೆ. ಮರ ಸಾಗಣೆ ನಿರಂತರವಾಗಿ ನಡೆಯುತ್ತಿದೆ. ಕಳ್ಳತನವನ್ನು ನಿಲ್ಲಿಸಿದ್ದೇವೆಂದು ಹೇಳುತ್ತಾರೆ. ಇವರು ಕಳ್ಳತನವನ್ನು ಹೇಗೆ ನಿಲ್ಲಿಸುವುದು ಎಂದರೆ, ರೈತರು bonafideಗೆ ಒಂದಿಷ್ಟು ಮರ ತೆಗೆಯುತ್ತಾರೆ. ನಮ್ಮಲ್ಲಿ ಕಾಫಿ ತೋಟದಲ್ಲಿ shade locking ಇದೆ. No offence under section 144 of the Forest Rules. ಆದರೂ ತೋಟದಿಂದ ಮಡಿಕೇರಿ ಈ ಕಡೆಗಳಲ್ಲಿ ಮನೆ ಮಾಡಿಕೊಂಡು ಇರುತ್ತಾರೆ. ಮಳೆಗಾಲದಲ್ಲಿ ಅಲ್ಲಿ ವಿದ್ಯುತ್ ಇಲ್ಲ. ನಮ್ಮ ಜಿಲ್ಲೆಯ ಬಹಳ ಭಾಗದಲ್ಲಿ 10 ದಿನಗಳಿಂದ ವಿದ್ಯುತ್ ಇಲ್ಲ. ಸೀಮೆ ಎಣ್ಣೆ ಕೊಡುವುದಿಲ್ಲ. ಸೌಧೆ ತಂದರೆ ಅದನ್ನೆ seize ಮಾಡಿ ಇವರು ಏನೋ ದೊಡ್ಡ ಕೆಲಸ ಮಾಡಿದ ಹಾಗೆ ಪತ್ರಿಕೆಗಳಲ್ಲಿ ಫೋಟೋಗಳನ್ನು ಹಾಕಿಸುತ್ತಾರೆ. ಇವತ್ತಿಗೂ smuggling ನಡೆಯುತ್ತಲೇ ಇದೆ. ಇದನ್ನು ನಿಲ್ಲಿಸುವುದಕ್ಕೆ ಏನು ಮಾಡುತ್ತಿದ್ದೀರಿ? ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ, ಒಂದು ಗಂಧದ ಮರ ಬಹಳ valuable ಎಂದು ಹೇಳುತ್ತೇವೆ. ಇಡೀ ಕೊಡಗು ಜಿಲ್ಲೆಯಲ್ಲಿ ಇವತ್ತು ಗಂಧದ ಮರ ಎಲ್ಲಿ ಇದೆ ಎಂದು ಹುಡುಕಬೇಕು. ನಿಮ್ಮ ಅರಣ್ಯದಲ್ಲೂ ಇಲ್ಲ. ಇತ್ತೀಚೆಗೆ ಕಾನೂನು ಮಾಡಿ Private ನವರಿಗೆ ಗಂಧದ ಮರವನ್ನು ಬೆಳೆಸಿ ಎಂದು ಹೇಳಿದ್ದೀರಿ, ಆದರೆ ಬೆಳೆಸುವವರು ಯಾರು ಇಲ್ಲ. ಮೊದಲು ಕಾನೂನು ಹೇಗಿತ್ತು ಎಂದರೆ ನನ್ನ ತೋಟದಲ್ಲಿ ಇಷ್ಟು ಗಂಧದ ಮರ ಇದೆಯೆಂದು owner declaration ಕೊಡಬೇಕಾಗಿತ್ತು. Declaration ಕೊಟ್ಟಿಲ್ಲ. Declaration ಕೊಡದಿದ್ದರೆ ಯಾರೋ ಕದ್ದು ಸಿಕ್ಕಿಹಾಕಿಕೊಂಡರೆ ಆ ತೋಟದ ಮಾಲೀಕನು liable for prosecution. ಅದಕ್ಕೆ ಆ ಗಂಧದ ಮರ ಕಂಡ ತಕ್ಷಣ ನಿನ್ನ ಸಹವಾಸ ಬೇಡವೆಂದು ಕಿತ್ತು ಬಿಸಾಕಲಾಗುತ್ತದೆ. ಇದಕ್ಕೆ ಕಾರಣಕರ್ತರು ಯಾರು? ನಿಮ್ಮ ಕಾನೂನು. ಇದನ್ನು ಸರಿಮಾಡಬೇಕಾಗಿದೆ. ಇಡೀ ಕೊಡಗು ಜಿಲ್ಲೆಯಲ್ಲಿ ಗಂಧದ ಮರ ಅರಣ್ಯದ ಒಳಗೂ ಕಾಣುವುದಿಲ್ಲ. ಖಾಸಗಿ ಲ್ಯಾಂಡ್‌ನಲ್ಲಿಯೂ

ಕಾಣುವುದಿಲ್ಲ. ಇತ್ತೀಚೆಗೆ ಗಂಧದ ಮರಗಳನ್ನು ಬೆಳೆಸುವುದಕ್ಕೆ ಪ್ರೋತ್ಸಾಹ ನೀಡುತ್ತಾ, ಗಂಧದ ಮರವನ್ನು ಬೆಳೆದು ಡಿಪೋಗೆ ಕೊಟ್ಟರೆ ನಾವು ನಿಮಗೆ ಹಣ ಕೊಡುತ್ತೇವೆ, ಮತ್ತೊಂದು ಮಾಡುತ್ತೇವೆಂದು ಹೇಳುತ್ತಾರೆ. ಆದರೆ, ಅಲ್ಲಿ ಇದ್ದರೆ ಅಲ್ಲವೇ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ):- ಸನ್ಮಾನ್ಯ ಸಭಾಧ್ಯಕ್ಷರೆ, ಅರಣ್ಯ ಇಲಾಖೆಯವರು ನೆಟ್ಟಿರುವಂಥ ಗಂಧದ ಮರದ ಜಾಗದಲ್ಲಿ ಪ್ರಭಾವಿ ವ್ಯಕ್ತಿ ಸುಮಾರು 100 ರಿಂದ 150 ಟೀಕ್ ಮರಗಳಿವೆ, ಅದನ್ನು 3 ತಿಂಗಳುಗಳಿಂದ ಎರಡು sprinkler setನ್ನು ಅಲ್ಲಿ ಸಿಲವರ್ ಗಿಡದೊಳಗೆ ಇಟ್ಟುಕೊಂಡು ಜೋಳ ಬೆಳೆಸುವಂಥ ಪರಿಸ್ಥಿತಿಯಾಗಿದೆ. ಆದರೆ, ಅರಣ್ಯ ಇಲಾಖೆಯವರಿಗೆ complaint ಹೇಳಿದರೆ ಅದನ್ನು ಯಾರೂ ಛಿಚಿಡಿಜ ಮಾಡುತ್ತಿಲ್ಲ, ಕಂದಾಯ ಇಲಾಖೆಯವರು ಛಿಚಿಡಿಜ ಮಾಡುತ್ತಿಲ್ಲ. ಈ ಪರಿಸ್ಥಿತಿಯಲ್ಲಿದೆ. ಸೋಮವಾರಪೇಟೆ ತಾಲ್ಲೂಕಿನ ಸಿದ್ಧಲಿಂಗಪುರ ಗ್ರಾಮದಲ್ಲಿ ಅರಣ್ಯ ಇಲಾಖೆಯವರು ನೆಟ್ಟಂಥ ಗಂಧದ ಮರ, ಟೀಕ್ ಮರ, 50 ರಿಂದ 60,000 ಬೆಲೆ ಬಾಳುವ ಟೀಕ್ ಮರ, ಅಂಥ ಜಾಗವೂ ಸಹ ಇದೆ, ಬೇಕಾದರೆ ನಿಮಗೆ ಫೋಟೋದಲ್ಲಿ ತೋರಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಸೋಮವಾರಪೇಟೆಯಲ್ಲಿರುವ ಸಿದ್ದಲಿಂಗಪುರದಲ್ಲಿ ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):- ಮಾನ್ಯ ಅಧ್ಯಕ್ಷರೆ, ಇದುವರೆಗೂ ಹೇಳಿದ ವಿಷಯ ಗಂಧದ ಮರದ್ದು. ಇದರ ಜೊತೆಗೆ ನಮಗೇನಾದರೂ ನಮ್ಮ ಜಾಗದಲ್ಲಿರುವಂಥ ಬಿ.ಟಿ.ಮರ ಸ್ವಂತಕ್ಕೆ ಬೇಕೆಂದರೆ ಮೊದಲಾದರೆ ಡಿ.ಸಿ. opinion ಕೊಟ್ಟು 100 ಕ್ಯುಬಿಕ್ ಕೊಡುತ್ತಿದ್ದರು. ಈಗ ಅದನ್ನು ಕಿತ್ತು ಹಾಕಿದ್ದಾರೆ. PCCF ಅವರ ಬಳಿ entire file ಬರಬೇಕು. ಇವರು ಅನುಮತಿ ಕೊಡುವುದೇ ಇಲ್ಲ. ಇದರಿಂದ ಏನಾಗುತ್ತದೆಂದರೆ smugglers ಇದ್ದಾರಲ್ಲ, ಅವರು ನಿಮಗೆ ಎಷ್ಟು ಬೇಕು ಬಿ.ಟಿ.ಮರ ನಾವು ಕೊಡುತ್ತೇವೆಂದು ಧೈರ್ಯವಾಗಿ ತಂದು ಕೊಡುತ್ತಾರೆ. ಏನು ನಿಮ್ಮ

ಕಾನೂನುಗಳು ಇರುವುದು ರಕ್ಷಣೆಗೋ ಅಥವಾ smuggling supportಗೋ ಎಂದು ಗೊತ್ತಿಲ್ಲ. ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಗಂಧದ ಮರ ಮುಗಿದೇ ಹೋಯಿತು. ಇನ್ನೊಂದು 5–6 ವರ್ಷ ಇದೇ ರೀತಿ ಮುಂದುವರೆದರೆ ಕೊಡಗಿನಲ್ಲಿ rose wood ಇರುವುದಿಲ್ಲ. ಇದಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳೇ ಕಾರಣಕರ್ತರು. ಮರಗಳನ್ನು ಕದ್ದವನ stem ಕಂಡು ಹಿಡಿಯುವುದಿಲ್ಲ, ಮತ್ತೊಂದು ಮಾಡುವುದಿಲ್ಲ. ರಾಜಾರೋಷವಾಗಿ ಕದಿಯುವ ಕೆಲಸವನ್ನು ಮಾಡುತ್ತಾರೆ. ಪಾಪದ ಒಬ್ಬ ರೈತ ನನಗೆ ಸ್ವಂತ ಉಪಯೋಗಕ್ಕೆ 100 ಕ್ಯುಬಿಕ್ ಮೀಟರ್ ಕೊಡಿ ಎಂದರೆ ಆ ಮನವಿ PCCF office ಬರಬೇಕು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ನನಗೆ ಎರಡು ವರ್ಷ ಕೊಟ್ಟಿದ್ದರು.

ಶ್ರೀ ಕೆ.ಬಿ. ಬೋಪಯ್ಯ:– ಅಪ್ಪಚ್ಚು ರಂಜನ್‌ರವರಿಗೆ ಎಂದರೆ ಒಬ್ಬರು ಎಂ.ಎಲ್.ಎ.ಗೆ ಎರಡು ವರ್ಷ ಕೊಟ್ಟಿದ್ದರು. ನನಗೆ ಕೊಡಲಿಲ್ಲ. ನನ್ನ ತೋಟದಲ್ಲಿ ಬಿ.ಟಿ.ಮರ ಇಲ್ಲ. ನನ್ನ ಶ್ರೀಮತಿ ಮನೆಯಲ್ಲಿತ್ತು. Apply ಮಾಡಿದರೆ ಮನೆಯ sketch ಕೊಡಲಿಲ್ಲ, ಮತ್ತೊಂದು ಕೊಡಲಿಲ್ಲವೆಂದು reject ಮಾಡಿಬಿಟ್ಟರು. ಇರಲಿ, ಇದು ವಾಸ್ತವ ಸಂಗತಿ.

ಇದರ ಜೊತೆಗೆ, ಹರಳು ಕಲ್ಲು, precious stone ಇದಕ್ಕೆ ಕೆಂಪು ಕಲ್ಲು ಎಂದು ಹೇಳುತ್ತೇವೆ. ನಿರಂತರ smuggling ನಡೆಯುತ್ತಿದೆ. ಕೊಡಗು, ದಕ್ಷಿಣ ಕನ್ನಡ borderನಲ್ಲಿ smuggling ನಿಂತೇ ಇಲ್ಲ. ಮೊನ್ನೆ ನಾನು ಭಾಗಮಂಡಲ ರಸ್ತೆ ಬ್ಲಾಕ್ ಆಗಿದ್ದಾಗ ತನ್ನಿಮಾನಿ ಸರ್ವೆ ನಂ.10/1 ಗೆ ಹೋಗಿದ್ದೆನು. ಸಾಕಷ್ಟು ಬೆಟ್ಟಗಳು ಇದೆ. ಅಲ್ಲಿ ಹರಳು ಕಲ್ಲನ್ನು ತೆಗೆಯುವುದನ್ನು ನೋಡಿದರೆ, ಅವರ್‍ಯಾರೂ ಸ್ಥಳೀಯರಲ್ಲ. ಒಂದು ಕೇರಳದಿಂದ ಬರುತ್ತಾರೆ. ಇಲ್ಲದಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯ ಭಾಗದಿಂದ ಬರುತ್ತಾರೆ. ಸುರಂಗ ಕೊರೆದು ಹರಳು ಕಲ್ಲನ್ನು ತೆಗೆಯುತ್ತಾರೆ. ಈ red stone

ಬಹಳ valuable, ಇದರಿಂದಾಗಿ ನಿಮ್ಮ ಅರಣ್ಯವೆಲ್ಲಾ ನಾಶವಾಗುತ್ತಿದೆ. ತನ್ನಿಮಾನಿ ಸರ್ವೆ ನಂ10/1 regular forestಗೆ ಸೇರುತ್ತದೆ. ಮೊದಲೆಲ್ಲಾ ಹೇಗಿತ್ತೆಂದರೆ ಅಲ್ಲಿ ದನ ಮೇಯಿಸುವುದಕ್ಕೆ ಧಾರಾಳವಾಗಿ ರೈತರು ಹೋಗುತ್ತಿದ್ದರು. ಬೆಟ್ಟದಲ್ಲಿ ದನ ಮೇಯಿಸದೆ ಇನ್ನೆಲ್ಲಿ ಮೇಯಿಸಬೇಕು? ದನ ಮೇಯಿಸುವುದರಿಂದ ಹರಳು ಕಲ್ಲನ್ನು ಕದಿಯುವ ಕಳ್ಳರಿಗೆ ಕಷ್ಟವಾಗುತ್ತಿತ್ತು. ಈಗ ದನ ಮೇಯಿಸುವುದಕ್ಕೆ ಅಲ್ಲಿಗೆ no entry. ದನಗಳನ್ನು ಅಲ್ಲಿ ಹೊಡೆಯಬಾರದು. ಕಾರಣವೇನೆಂದರೆ smugglers stone dig ಮಾಡಬೇಕಲ್ಲ, ಅವರ ಕೆಲಸಕ್ಕೆ ತೊಂದರೆಯಾಗುತ್ತದೆ. ತಡೆಯುವುದಕ್ಕೆ ಆಗುವುದಿಲ್ಲ. ಸುಬ್ರಹ್ಮಣ್ಯ borderನಲ್ಲಿ ಕಡಮಕಲ್ಲು ಎಂದು ಕರೆಯುತ್ತೇವೆಲ್ಲ ಅಲ್ಲಿಗೆ ಸಾಧ್ಯವಾದರೆ ತಾವು ಒಮ್ಮೆ ಹೋಗಿ ನೋಡಿ. ಅಲ್ಲಿ ರಸ್ತೆ ಇದ್ದರೆ ಇವರ ಕಳ್ಳತನವೆಲ್ಲಾ ಸಿಕ್ಕಿಬೀಳುತ್ತದೆ. Existing road ರಿಪೇರಿ ಮಾಡಬೇಕೆಂದು ಹೇಳಿದರೆ E.C.ಯವರನ್ನು ಕರೆಸಿ ನಮ್ಮಿಬ್ಬರ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ. ಇದರ ಉದ್ದೇಶವೇನೆಂದರೆ existing road ಆಗಿಬಿಟ್ಟರೆ, ಅಲ್ಲಿರುವಂಥ ಹರಳು ಕಲ್ಲಿನ smuggling activitiesಗೆ ತೊಂದರೆಯಾಗುತ್ತದೆ. ಕಡಮಕಲ್ಲು ಭಾಗಕ್ಕೆ ಈ ಹರಳು ಕಲ್ಲು ಬಹಳ ಸುಲಭವಾಗಿ ಹೋಗುತ್ತದೆ. ಮಡಿಕೇರಿಯಿಂದ ಹೋಗಬೇಕಾದರೆ ಕೇವಲ 18 ಕಿ.ಮೀ. ಆಗುತ್ತದೆ. ಕೊಡಗು ಜಿಲ್ಲೆಯಲ್ಲಿ ಈಗ ನಾವು ಸುತ್ತು ಹಾಕಿ ಬರಬೇಕೆಂದರೆ 110 ಕಿ.ಮೀ. ಆಗುತ್ತದೆ. ಇದು ಅರಣ್ಯ ಇಲಾಖೆಯವರು ಯಾವ ರೀತಿಯಲ್ಲಿ smuggling activiesಗೆ support ಮಾಡುತ್ತಿದ್ದಾರೆನ್ನುವುದಕ್ಕೆ ಒಂದು ಉದಾಹರಣೆ. ಎಲ್ಲಾ ರಾಜ್ಯದ ಭಾಗಗಳಲ್ಲಿ ಇದು ನಡೆಯುತ್ತಿರಬಹುದು.

ಮತ್ತೊಂದು ವಿಚಾರ ಭೇಟಿಯಾಡುವುದು, ಈ ವಿಷಯ ಇರಲಿ. ಭೇಟೆಯಾಡುವುದನ್ನು ಇವರೇನು ತಪ್ಪಿಸುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾನೂನುಗಳು ಇದೆ. ನಾನು ಭೇಟಿ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ.

ಸನ್ಮಾನ್ಯ ಅಧ್ಯಕ್ಷರೆ, ಇವರ ಬೆಂಕಿ ವ್ಯವಸ್ಥೆಗಳು ಹೇಗಿದೆಯೆಂದರೆ ನಾಗರಹೊಳೆ ಅಭಯಾರಣ್ಯ ಈಗ tiger reservoir ಆಗಿದೆ. ಪ್ರತಿ ವರ್ಷ ಅಲ್ಲಿ ಬೆಂಕಿ ಬೀಳುತ್ತದೆ. 2012ನೇ ಇಸವಿಯಲ್ಲಿ ನಾಗರಹೊಳೆಗೆ ಬೆಂಕಿ ಇತ್ತು. ಇವರ್ಯಾರೋ ವ್ಯವಸ್ಥಿತವಾಗಿ ಹೇಗೆ ಬೆಂಕಿ ಹಾಕುತ್ತಾರೆನ್ನುವುದಕ್ಕೆ ಉದಾಹರಣೆಯನ್ನು ನಾನು ಕೊಡುತ್ತೇನೆ. ಕ್ಯಾಲಿಫೋರ್ನಿಯಾದಲ್ಲಿರುವಂಥ ನನ್ನ ಬಂಧುಗಳು ನನಗೆ ಫೋನ್ ಮಾಡಿ ಹೇಳುತ್ತಾರೆ, ನಿಮ್ಮ ನಾಗರಹೊಳಗೆ ಬೆಂಕಿ ಬಿದ್ದಿದೆಯಲ್ಲ, websiteನಲ್ಲಿ ತೋರಿಸುತ್ತಿದ್ದಾರೆ ಎಂದು. ಆಗ ನಾನು immediate ಆಗಿ Wild Life Chiefರವರಿಗೆ ಫೋನ್ ಮಾಡಿ ಹೇಳಿದೆ. ಅವರಿಗೆ ಬೆಂಕಿ ಬಿದ್ದಿರುವ ವಿಚಾರ ಗೊತ್ತೇ ಇಲ್ಲ. ಅಮೇರಿಕಾದ websiteನಲ್ಲಿ ಬೆಂಕಿ ಬಿದ್ದಿರುವ ಬಗ್ಗೆ ತೋರಿಸುತ್ತಾರೆ. ಅದೇ ನಿಮ್ಮ ಬೆಂಗಳೂರಿನಲ್ಲಿ ಕುಳಿತುಕೊಂಡಿರುವ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಗೊತ್ತಿಲ್ಲ. ಮತ್ತೆ ಅರ್ಧ ಗಂಟೆ ಆದ ನಂತರ ಅವರಿಂದ ಒಂದು message ಬರುತ್ತದೆ. ಅಲ್ಲಿ ಬೆಂಕಿ ಬಿದ್ದಿದೆ, ಅಲ್ಲಿ ಒಬ್ಬರು retired dismissed RFO ಇದ್ದಾರೆ, ಅವರು ಅರಣ್ಯ ರಕ್ಷಣೆಯ ಹೆಸರಿನಲ್ಲಿ ವಿಧೇಶಿ ಹಣ ಹೊಡೆಯುವ ಕೆಲಸ ಮಾಡುತ್ತಿದ್ದಾರೆ. I have allowed 200 people to enter into the wild life area to extinguish the fire ಎಂದು ಮೆಸೇಜ್ ಬರುತ್ತದೆ. ಆದರೆ, ಅವರ ಬಳಿ ಇರುವುದು 15 ಜನ, ಇವರು ಸಂದೇಶ ಕಳುಹಿಸುವುದು 200 ಜನ ಎಂದು ಹೇಳುತ್ತಾರೆ. ನಿರಂತರ, ಅಲ್ಲಿಂದ ಮುಂದಿನ ವರ್ಷ... ಸ್ವಲ್ಪ ಇದರ ಬಗ್ಗೆ enquiryಯಾಗಬೇಕು, ತನಿಖೆ ಮಾಡಬೇಕು, ಹೇಗೆ ಬೆಂಕಿ ಬೀಳುತ್ತದೆ? ಪಕ್ಕದಲ್ಲಿ ನಮ್ಮದು, ಬೇರೆಯವರ ಕಾಫಿ ತೋಟಗಳಿದೆ. ಅದಕ್ಕೆ ಬೆಂಕಿ ಬೀಳುವುದಿಲ್ಲ. ಅದೇನು ನಾಗರಹೊಳೆ ಅಭಯಾರಣ್ಯಕ್ಕೆ ಮಾತ್ರ ಬೆಮಕಿ ಬೀಳುವುದು? ಬೇಸಿಗೆಯಲ್ಲಿ ಟ್ರೆಂಚ್ ಹಾಕುವುದು, ಅರಣ್ಯಕ್ಕೆ ಬೆಂಕಿ ಬೀಳದಂತೆ ಅರಣ್ಯ ಇಲಾಖೆ ವತಿಯಿಂದ ಸ್ವಲ್ಪ ಖರ್ಚು ಮಾಡುತ್ತಾರೆ. ಏಕೆ? 2013ರಲ್ಲಿ ಸ್ವಲ್ಪ ಎಚ್ಚರಿಕೆ ವಹಿಸಿದ್ದರಿಂದ ಬೆಂಕಿ ಅವಗಢ ಆಗಲಿಲ್ಲ. ಕಳೆದ ವರ್ಷ 2014ರಲ್ಲಿ ಎಷ್ಟು ಅರಣ್ಯ ನಾಶವಾಗಿದೆ? ನಾಗರಹೊಳೆ ಒಂದೇ ಅಲ್ಲ,

ಕೊಡಗು ಜಿಲ್ಲೆಯಲ್ಲಿ ಎಲ್ಲೆಲ್ಲಿ ಫಾರೆಸ್ಟ್ ಎಂದು ಇದೆ ಅಲ್ಲೆಲ್ಲಾ ಕಡೆ ಬೆಂಕಿ. ಕಾಫಿ ತೋಟಗಳಿಗೆ ಬೆಂಕಿ ತಗಲಿಲ್ಲ, ಅದರ ಪಕ್ಕದಲ್ಲೇ adjacent ಇದೆ, ನಮ್ಮ ತೋಟಗಳನ್ನು ನಾವು ರಕ್ಷಣೆ ಮಾಡಿಕೊಳ್ಳುತ್ತೇವೆ. ನಿಮ್ಮ ಅರಣ್ಯ ಏಕೆ ರಕ್ಷಣೆಯಾಗುತ್ತಿಲ್ಲ? Complete ನಾಶವಾಗಿದೆ ಅಧ್ಯಕ್ಷರೆ, ತಾವು ಹುಣಸೂರಿನಿಂದ ತಿತಿಮತಿಗೆ ಹೋಗುವ ಮಾರ್ಗದಲ್ಲಿ ಎಡಕ್ಕೆ ಮತ್ತು ಬಲಕ್ಕೆ ಒಮ್ಮೆ ಹೋಗಿ ನೋಡಿ. ಯಾವ ರೀತಿಯಲ್ಲಿ ನಾಶವಾಗಿದೆ ಎನ್ನುವುದನ್ನು ನೋಡಿದರೆ ತಿಳಿಯುತ್ತದೆ. ಅಲ್ಲಿ ಟೀಕ್, ಮತ್ತೊಂದು ಬೆಲೆ ಬಾಳುವ ಮರಗಳನ್ನು ನೆಟ್ಟಿದ್ದಾರೆ.

ಅಧ್ಯಕ್ಷರು:– ಗೋಣಿಕೊಪ್ಪಲಿಗೆ ಹೋಗುವ ರಸ್ತೆ.

ಶ್ರೀ ಕೆ.ಜಿ. ಬೋಪಯ್ಯ:– ಹೌದು, ಗೋಣಿಕೊಪ್ಪಲಿಗೆ ಹೋಗುವ ರಸ್ತೆಯ ಎಡ–ಬಲ, 200 ಎಕರೆಯಷ್ಟು ಅರಣ್ಯ ಪ್ರದೇಶಕ್ಕೆ ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು. ಅದನ್ನು ನಂದಿಸಬೇಕಾದರೆ ಇವರಿಗೆ ಬಹಳ ದಿವಸ ಬೇಕಾಗುತ್ತದೆ. ಅಲ್ಲಿ ಇವರಿಗೆ ನೀರಿಗೇನು ಕೊರತೆ? ಈ ಸಲ ಆನೆಗಳ ಹಾವಳಿಯನ್ನು ತಡೆಯುವುದಕ್ಕೋಸ್ಕರ JCS ಸಂಸ್ಥೆಯವರು ಅರಣ್ಯದೊಳಗೆ ಹೋಗಿ ಆನೆಗಳು ತಿನ್ನುವಂಥ soft wood, ಹುರುಳಿ, ಮತ್ತೊಂದು, ಮೇ ತಿಂಗಳಿನಲ್ಲಿ ಮಳೆ ಬಹಳ ಜೋರಾಗಿ ಬಂದಿತು. ಆಗ ಅದನ್ನು ಬಿತ್ತುವುದಕ್ಕೆ ಹೋದರೆ ಅವರಿಗೆ how you entered into the forest? ಎಂದು show-case notice ನೀಡುತ್ತಾರೆ. ಇಲಾಖೆಯವರೂ ಏನು ಮಾಡುವುದಿಲ್ಲ, ಮಾಡುವವರನ್ನು ಬಿಡುವುದಿಲ್ಲ. ಅವರೇನು ಅರಣ್ಯ ಇಲಾಖೆಯವರಿಗೆ information ಕೊಡದೇ ಹೋಗಿಲ್ಲ. Information ಕೊಟ್ಟಿದ್ದಾರೆ. ಪ್ರಾಣಿಗಳ ಉಪಯೋಗಕ್ಕಾಗಿ ನಾವು ಒಂದಿಷ್ಟು ಅದರಲ್ಲಿ ಮರ–ಗಿಡ ನೆಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ, ಹುಲ್ಲು ಹಾಕುತ್ತೇವೆ. ಇಲಾಖೆಯವರು ಅದಕ್ಕೆ ಅವಕಾಶ ಕೊಡುವುದಿಲ್ಲ. ಅವರಿಗೆ ಷೋಕಾಸ್ ನೋಟೀಸ್ ಕೊಡುತ್ತಾರೆ. ಅವರ ಮೇಲೆ ಕೇಸ್ ಹಾಕುವುದಕ್ಕೆ ಇತ್ತು, ಬಹುಶಃ ಒಂದಿಷ್ಟು ಗಟ್ಟಿ ಸ್ವರದಲ್ಲಿ

ಪ್ರತಿಭಟನೆ ಮಾಡುತ್ತೇವೆಂದು ಹೇಳಿದ್ದರಿಂದ ಕೇಸ್ ಹಾಕಿಲ್ಲ. ಇದು ನಿಮ್ಮ ಬೆಂಕಿಯಿಂದ ಅರಣ್ಯವನ್ನು ರಕ್ಷಣೆ ಮಾಡುವ ವ್ಯವಸ್ಥೆ. ಕಳೆದ ಹಿಂದಿನ ವರ್ಷ ಬಿದಿರು ಎಲ್ಲಾ ಕಟ್ಟೆ ಹೋಯಿತು. ನೋಡುವುದಕ್ಕೆ ಆಗುವುದಿಲ್ಲ. ನಾನು PCFನವರಿಗಲ್ಲಾ ಹೇಳಿದೆ. ನೋಡಿ ಆ ಬಿದಿರನ್ನು ಖಾಲಿ ಮಾಡಿಸಬೇಕು. ಅದಕ್ಕೆ ಟೆಂಡರ್ ಹಾಕಿ, ದುಡ್ಡು ಎಷ್ಟು ಬರುತ್ತದೆನ್ನುವ ಪ್ರಶ್ನೆ ಅಲ್ಲ. ಬಿದಿರುಗಳು ಅಲ್ಲಿಗೆ ಹೋಗಬೇಕಾಗುತ್ತದೆ. ಇಲ್ಲದಿದ್ದರೆ frictionalನಿಂದ ಬೆಂಕಿ ಆಗುತ್ತದೆ. ಗಾಳಿ ಬೀಸುವಾಗ frictionalನಲ್ಲಿ ಆಗುತ್ತದೆ. ಅರಣ್ಯ ರಕ್ಷಣೆಯಾಗಬೇಕಾದರೆ ಆ ಬಿದಿರನ್ನೆಲ್ಲಾ ತೆಗೆಯಿರಿ ಎಂದು ಹೇಳಿದೆ. ಇವರು ಬಿದಿರುಗಳನ್ನು ತೆಗೆಯಲಿಲ್ಲ. ತೆಗೆಯುವ ಪ್ರಶ್ನೆಯೇ ಇಲ್ಲ. ನಾವು ಮುಟ್ಟುವಂತೆ ಇಲ್ಲ. ಏಕೆ ಮುಟ್ಟುವಂತೆ ಇಲ್ಲ?

ಈ ವ್ಯವಸ್ಥೆಗಳು ನಿಮ್ಮಲ್ಲಿ ಸರಿಯಾಗಿದೆ ಹೋದರೆ ಬಹುಶಃ ನಿಮ್ಮ ಈ ರಕ್ಷಣೆ ಎಂದು ನೀವು ಏನು ದೊಡ್ಡದಾಗಿ ವರದಿಗಳನ್ನು ನೀಡಿದ್ದೀರಿ, ಅವುಗಳನ್ನು ಓದಿದರೆ ಅಬ್ಬಬ್ಬಾ ಏನು ಕೆಲಸ ಮಾಡುತ್ತಾರೆ? ನಾವೆಲ್ಲಾ we must feel happy. ಅವರಿಗೆಲ್ಲಾ award ಕೊಡಲೇ ಬೇಕು. ಆದರೆ ವಾಸ್ತವಾಂಶ ಬೇರೆಯೇ ಇದೆ. ಬಿಳಿ ಆನೆಗಳನ್ನು ಹೇಗೆ ಸರಿ ಮಾಡುತ್ತೀರಿ? ಸರಿ ಮಾಡಬೇಕಾಗಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, forest ಗೆ ಬೆಂಕಿ ಬಿದ್ದರೆ forest department ನವರಿಗೆ ಗೊತ್ತಾಗುವುದಿಲ್ಲ. At a time 7 ಜಾಗದಲ್ಲಿ ಒಂದೇ ಸಮಯದಲ್ಲಿ ಬೆಂಕಿ ಬೀಳುತ್ತದೆ. ಆದರೆ ಆ ಸುದ್ದಿ ಡೋಂಗಿ ಪರಿಸರವಾದಿಗಳಿಗೆ ಗೊತ್ತಾಗುತ್ತದೆ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದರ ಜೊತೆಗೆ ಡೋಂಗಿ ಪರಿಸರವಾದಿಗಳಿಗೆ ಕೋಟ್ಯಾಂತರ ರೂಪಾಯಿ ಹೊರಗಿನ ಸರ್ಕಾರದಿಂದ ಬಂದಿದೆ. ಅದನ್ನು enquiry ಮಾಡಿದರೇನು? ಏನಾಯಿತು? ಎಲ್ಲಿಗೆ ಹೋಯಿತು? ಯಾರಿಗೆ ಕೊಟ್ಟರು? ಅದನ್ನು ಯಾವುದಕ್ಕೆ ಉಪಯೋಗಿಸಿದರು. ಅದನ್ನು ಅರಣ್ಯ

ಬೆಳೆಸುವುದಕ್ಕೆ ಉಪಯೋಗಿಸಿದರೇನು? ಈ ವಿಚಾರಗಳ ಬಗ್ಗೆಯೂ ಕೂಡ ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ:– ಇದು ಇವರ ಅರಣ್ಯ ರಕ್ಷಣೆಯ ಕಾರ್ಯ ವೈಖರಿ. ಹೀಗಾದರೆ ಅರಣ್ಯ ಉಳಿಯುತ್ತದೆಯೆ? ನಿಮ್ಮ ವರದಿಯಲ್ಲಿದೆ. ಕರ್ನಾಟಕ ಅರಣ್ಯ 43,356.47 ಚ.ಕಿ.ಮೀ ಪ್ರದೇಶದ ಅರಣ್ಯ ಸಂರಕ್ಷಣೆಗೆ ಇದೆ ಎಂದು ಕರ್ನಾಟಕದಲ್ಲಿರುವುದರಲ್ಲಿ ಒಟ್ಟು 43,356 ಚ.ಕ.ಮೀ. ಅರಣ್ಯ. ಅದರಲ್ಲಿ ಬೇರೆಬೇರೆ. ಇದರಲ್ಲಿ ಬಹಳ ವಿಶೇಷವೆಂದರೆ 10,024. ಚ.ಕಿ.ಮೀ. deemed forest ಎಂದು ಇದೆ. ನಾನು ನೇರವಾಗಿ ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ. ಈ deemed forest ಎನ್ನುವುದು ಏನು? ಆ Forest Act ನಲ್ಲಿ ಎಲ್ಲಿದೆ? ನಿಮಗೆ deemed forest ಎಂದು ಹೆಸರು ಕೊಟ್ಟವರು ಯಾರು? ನಿಮಗೆ ಅಧಿಕಾರ ಕೊಟ್ಟವರು ಯಾರು? What is the meaning of deemed forest? ನಾನು ನಿಮ್ಮ ವರದಿಯನ್ನು ನೋಡಿದೆ. ಅದರಲ್ಲಿ "If some tree growth is there, that is deemed forest" ಎಂದು ಇದೆ. Deemed forest ಎಂದು ಹೇಳುವುದಕ್ಕೆ dictionary meaning ಏನು? ಗೋಮವರ್ದನ್ ಕೇಸ್ ನಲ್ಲಿ ಎಲ್ಲೂ deemed forest ಎಂದು ಹೇಳಿಲ್. You consider. ಈಗ deemed forest ಎಂದು ಹೇಳಿ ನೀವು ಒಂದಿಷ್ಟು list ಕೂಡ ಕೊಟ್ಟಿದ್ದೀರಿ.

ಅಧ್ಯಕ್ಷರು:– ಎಷ್ಟನೆ ಪೇಜ್?

ಶ್ರೀ ಕೆ.ಜಿ. ಬೋಪಯ್ಯ:– Page No. 1 ನಲ್ಲಿ ಸರ್. ಪ್ರಸ್ತಾವನೆ. ಅದರಲ್ಲಿಯೇ ಹಾಕಿದ್ದಾರೆ. 10,024 ಚ.ಕಿ.ಮೀ deemed forest ಎಂದು ಗುರುತಿಸಲಾಗಿದ್ದು, ಅದರಲ್ಲಿ ಕರ್ನಾಟಕದ ಅರಣ್ಯ ಕಾಯಿದೆ section, ಪ್ರಸ್ತಾವನೆಗೊಂಡ ಪ್ರದೇಶ ಬೆಟ್ಟ, ಭೂಮಿ, ಬಾನೆ... ಬಾನೆ, ಇದು ನಾನು ಹೊಸದಾಗಿ ಕೇಳುತ್ತಿದ್ದೇನೆ. ಬಾನೆ ಎಂದರೇನು? ನಿಮ್ಮ ತುಳು ಭಾಷೆಯಲ್ಲಿ ಏನಾದರೂ ಹಾಕಿಸಿದ್ದೀರಾ? ನನಗಂತೂ ಗೊತ್ತಿಲ್ಲ. ಕಾಣೆ ಬೇರೆ.

ಜುಮ್ಮಾಮಲೈ, ಖಾನಾ, ಖಾನೆ ಎಂದು ನಿಮ್ಮ ಊರಿನಲ್ಲಿರುವುದು ನನಗೆ ಗೊತ್ತು. ಖಾನಾ, ಬಾನಾ ಏನು ಅಧ್ಯಕ್ಷರೆ ಇವು? ಅಲ್ಲಿಂದ ಕುಮ್ಕಿ, ಪೈಸಾರಿ, ಅಮೃತ ಮಹಲ್‌ಕಾವಲ್, ಖರಾಬ್ ಭೂಮಿ, ಬೇರೆ ಬೇರೆ ಇನಾಮ್ ಭೂಮಿ ದಟ್ಟವಾದ ಮರಗಳು... ಅದನ್ನು ಬಿಟ್ಟು ಪುನಃ ದಟ್ಟವಾದ ಮರಗಳನ್ನು ಹೊಂದಿರುವ ಪ್ರದೇಶ. ಅದು ಯಾವುದು? ಅದಕ್ಕೇನು ಹೆಸರಿಲ್ಲವೇನು? ಈ ರೀತಿ ಎಲ್ಲಾ ಇವರು ಕೋಷ್ಟಕ–1 ರಲ್ಲಿ ಹೇಳುತ್ತಾ ಹೋಗಿದ್ದಾರೆ. ಯಾವುದು–ಯಾವುದು ಬರುತ್ತದೆಂದು ಕೊಟ್ಟಿದ್ದಾರೆ. ಆದರೆ, ನೀವು Supreme Court ಹೇಳಿದೆ.... Supreme Court ಹೇಳಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ.

ಅಧ್ಯಕ್ಷರು:– Section 4 ನಲ್ಲಿ ಇದೆಯೆ ಇದು?

ಶ್ರೀ ಕೆ.ಜಿ. ಬೋಪಯ್ಯ:– ನಾನು ಹೇಳುತ್ತೇನೆ ಅಧ್ಯಕ್ಷರೆ, ಈಗ ಯಾವುದೇ Supreme Court direction ಪ್ರಕಾರ ಮಾಡಬೇಕಾದರೆ, ಆ Forest Act ಇದೆಯಲ್ಲ, ಯಾವುದೇ ಭಾಗವನ್ನು forest ಎಂದು ಗುರುತು ಮಾಡಬೇಕಾದರೆ ಸೆಕ್ಷನ್ 4 ರ ಪ್ರಕಾರ first notification ಕೊಡಬೇಕು. Notification ಕೊಟ್ಟ ನಂತರ section 5 ಪ್ರಕಾರ Settlement Officer ಆಗಬೇಕು. He has to survey. 5 to 16ರವರೆಗೆ what are the procedures ಎನ್ನುವುದು ಬಹಳ clear ಆಗಿ ಇದೆ. ಅದು ಯಾವುದನ್ನೂ ನೀವು follow ಮಾಡಿಲ್ಲ. ನಾನು ನಿಮ್ಮ ವರದಿಯಲ್ಲಿ ನೋಡಿದೆ. ಚಿಕ್ಕಮಗಳೂರಿನಲ್ಲಿ . . . ಬಹುಶಃ ಅದರ ವಿವರಗಳಿಗೆ ಮಾನ್ಯ ವರದಿಯಲ್ಲಿ ನೋಡಿದೆ. ಚಿಕ್ಕಮಗಳೂರಿನಲ್ಲಿ . . . ಬಹುಶಃ ಅದರ ವಿವರಗಳಿಗೆ ಮಾನ್ಯ ಜೀವರಾಜ್ ರವರು ಹೋಗಬಹುದು. ಚಿಕ್ಕಮಗಳೂರಿನಲ್ಲಿ deemed forest ಎಂದು ಯಾವಾಗ ಯಾವಾಗ notification ಆಗಿದೆ ಎಂಬುದನ್ನು ಹಾಕಿದ್ದೀರಿ. ಅದು ಹೇಗೆ ಸಾಧ್ಯ? Merely ಒಂದು notification ಮಾಡಿದರೆ ಅದು forest ಏನು? Rest of the procedure follow ಮಾಡಬೇಡವೇನು? ಇದನ್ನು

ಮಾಡದೆ ನಿಮ್ಮ ವರದಿಯಲ್ಲಿ ಇವೆಲ್ಲವೂ deemed forest ಎಂದು ಕೊಟ್ಟಿದ್ದೀರಲ್ಲ. ಕೊಪ್ಪ ಹಾಕಿದ್ದೀರಿ ಇಲ್ಲಿ. ಇದು ಹೇಗೆ ಸಾಧ್ಯ ಎಂಬುದನ್ನು ಹೇಳಬೇಕು. ಕೊಪ್ಪ, ಚಿಕ್ಕಮಗಳೂರು ಕೋಷ್ಟಕ–1 ಅಧ್ಯಕ್ಷರೆ. ನಾನು details ಗೆ ಹೋಗುವುದಿಲ್ಲ. ಇದನ್ನು explain ಮಾಡಬೇಕು. ಯಾವುದೇ ಒಂದು ಪ್ರದೇಶವನ್ನು forst ಎಂದು ಗುರುತು ಮಾಡಬೇಕಾದರೆ foresrt manual ನಲ್ಲಿ register in the forest department which reflect the ownership of the lands as forest ಇರಬೇಕು. These are the pre-conditions. ಅದು ಇದೆಯೋ, ಅವರ ಬಳಿ ಇಲ್ಲವೋ, ಇದ್ದರೆ ತಾವು ಹಾಜರು ಮಾಡಿ. ಸುಮ್ಮನೆ ಅಲ್ಲಿ ಯಾರೋ ಒಬ್ಬನ land records ಗೆಂದು ಹೊಸದಾಗಿ create ಮಾಡಿ nuisance . . . ನಮ್ಮಲ್ಲಿ CCF ಆಗಿ ಇದ್ದರು. Record ಅನ್ನು ತಿದ್ದಿದ್ದಾರೆ. Record ತಿದ್ದುವ ಕೆಲಸವನ್ನೂ ಮಾಡಿದ್ದಾರೆ. Land records ಎಂದು ಮಾಡಿದ್ದಾರಲ್ಲ, ಆ ಅಧಿಕಾರಿ ಇಡೀ ಜನಕ್ಕೆ ತೊಂದರೆ ಕೊಡುತ್ತಾರೆಂದು ಅವರನ್ನು ಬದಲಾವಣೆ ಮಾಡಿ ಎಂದು ಹೇಳಿದೆ. ಅವರನ್ನು ಕೇಳಿ. ಅದರ ಪ್ರಕಾರ register of reserved forest book ಬೇಕು. Register of forest book, divisional forest note book, divisional forest reference map, map ಒಂದನ್ನು ಇಟ್ಟುಕೊಂಡಿದ್ದಾರೆ. ಅದನ್ನು ನೋಡಿದರೆ ಯಾವುದೋ, ಏನೋ ನಮಗೆ ಗೊತ್ತಿಲ್ಲ. ಆಮೇಲೆ State forest Atlas. Is is compulsory under Forest code 1976 as per Form No.3 Rule 17 of the Karnataka Forest Rules 1969. ಇದೆಯೆ? ನೀವು ಉತ್ತರದಲ್ಲಿ ಇವೆಲ್ಲದಕ್ಕೂ ನನಗೆ ಉತ್ತರ ಬೇಕು. ಖಂಡಿತಾ ಇಲ್ಲ. ನಾನು verify ಮಾಡಿಸಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಅಂತೂ ಇಲ್ಲ. ಜಾರ್ಜ್ ರವರು ನನ್ನನ್ನು ನೋಡುತ್ತಿದ್ದಾರೆ, ಕೊಡಗಿನಲ್ಲಿ ಹೇಗಿದೆ ಎಂದು ಅವರಿಗೆ ಸ್ವಲ್ಪ ಅನುಭವ ಇದೆ. ಈ ರೀತಿಯ ವ್ಯವಸ್ಥೆಗಳನ್ನು ಇಟ್ಟುಕೊಂಡು ಇವರು ಮಾಡುವುದನ್ನು ನಾವು ನೋಡುತ್ತೇವೆ. ಈ deemed forest ಎಂದೇನು ತಾವು list ಕೊಟ್ಟಿದ್ದೀರಿ, ಇವೆಲ್ಲವೂ ಕಾನೂನು ಬಾಹಿರ. Without following the procedure, section (4) to section (17) how can you declare as deemed forest? Definition ಇಲ್ಲ. ಆ deemed forest

ಎನ್ನುವುದು ಎಲ್ಲಾ definetions Forest Act ನಲ್ಲಿದೆ. Section(2) ಪ್ರಕಾರ ಏನೇನು forest, ಎಲ್ಲವೂ definition ನಲ್ಲಿದೆ. Deemed forest ಅನ್ನು ಒಂದು ಸಾರಿ ತೋರಿಸಿ ಬಿಡಿ. ಹೋಗಲಿ, Supreme court ನಿಂದ ಬಂದಿದೆ. ಒಂದು amendment ತನ್ನಿ, ಚರ್ಚೆಯಾದರೂ ಮಾಡೋಣ. ಇದೇನೂ ಇಲ್ಲದೆ deemed forest ಎಂದು ನೀವು ಹಾಕಿಕೊಂಡರೆ...

ಶ್ರೀ ಪ್ರಮೋದ್ ಮಧ್ವರಾಜ್:- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಪಂಚಾಯತ್ ಕಾಡು ಎಂದು ಹಾಕಿದ್ದಾರೆ. ಅದು ಏನೆಂದು ನನಗೆ ಸ್ವಲ್ಪ ಮಾಹಿತಿ ಬೇಕು.

ಶ್ರೀ ಕೆ.ಜಿ. ಬೋಪಯ್ಯ:- ಅದೆಲ್ಲಾ definition ನಲ್ಲಿದೆ. Protected forest, ಆಮೇಲೆ reserved forest ಇವೆಲ್ಲವನ್ನೂ ಹಾಕಿದ್ದಾರೆ. ಪಂಚಾಯತ್ forest ಎಂತಲೂ... ಸಾಮಾಜಿಕ ಅರಣ್ಯ, ಒಂದಿಷ್ಟು ಇದೆ. District forest, ಮತ್ತೊಂದು ಎಲ್ಲಾ ಫಾರೆಸ್ಟ್. ನಂತರ ಈ ರೀತಿ ಕಾನೂನು ಬಾಹಿರವಾಗಿ ಯಾವುದೋ ಒಂದು judgment ಇದೆ. ಮಾತೆತ್ತಿದರೆ Supreme Court judgment. ನಾವೇನೂ ಮಾಡುವಂತಿಲ್ಲ. ಹೆದರಿಸುವುದು ಬೇರೆ.

ಅಧ್ಯಕ್ಷರು:- ಆ judgment ಏನೆಂದು ಇದೆ?

ಶ್ರೀ ಕೆ.ಜಿ. ಬೋಪಯ್ಯ:- ಅವರಿಗೆ ಬೇಕಾದ್ದನ್ನು ಮಾತ್ರ quote ಮಾಡಿದ್ದಾರೆ. ಅದರಲ್ಲಿಯೂ ಅಂತಹ ಬಾರಿ ಇವರು ಹೇಳುವಂತೆ ಏನಿಲ್ಲ. ಇವರೇ ಹೇಳಿದ್ದಾರೆ. ಈಗೊಂದು committee ಮಾಡಿದ್ದಾರಲ್ಲ. ಅದಕ್ಕೆ ನಂತರ ಬರುತ್ತೇನೆ. The Hon'ble Supreme Court of India Civil writ petition 202, 1995 Govardan v/s Union of India defined forest and forest land as mentioned in the Forest Conservation Act 1980 vide dated: 12-10.1996 It is emerged at the hearing that there is a misconception in certain quarters about the true scope and Forest Conservation Act 1980 for short the Act and the meaning of the word Forest raised

therein. There is also a resulting misconception about the mead and prior approval of the Central Government as required by Section 2 of the Act in respect of the activeties in the forest which are more often and commercial nature. It is necessary to clarify the position ಎಂದು ಇವರು ಹೇಳಿದ್ದಾರೆ. The forest conservation Act was enacted with a view to check further deforestation which is ultimately results in the ecological imbalance and therefore provisions made there in for the conservation of forest and the matters connected herewith must apply to all forest, irrespective of the nature of the ownership and classification thereof. The word Forest must be understood according to dictionary meaning. This description covers all sstatutorily recognized forest. It this deemed forest is statutorily recognized? ಇದು ನನ್ನ ಪ್ರಶ್ನೆ. Hace they done it? Statutorily recognized means; they must comply section 4 to 17. Have they complied? ಇದು ಆಗದೇ ಸುಪ್ರೀಂ ಕೋರ್ಟ್ ಜಡ್ಜಮೆಂಟ್, ಡಿಕ್ಷನರಿ ಮೀನಿಂಗು ಮತ್ತೊಂದು ಎಂದು ಹೇಳಿ, ಆ ಜಡ್ಜಮೆಂಟ್ ಇಷ್ಟು ದಪ್ಪ ಇದೆ. ಅದನ್ನು ಓದಿ ಅರ್ಥ ಮಾಡಿಕೊಳ್ಳಬೇಕಾದರೆ ನಮಗೆ ಒಂದಿಷ್ಟು ತಾಳ್ಮೆ ಬೇಕು. ನಾನು ಮೊನ್ನೆ.... ಹೋದೆ. ಆದರೆ ಇವರು ಹೇಳುವ ರೀತಿ ಅಲ್ಲಿ ಎಲ್ಲಿಯೂ ಇಲ್ಲ.

ಅಧ್ಯಕ್ಷರು:- Court guided a law. Forest ಅನ್ನುವುದನ್ನು ಒಂದು ಆಕ್ಟ್ ಅಡಿಯಲ್ಲಿ describe ಮಾಡಬೇಕು. Then they must interpreted. ಇವರೇ what is forest ಎಂದು coining out the meaning.

ಶ್ರೀ ಕೆ.ಜಿ. ಬೋಪಯ್ಯ:- ನಾನು ಅದನ್ನೇ ಹೇಳುತ್ತಿರುವುದು. ಇವರು can they do all these....

ಅಧ್ಯಕ್ಷರು:- ನಾನು ಒಂದು ಹೇಳುತ್ತೇನೆ, ಕೇಂದ್ರ ಸರ್ಕಾರದ ಹಣೇಬರಹವೂ ಹಾಗೇ ಆಗಿದೆ, ರಾಜ್ಯ ಸರ್ಕಾರದ ಹಣೇಬರಹವೂ ಹೀಗೇ ಆಗಿದೆ. ಅರಣ್ಯವೆಂದರೆ ನಮ್ಮದೊಂದು ಕಾನೂನು ಇದೆ. ಸ್ಕೇಲ್ 80 ಒಳಗಡೆ

Forest conservation Act ತಂದಿದ್ದಾರೆ, ಅದರೊಳಗೆ ಏನೆಂದು definition ಕೊಟ್ಟಿದ್ದಾರೆ. ಇದು ಹೇಳಿರಲ್ಲ, ಅಲ್ಲಿ ಪಾಪ ಅವನು . . . .

ಶ್ರೀ ಕೆ.ಜಿ. ಬೋಪಯ್ಯ:– ಅದಕ್ಕೆ ನಾನು ಮೊನ್ನೆ ಕೂಡ ಹೇಳಿದೆ. ಇಲ್ಲಿ ಹೇಳಿದ ಹಾಗೆ ಯಾರೋ ಒಂದು ರಿಟ್ ಪಿಟಿಷನ್ ಹಾಕಿ ಬಿಡುವುದು. ಅಲ್ಲಿ ಫಾರೆಸ್ಟ್ ಎಲ್ಲಾ ಒತ್ತುವರಿ ಮಾಡಿ ಬಿಟ್ಟಿದ್ದಾರೆ ಅವರನ್ನು ಖಾಲಿ ಮಾಡಿಸಬೇಕು ಎಂದು ಇತ್ತೀಚಿಗೆ ಒಂದು ಬಂದಿದೆ. ಅದರ ಪ್ರಕಾರ ಇವರು ಮೂಡಿಗೆರೆಯಲ್ಲಿ ಖಾಲಿ ಮಾಡಿಸಿ ಬಿಟ್ಟರು. That judgment is operative for a particular that area. ಅಲ್ಲಿ ಏನೋ ಕೇಳಿದ್ದಾರೆಂದು ಕೊಡಲಾಗಿದೆ. ಅದನ್ನು ಇಡೀ ರಾಜ್ಯಕ್ಕೆ...

ಅಧ್ಯಕ್ಷರು:– ಅದು ಹೀಗಲ್ಲ, ಆ ಲೋಕಲ್ ಆಗಿ ಇಬ್ಬರಿಗೂ ವ್ಯಾಜ್ಯ, ಆ ವ್ಯಾಜ್ಯದಲ್ಲಿ ಒಬ್ಬ ಹೋದ.

ಶ್ರೀ ಕೆ.ಜಿ. ಬೋಪಯ್ಯ:– ಇಬ್ಬರಿಗೆ ಮರದ ವಿಚಾರ (Timber Lobby) ಗಲಾಟೆ. ಅದನ್ನು ತಡೆಯುವ ಕೆಲಸ ಮಾಡುವುದು ಬಿಟ್ಟು ಅಲ್ಲಿ ತಲೆತಲಾಂತರಗಳಿಂದ ಇದ್ದವರನ್ನೆಲ್ಲ ಖಾಲಿ ಮಾಡಿಸಿ ಕೋರ್ಟಿಗೆ ಕೊಡುವುದು. ಮತ್ತೆ ಈಗ ಎಲ್ಲಿಗೆ ತಲುಪಿದ್ದಾರೆ ಎಂದರೆ; We are answerable to the Hon'ble High Court. ಆಯಿತಲ್ಲ. ನಾನು ಅದಕ್ಕೆ ಮೊನ್ನೆ ಹೇಳಿದೆ, ಆಯಿತು he objected for eviction ಎಂದು you can quote my name. ನನ್ನ ಮೇಲೆ contempt ಹಾಕಿ. Let them fight. ಈ ರೀತಿ ನೀವು ಜನರಿಗೆ ತೊಂದರೆ ಕೊಡುವುದಕ್ಕೆ ಅರಣ್ಯ ಕಾಯಿದೆ ಇರುವುದು ಅಂತಾದರೆ, ಇದು ಹೇಗೆ? When he has filed a writ petition, ಅವರು ವಾಸ್ತವಾಂಶವನ್ನು ಕೋರ್ಟ್ ಮುಂದೆ ಹೇಳಬೇಕಲ್ಲವೇ? ಏಕೆ ಹೇಳುವುದಕ್ಕೆ ಆಗಿಲ್ಲ? ಇನಾಂ ಲ್ಯಾಂಡ್, it has not statutorily declared ಎಂದು ಅದನ್ನು ಹೇಳಬೇಕಲ್ಲವೇ.

ಅಧ್ಯಕ್ಷರು:– ಅದು ಏನಾಗಿದೆ, ಎಲ್ಲಾ misguide ಆಗಿರುವುದು. Early stage ನಲ್ಲಿ ಮಾಡಿದ್ದರೆ ಏನೂ ಆಗುತ್ತಿರಲಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೇ ನಾನು ಅದನ್ನು ಒಪ್ಪುತ್ತೇನೆ. ಇದು 1997 ನಿಂದ, ಅದಕ್ಕಿಂತ ಹಿಂದೆನೂ ಇದೆ.

ಶ್ರೀ ಈ ತುಕಾರಾಂ:– ಇದರಲ್ಲಿ 1963ರ ಅರಣ್ಯ ಕಾಯಿದೆ ಯಾರೂ ಪಾಲನೆ ಮಾಡಿಲ್ಲ. ಎಲ್ಲರೂ 1905ರ ನಕ್ಷೆ ಹಿಡಿದುಕೊಂಡು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಅದ್ದರಿಂದ ಇದೆಲ್ಲಾ ಸಮಸ್ಯೆಯಾಗುತ್ತಿರುವುದು ಮಾನ್ಯ ಅಧ್ಯಕ್ಷರೇ. 1905ರ ಹಳೆ ನಕ್ಷೆ ಹಿಡಿದುಕೊಂಡು ಮಾಡುತ್ತಿದ್ದಾರೆ. 1963ರಲ್ಲಿ ಏನಿತ್ತು, ಅದನ್ನೆಲ್ಲಾ ಮಾಡಿ, ಮಾಡಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಈಗ further ಅದರಲ್ಲಿ ಇವರೇ ಹೇಳಿಕೊಂಡಿರುವುದು. The Hon'ble Supreme Court order that each State Government should constitute an expert committee within a month to identify which are the forest, irrespective of the land, so notified, recognized and classified under the law irrespective of the ownership of the land of such forest ಎಂದು ಹೇಳಿದರು. ಆ ಎಲ್ಲಾ ತಜ್ಞರ ಸಮಿತಿ ಮಾಡಿಯಾದ ಮೇಲೆ ಅದನ್ನು ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಿ ಕೊಟ್ಟುಬಿಡುವುದಾ? Statutorily ಏನು ಫಾರೆಸ್ಟ್ ಎಂದು ಹೇಳುವುದು ಎಲ್ಲವಾದ ಮೇಲೆ, ಅಲ್ಲಿ ಸಮಯವನ್ನೂ ಸಹ ತೆಗೆದುಕೊಂಡಿದ್ದಾರೆ. ನಮಗೆ ಸರ್ವೆ ಮಾಡಬೇಕು, ಈ ತರಹ ಕ್ಲಾರಿಫಿಕೇಷನ್ ಆಗಬೇಕೆಂದು ಹೇಳಿ 1997 ರಲ್ಲಿ ಇವರು ತೆಗೆದುಕೊಂಡಿದ್ದಾರೆ. ತೆಗೆದುಕೊಂಡಾದ ಮೇಲೆ ಏನಾದರೂ ಮಾಡಿದರಾ? ಇಲ್ಲ. ತೆಗೆದುಕೊಂಡು ಹೋಗಿ ಸುಪ್ರೀಂ ಕೋರ್ಟಿಗೆ 02.04.1997 ನಲ್ಲಿ affidavit ಹಾಕಿದ್ದೇವೆ ಎಂದು ಸಮಿತಿ ವರದಿಯಲ್ಲಿ ಇವರೇ ಕೊಟ್ಟಿದ್ದಾರೆ. ಹೇಗೆ ಹಾಕಿದಿರಿ? ನಾನು ಯಾರನ್ನೂ ಬೊಟ್ಟು ಮಾಡಿ ಹೇಳುವುದಿಲ್ಲ. ಶ್ರೀ ಬಿ.ಬಿ. ನಿಂಗಯ್ಯನವರು ಈಗ ಅನುಭವಿಸುತ್ತಿದ್ದಾರೆ.

ಅವರು ಅಂದಿನ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ನಿಮ್ಮ ಕ್ಯಾಬಿನೆಟ್ ಗೆ ಇದು ಬಂತೋ, ಇಲ್ಲವೋ ಎಂಬುದು ತಮಗೆ ಗೊತ್ತಿಲ್ಲ. ಯಾಕೆ ಈ ತರಹದ ಉದಾಸೀನ, ಯಾವುದನ್ನೂ ಸರ್ಕಾರದ ಗಮನಕ್ಕೆ ತರುವುದಿಲ್ಲ. ಇವರದ್ದು ಎಷ್ಟರ ಮಟ್ಟಿಗೆ ಎಂದರೆ; ಇವರ ಅರಣ್ಯ ಇಲಾಖೆಗೆ ಪ್ರತ್ಯೇಕ Advocates. ನಮ್ಮ ಸರ್ಕಾರಿ ವಕೀಲರು ಯಾರೂ ಹಾಜರಾಗುವ ಹಾಗಿಲ್ಲ. They won't consult. ನಾನು ಹೇಳಿರುವುದರಲ್ಲಿ ಏನಾದರೂ ತಪ್ಪಿದ್ದರೆ ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ನನಗೆ ಮಾಹಿತಿ ಇರುವಂತೆ They have their own Advocates. What is the reason? ಹಾಗಾದರೆ ಸರ್ಕಾರ ಈ Advocate General, all government pleaders ಇವರೆಲ್ಲಾ ಇದ್ದಾರಲ್ಲ, ಅವರಿಗೇಕೆ ಸಂಬಳ ಕೊಡಬೇಕು? Is this department separate from your government? ಅದಕ್ಕೆ ನಿಮ್ಮ Principal Secretary ಹಾಕಿಲ್ಲವೇನು? ಇವರು ಎಷ್ಟರ ಮಟ್ಟಿಗೆ ಸರ್ವಾಧಿಕಾರ ತೋರಿಸುತ್ತಿದ್ದಾರೆ? ಇದನ್ನು ಸರಿ ಮಾಡಬೇಕಾಗುತ್ತದೆ. ಸರಿ ಮಾಡಬೇಕಾದರೆ, ಅವರೇನು we are superior ಅಂತ ಹೇಳುತ್ತಾರೆ, ಅದನ್ನು ಬಿಡಬೇಕು. ಇದರಲ್ಲಿ ಕಂದಾಯ ಇಲಾಖೆಯವರದ್ದು ತಪ್ಪಿದೆ. ಲ್ಯಾಂಡ್ ಅನ್ನುವಂತದ್ದು, the owner of the land is Revenue Department. Unless the Revenue Department handover it to forest, any land, it will not become forest. Section-17 final notification by the Dy. Commissioner of the Concerned place. Not by the forest department. ಇಷ್ಟಿದ್ದರೂ ಕೂಡಾ ನೀವು ಏನಾದರೂ ರೆವಿನ್ಯೂ ಇಲಾಖೆಯ consent ತೆಗೆದುಕೊಂಡಿದ್ದೀರಾ? Deemed forest list ಮಾಡುವಾಗ, ಅವರನ್ನು consult ಮಾಡಿದ್ದೀರಾ? Expert Committee-1 ಆಯಿತು. ಅಷ್ಟು ಹೊತ್ತಿಗೆ ಏನಾಯಿತು ಎಂದರೆ ಆ Expert committee ಯಲ್ಲಿ ಎಲ್ಲವನ್ನೂ ಸೇರಿಸಿದ್ದೀರಿ. ಕೊನೆಗೆ ಇದಾಯಿತೆಂದು ಮತ್ತೆ Expert Committee-2 ಎಂದು ಮಾಡಿ, ಅಲ್ಲಿ ಸ್ವಲ್ಪ delete ಮಾಡಿದರು. Plantation ಕೆಲವೊಂದನ್ನು ಮಾಡಿ ಇನ್ನೊಂದು ಅಫಿಡವಿಟ್ ಕೊಟ್ಟಿದ್ದಾರೆ. ಅದರಲ್ಲಿಯೂ

ಕೂಡ ಏನೂ ಕೇಳುವುದಕ್ಕೆ ಹೋಗಿಲ್ಲ. 2002 ರಲ್ಲಿ ಕೊಟ್ಟಿದ್ದಾರೆ. ಎಲ್ಲವೂ ಅವರಿಷ್ಟವೇ. ಇದನ್ನು ಕೂಡ ನಾವು ಅನುಭವಿಸುತ್ತಿದ್ದೇವೆ.

ಅಧ್ಯಕ್ಷರು:– ಅವರನ್ನೇ ದೂಷಿಸಿ ಪ್ರಯೋಜನವಿಲ್ಲ. ಅದಕ್ಕೆ ಒಬ್ಬರು ಮುಖ್ಯಮಂತ್ರಿ ಎಂದು ಸರ್ಕಾರದ ಹೆಡ್ ಇರುತ್ತಾರೆ. ಅದಕ್ಕೊಬ್ಬ ಅರಣ್ಯ ಸಚಿವರು ಎಂದು ಇರುತ್ತಾರೆ. ಅವರಿಗೆ ನಿಮ್ಮ ಹೃದಯದಲ್ಲಿ ಹೊಕ್ಕಿದೆಯಲ್ಲ...

ಶ್ರೀ ಕೆ.ಜಿ. ಬೋಪಯ್ಯ:– ಅವರಿಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು:– ಈಗ ನಿಮ್ಮ ಹೃದಯದಲ್ಲಿ ಹೊಕ್ಕಿದೆ.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್):– Forest Department ನವರು misguide ಮಾಡಿ ಬಿಡುತ್ತಾರೆ. ಇದು ಹಾಗೆ ಸರ್, ಇದು ಹೀಗೆ ಸರ್ ಎಂದು misguide ಮಾಡಿ ಮಂತ್ರಿಗಳಿಂದ ಸಹಿ ಹಾಕಿಸುವ ಕೆಲಸವನ್ನು ಕೂಡಾ ಮಾಡುತ್ತಾರೆ.

ಶ್ರೀ ಈ. ತುಕಾರಾಂ:– ಇಲ್ಲ ಅಧ್ಯಕ್ಷರೆ, ಇದು ಬಹಳ ಸೀರಿಯಸ್ ಆಗಿ, ನಿಜವಾಗಿ ಹೇಳಬೇಕೆಂದರೆ, ಅರಣ್ಯ ಸಚಿವರಿಗೆ ನಾವು ಫೋನ್ ಮಾಡುವಾಗ ಹೇಗೆ ನಡೆದುಕೊಳ್ಳುತ್ತಾರೆಂದರೆ, ಯಾವ ಎಂ.ಎಲ್.ಎ ಯಾರು ಹೇಳಿದರೂ ಕೇಳುವುದಿಲ್ಲ. ಸುಪ್ರೀಂಕೋರ್ಟ್ order ಇದೆ, ನಮ್ಮ ಮ್ಯಾಪ್ ಇದೆ. ಕಂದಾಯ ಇಲಾಖೆಯ ಮೇಲೆ ಮಾತನಾಡಬೇಕಾದರೆ ಅದೆಲ್ಲಾ ಪಟ್ಟಿ ಗಿಟ್ಟಿ ಏನಿಲ್ಲ, ನಮ್ಮ ಮ್ಯಾಪ್ ಪ್ರಕಾರ ಇದೆ, ಒಕ್ಕಲೆಬ್ಬಿಸುತ್ತೇವೆ, ನೀನು ಏನು ಮಾಡಿಕೊಳ್ಳುತ್ತೀಯೋ ಮಾಡಿಕೊ ಹೋಗು ಎಂದು ಕೆಟ್ಟದಾಗಿ ಮಾತನಾಡಿದ್ದಾರೆ ಅಧ್ಯಕ್ಷರೆ, ಹೇಗೆಂದರೆ ರಾಕ್ಷಸ ರೂಪದಲ್ಲಿ ನಮ್ಮ ಸಂಡೂರಿನಲ್ಲಿ ನಡೆದಿದೆ ನಾವು ಹೇಳಿಕೊಳ್ಳಬಾರದು, ನಾವು ಮಾತನಾಡುವಾಗ ಮಾತನಾಡಿಬಿಡುತ್ತೇವೆ, ಇಂಥ ದುಸ್ಥಿತಿಗಳನ್ನು ನಾವು face ಮಾಡಿದ್ದೇವೆ. ತಾವು ಹೇಳಿದ್ದು ಸತ್ಯವಿದೆ. ಮುಖ್ಯಮಂತ್ರಿಗಳಿದ್ದಾರೆ, ಅರಣ್ಯ ಮಂತ್ರಿಗಳಿದ್ದಾರೆ,

ಎಲ್ಲಾ ಇದ್ದಾರೆ ಅವರೂ ಕೂಡ ನಮ್ಮ ದೇಶದ ಜನ ಅವರೂ ಸಹ ಇದನ್ನು ತಿಳಿದುಕೊಳ್ಳಬೇಕು.

ಅಧ್ಯಕ್ಷರು:- ಅದೇನಾಗಿದೆ ಎಂದರೆ ಇವರು ಬಂದಂಥ ಪ್ರದೇಶದಲ್ಲಿ ಈ ಅರಣ್ಯದ ಸಮಸ್ಯೆ ಇಲ್ಲ. ಇಲ್ಲಿ ಕುಳಿತಿದ್ದಾರೆ ನೋಡಿ ಅವರು ಅರಣ್ಯದ ಮಧ್ಯದಲ್ಲಿದ್ದಾರೆ, ಅವರು ಬಾಯಿ ಬಿಡುವುದಿಲ್ಲ. ಅದಕ್ಕೆ ಹೀಗಾಗಿದೆ, ರವಿಯವರೆ, ನಿಮ್ಮ ಸರ್ಕಾರವು ಅರ್ಧ ಕೆಡಿಸಿ ಹೋಗಿದೆ.

ಶ್ರೀ ಈ. ತುಕಾರಾಂ:- ಅಧ್ಯಕ್ಷರೆ, ಅದಕ್ಕೋಸ್ಕರ ತಾವು ಅಧ್ಯಕ್ಷ ಸ್ಥಾನದಲ್ಲಿದ್ದೀರಿ, ಈ issue... ಅನ್ನು ಬಗೆಹರಿಸಬೇಕು.

ಅಧ್ಯಕ್ಷರು:- ಓ.ಕೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ:- ಈ ಸರ್ಕಾರ ಕೆಡಿಸಿದೆ, ಆ ಸರ್ಕಾರ ಕೆಡಿಸಿದೆ ಎಂದರೆ ಅದನ್ನು ಸುಧಾರಿಸುವುದು ಯಾವಾಗ ಸರ್?

ಅಧ್ಯಕ್ಷರು:- ಈಗಲಾದರೂ ಸುಧಾರಿಸೋಣ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ:- ನಿಮ್ಮ ಅಧ್ಯಕ್ಷತೆಯೊಳಗಾದರೂ ದಯಮಾಡಿ ಸುಧಾರಿಸಿ.

ಅಧ್ಯಕ್ಷರು:- ಈಗ ಮಾಡೋಣ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ನಾನು ಸ್ಪಷ್ಟವಾಗಿ ಹೇಳಿದ್ದೇನೆ ಅಧ್ಯಕ್ಷರೆ, ನಾನು ಈ ಸರ್ಕಾರವನ್ನು ನಿಮ್ಮನ್ನು ಬಯ್ಯುವುದಿಲ್ಲ. ನಿಮ್ಮ ಕಾಳಜಿ ಬಗ್ಗೆ ಆಕ್ಷೇಪ ಮಾಡುವುದಿಲ್ಲ.

ಶ್ರೀ ಅರಬೈಲು ಶಿವರಾಂ ಹೆಬ್ಬಾರ್:– ಅಧ್ಯಕ್ಷರೆ, ಅರಣ್ಯ ಇಲಾಖೆ ಸಮಸ್ಯೆ ತಮಗೆ ಗೊತ್ತಿದೆ. ತಾವು ಆ ಅಧ್ಯಕ್ಷ ಕುಳಿತಾಗ ಈ ಸಮಸ್ಯೆಗೆ ಏನಾದರೂ ಪರಿಹಾರ ಕಾಣಬೇಕು. ಈ ಸಮಸ್ಯೆ ಬಗ್ಗೆ ಸಂಪೂರ್ಣ ಕಲ್ಪನೆ ನಿಮಗಿದೆ.

ಶ್ರೀ ವೈ.ಎನ್. ರುದ್ರೇಶಗೌಡ:– ಅಧ್ಯಕ್ಷರೆ, deemed forest ನಲ್ಲಿ ಎಲ್ಲಾ ಒಕ್ಕಲೆಬ್ಬಿಸಿ ಆಗಿ ಹೋಗಿದೆ. ಇನ್ನು landless people ಒಕ್ಕಲೆಬ್ಬಿಸಿರುವುದು, ಅವರಿಗೆ ಜಮೀನು ಇಲ್ಲ, ಅವರನ್ನು ಒಕ್ಕಲೆಬ್ಬಿಸಿ ಏನೂ ಇಲ್ಲದಂತೆ ಮಾಡಿದ್ದಾರೆ.

ಶ್ರೀ ಪ್ರಮೋದ ಮಧ್ವರಾಜ್:– ರಮಾನಾಥ ರೈರವರು ಅಧಿಕಾರಿಗಳ ಮಾತನ್ನು ಕೇಳಿದರೆ ಇನ್ನು ಸುಧಾರಿಸಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ಮತ್ತೇ ಸಚಿವರು ಯಾರ ಮಾತನ್ನು ಕೇಳಬೇಕು?

ಶ್ರೀ ಕೆ.ಜಿ. ಬೋಪಯ್ಯ:– ಸತ್ಯವಿದೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ:– ಅಧ್ಯಕ್ಷರೆ, ಈ ಪುಸ್ತಕವನ್ನು ಅಧಿಕಾರಿಗಳು ಬರೆದಿರುವುದು, ರಮಾನಾಥ ರೈರವರು ಬರೆದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ನಾವೆಲ್ಲರೂ ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಸನ್ಮಾನ್ಯ ಅರಣ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಅವನು ಕಂದಾಯ ಮಂತ್ರಿಗಳಾಗಿದ್ದರೆ ಸಮಸ್ಯೆ ಇತ್ಯರ್ಥವಾಗುತ್ತಿತ್ತು. Forest ನಿಂದ ಏನೂ ಆಗುವುದಿಲ್ಲ. They have no right at all on this land.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):- ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಒಂದು ಸಮಸ್ಯೆ. ಈ ಬಾರಿ ನಾವು ಕ್ಯಾಬಿನೆಟ್‌ನಲ್ಲಿ deemed forest ಬಗ್ಗೆ ಯಾವುವು forest nature ಇಲ್ಲದಂಥ ಪ್ರದೇಶಗಳಿವೆ, ಅದನ್ನು ವಿರಹಿತ ಮಾಡಬೇಕು ಎಂದು ತೀರ್ಮಾನ ಮಾಡಿಕೊಂಡು ಕ್ಯಾಬಿನೆಟ್‌ನಲ್ಲಿ ಆರು ತಿಂಗಳು ನಾವು ಅವಧಿಯನ್ನು ಕೇಳಿದ್ದೇವೆ. ನಾವು ವಿಭಾಗೀಯ ಮಟ್ಟದ ಸಮಿತಿ ಜಿಲ್ಲಾ ಮಟ್ಟದ ಸಮಿತಿಗಳು ಈಗಾಗಲೇ ಮಾಡಿದ್ದೇವೆ. ಅವರೆಲ್ಲಾ ಯಾವುದು forest nature ಇಲ್ಲದಂಥ ಪ್ರದೇಶಗಳು, ಏನು ಮೂಲಭೂತ ಸೌಕರ್ಯಗಳ ಅಗತ್ಯವಿರುವಂಥದ್ದು, ಅಗತ್ಯವಾಗಿ ಬೇಕಾಗಿರುವಂಥ ಸ್ಥಳಗಳು ಅದನ್ನು ಮತ್ತೆ ಕ್ಯಾಬಿನೆಟ್‌ನಲ್ಲಿ ತಂದು ನಾವು ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಮಾಡಬೇಕೆಂದು ಹೇಳುವಂಥ ಒಂದು ದೊಡ್ಡ ತೀರ್ಮಾನಕ್ಕೆ ಬಂದಿದ್ದೇವೆ. ಅದನ್ನು ನಾನು ಮತ್ತೆ ಹೇಳುತ್ತೇನೆ. ಅದು ಇನಾಂ ಜಾಗದ ವಿಚಾರ ಇರಬಹುದು, deemed forest ವಿಚಾರ ಇರಬಹುದು, ಇದನ್ನೆಲ್ಲವನ್ನು ಕೂಡ ಬದುಕುವುದು ಕಷ್ಟ ಇರುವಂಥ 1978 ರ ಪೂರ್ವದಲ್ಲಿ ಯಾರು ಕುಳಿತಿದ್ದಾರೆ ಅವರಿಗೆ ಇಂತಿಷ್ಟು ಜಾಗವನ್ನು ಕೊಡತಕ್ಕಂತದ್ದು. 1980 ರ ನಂತರ ಮಂಜೂರಾಗಿರುವ ವಿಚಾರ ಇರಬಹುದು. ಇದಕ್ಕೆಲ್ಲಾ ಒಂದು ಪರಿಹಾರವನ್ನು ಮಾಡಬೇಕೆಂಬ ಒಂದು ಪ್ರಾಮಾಣಿಕ ಮನಸ್ಸು ನಮ್ಮಲ್ಲಿದೆ. ಇದುವರೆಗೆ ಆಗದೇ ಇರುವಂಥ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ, ನಿಮ್ಮೆಲ್ಲರ ಸಹಕಾರದಿಂದ ಮಾಡಲಿಕ್ಕೆ ನಾನು ಮುಕ್ತಮನಸ್ಸಿನಿಂದ ಇದ್ದೇನೆ ಎಂದು ನಿಮ್ಮ ಗಮನಕ್ಕೆ ತರುತ್ತೇನೆ. ಮತ್ತೆ ಮುಂದಕ್ಕೆ ವಿಚಾರಗಳನ್ನು ಹೇಳುತ್ತಾ ಹೋಗಿ. ನಾನು ಅಂತಿಮವಾಗಿ ಇದಕ್ಕೆ ಉತ್ತರವನ್ನು ಹೇಳುತ್ತೇನೆ. ನಾನು ಮಂತ್ರಿ, ಅರಣ್ಯ ಸಂರಕ್ಷಣೆಯ ಮಂತ್ರಿ, ನಾನು ಮಂತ್ರಿ, ವನ್ಯಜೀವಿ ಸಂರಕ್ಷಣೆಯ

ಮಂತ್ರಿ, ನಾನು ಪರಿಸರ ಸಂರಕ್ಷಣಾ ಇಲಾಖೆಯ ಮಂತ್ರಿ, ನಾನು ಒಬ್ಬ custodian ಆಗಿ ಇವತ್ತು ಜಾಗತಿಕವಾಗಿ ನಾವು ಆಲೋಚಿಸಬೇಕೆಂದರೆ ಜಾಗತಿಕ ತಾಪಮಾನ ಜಾಸ್ತಿಯಾಗುವಂಥದ್ದು, ಅರಣ್ಯ ಇರಬೇಕೆನ್ನುವ ಚರ್ಚೆ ಜಗತ್ತಿನಾದ್ಯಂತ ನಡೆಯುವಂತದ್ದು, ಕಾಲಕಾಲಕ್ಕೆ ಮಳೆ ಬೀಳುವಂಥದ್ದು, ಅರಣ್ಯ ಸಮಸ್ಯೆ ಬಗ್ಗೆ ನಾನು ಮಾತನಾಡುವಂಥದ್ದು, ನಮ್ಮಲ್ಲಿ 33% ಅರಣ್ಯ ಇರಬೇಕು, 21% ಅರಣ್ಯ ಇದೆ, ಅದಕ್ಕೆ ಕಾರಣ ಒತ್ತುವರಿ ಮಾತ್ರವಲ್ಲ, ಬೇರೆ ಬೇರೆ ಕಾರಣಗಳಿವೆ, ಬಹುಶಃ ನಮಗೆ ಬಜೆಟ್‌ನಲ್ಲಿ ಸಿಗುವಂಥದ್ದು ಇಷ್ಟು ದೊಡ್ಡ ಬಜೆಟ್‌ನಲ್ಲಿ 1% ಮಾತ್ರ ಅರಣ್ಯ ಇಲಾಖೆಗೆ ಸಿಗುವಂಥದ್ದು. ನನ್ನ ಇಲಾಖೆಗೆ 300 ಕೋಟಿ ರೂಪಾಯಿಗಳ ಅನುದಾನ ಬರುವಂಥದ್ದು. ನೀವು ಕೋಟ್ಯಾಂತರ ರೂಪಾಯಿಗಳನ್ನು ಹಾಳು ಮಾಡಿದ್ದೀರಿ, ಅಲ್ಲಿ ನೆಡುತೋಪು ಮಾಡಿದಿರಿ, ಅಲ್ಲೇನು ಮಾಡಿದಿರಿ ಎಂದು ಜನ ಸುಮ್ಮನೆ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವಂಥದ್ದು, ಈ ಸಮಸ್ಯೆ ನೀವು ಇರುವಾಗಲೂ ಇತ್ತು, ನಿಮ್ಮ ಹಿಂದಿನಿಂದಲೂ ಇತ್ತು, ಬಹಳಷ್ಟು ವರ್ಷಗಳ ಹಿಂದಿನಿಂದಲೂ ಇತ್ತು, ಈ ಸಮಸ್ಯೆ ಏಕೆ ಉಳಿದುಕೊಂಡು ಬಂದಿದೆ ಎನ್ನುವುದು ಸನ್ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂದು ಹೇಳುತ್ತೇನೆ. ಸಮಸ್ಯೆ ಖಂಡಿತ ಇದೆ, ಇಲ್ಲವೆಂದು ಹೇಳುವುದಿಲ್ಲ. ಈ ಸಮಸ್ಯೆ ನಿನ್ನೆ, ಇವತ್ತಿನಿಂದ ಪ್ರಾರಂಭವಾಗಿರುವುದಲ್ಲ. ಆ ಸಮಸ್ಯೆಯನ್ನು ಸಾಕಷ್ಟು ಮಟ್ಟಿಗೆ ಪರಿಹಾರ ಮಾಡಲಿಕ್ಕೆ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆಂದಷ್ಟೇ ಹೇಳಬಯಸುತ್ತೇನೆ, ಮುಂದಕ್ಕೆ ನಾನು ಮಾತನಾಡುವುದಿಲ್ಲ.

ಶ್ರೀ ಸಿ.ಟಿ. ರವಿ:- ಅಧ್ಯಕ್ಷರೆ, ನಮ್ಮಲ್ಲಿ ಮುತ್ತೋಡಿ ಅಭಯಾರಣ್ಯ ಇದೆ, ಅಭೇಧ್ಯವಾಗಿರುವಂಥ ದುರ್ಗಮ ಅರಣ್ಯ, ಅದನ್ನು ಇವರು commercial plantation ನಡೆವುದಕ್ಕೆ ಅದನ್ನು ಕಡಿದು coal ಮಾಡಿ coal

ಅನ್ನು ಊರಿಗೆಲ್ಲಾ ಮಾರಿ, ಕಾಡು ಕಡಿದು ಬೆಂಕಿ ಹಾಕುವುದಕ್ಕೆ ಇವರು ಹರಾಜು ಕರೆಯುವುದು. ಹರಾಜು ಕರೆದು, ಕಾಡು ಕಡಿದು, ಬೆಂಕಿ ಹಾಕಿ, coal ಅನ್ನು ಲೋಡ್‌ಗಟ್ಟಲೆ ತುಂಬಿಸಿ, ಕಳುಹಿಸಿ, teak plantation.... ಚಾರ್ಕೋಲಿಗೆ.... ಸ್ವಾತಂತ್ರ್ಯ ಬಂದ ಮೇಲೆ, ನಾನು ರಮಾನಾಥ ರೈರವರ ಕಾಲದಲ್ಲಿ ಆಗಿದೆ ಎಂದು ಹೇಳುವುದಿಲ್ಲ. ನಾನು ಹೇಳುತ್ತಿರುವುದು.. ರಮಾನಾಥ ರೈ ನಿಮ್ಮ ಕಾಲದಲ್ಲಿ ಅಲ್ಲ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಬಿ. ರಮಾನಾಥ ರೈ:- ನೋಡಿ, ಯಾವ ಕಾಲದಲ್ಲಾದರೂ ಕೂಡ ಹೇಳುವುದಕ್ಕೆ ಎಲ್ಲವೂ ಸುಲಭವಿದೆ, ಬಹುಶಃ ಯಾವ್ಯಾವ ಸಂದರ್ಭದಲ್ಲಿ ಏನೇನು ಆಯಿತು ಎನ್ನುವುದಕ್ಕೆ ಬಹುಶಃ ಈ ಒಂದು ಸದನದಲ್ಲಿ ಎಲ್ಲವನ್ನು ಚರ್ಚೆ ಮಾಡಬೇಕು.

ಅಧ್ಯಕ್ಷರು:- ರವಿಯವರೆ ಏನೆಂದು ಸರಿಯಾಗಿ ಹೇಳುವುದಿಲ್ಲ.

ಶ್ರೀ ಸಿ.ಟಿ. ರವಿ:- ಈಗ forest ಬೆಳೆಸುವುದು ಎಂದರೆ ಟೀಕ್ ಬೆಳೆಸುವುದು ಮತ್ತು ಅಕೇಷಿಯಾ ಹಾಕುವುದಾ?

ಅಧ್ಯಕ್ಷರು:- ಅದು ಬಿಡಿ ಈಗ ಅದೇ ಆಗಿಹೋಗಿದೆ.

ಶ್ರೀ ಸಿ.ಟಿ. ರವಿ:- Natural Forest ಕಡಿದು ಈ ಅರಣ್ಯ ಇಲಾಖೆಯವರು forest ಬೆಳೆಸುವುದು ಎಂದರೆ ನೀವು acacia ಹಾಕುವುದೆಂದರೆ forest ಬೆಳೆಸುವುದೇ?

ಅಧ್ಯಕ್ಷರು:- ಅಲ್ಲ,

ಶ್ರೀ ಬಿ. ರಮಾನಾಥ ರೈ:- ತಾವು ಹೇಳಿದಂತೆ ಆಕೇಷಿಯಾ ಮತ್ತು ನೀಲಗಿರಿ ಗಿಡಗಳನ್ನು ಹಾಕುವುದರಿಂದ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯ ಬಹಳಷ್ಟು ಮಂದಿಯಲ್ಲಿ ಇರಬಹುದು ಆದರೆ ವೈಜ್ಞಾನಿಕವಾಗಿ ಅದರಲ್ಲಿ ಯಾವುದೇ ನಿಖರವಾದ ಮಾಹಿತಿ ಇಲ್ಲ. ಆದರೂ ಕೂಡ ನಾವು

ಸಾಕಷ್ಟು ಕಡೆ ಅಕೇಸಿಯಾ ಮತ್ತು ನೀಲಗಿರಿ ಸಸಿಗಳನ್ನು ನೆಡುವುದಕ್ಕೆ ಇತ್ತೀಚೆಗೆ ನಾವು ಪ್ರೋತ್ಸಾಹವನ್ನು ಮಾಡುತ್ತಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅಧ್ಯಕ್ಷರೇ, Land Revenue Act ನಲ್ಲಿ land ಎಂದರೇನೆಂದು definition ಎಲ್ಲವೂ ಇವೆ. ನಿಮ್ಮ forest act ನಲ್ಲಿ ಇಲ್ಲ. ಇವರು ಮತ್ತೆ ಮತ್ತೆ ಮಾತೆತ್ತಿದ್ದರೆ deemed forest ಎಂದು ಹೇಳುತ್ತಾರೆ. ಆ ಶಬ್ದವನ್ನು ದಯವಿಟ್ಟು ಬಿಡಿ, ಇಲ್ಲವೆ ನಮಗೆ explanation ಬೇಕು. Deemed Forest ಯಾವ forest Act 1963 ರ ಯಾವ ಸೆಕ್ಷನ್‌ನಲ್ಲಿದೆ ಅದನ್ನು ನೀವು ಹೇಳಬೇಕು. ನೀವು ನೋಟಿಫೈ ಮಾಡದೆ ಸುಮ್ಮನೆ deemed forest ಎಂದು ಹೇಳಿಬಿಟ್ಟರೆ ಆಗುವುದಿಲ್ಲ. ಅದನ್ನು ಹೇಳಿ. ಅರಣ್ಯ ನಾಶ ಹೇಗಾಗುತ್ತಿದೆ ಎಂದು ಹೇಳುವುದಕ್ಕೆ ಇವರು ಹಿಂದೆ 1978 ರಲ್ಲಿ Clear felling Order ಇಡೀ ನಮ್ಮ ಜಿಲ್ಲೆಯಲ್ಲಿ forest ಅನ್ನು ಆ ಹುಣಸೂರು plywood ಗೆ ಕೊಟ್ಟು ಐದು ಸಾವಿರ ಎಕರೆ ಪ್ರದೇಶವನ್ನು ನಾಶ ಮಾಡಿದ್ದಾರೆ, ಈಗ ಅದು ನಿಂತು ಹೋಗಿದೆ.

ಅಧ್ಯಕ್ಷರು:– ನಾನೇ 1980 ರಲ್ಲಿ Clear felling ನಿಲ್ಲಿಸಿಬಿಟ್ಟೆವು.

ಶ್ರೀ ಕೆ.ಜಿ. ಬೋಪಯ್ಯ:– ತಾವು ನಿಲ್ಲಿಸಿದ್ದೆಂದು ನನಗೆ ಗೊತ್ತಿಲ್ಲ. ನಾನು ಆಗ student. ಅದನ್ನು ನಿಲ್ಲಿಸಿದ್ದಾರೆ. ಈಗಲೂ ಇವರ ಇಲಾಖೆಯಲ್ಲಿ ಹೇಗಿದೆ ಎಂದರೆ ಇವರ ಕಾರ್ಯಾದಿತರ ಆಯವ್ಯಯ ಅದರಲ್ಲಿ ಅರಣ್ಯ ರಾಜಸ್ವ " 1988 ರ ರಾಷ್ಟ್ರೀಯ ಅರಣ್ಯ ನೀತಿ ಪ್ರಕಾರ ಅರಣ್ಯ ಇಲಾಖೆಯನ್ನು ಒಂದು ಆದಾಯ ಗಳಿಕೆಯ ಇಲಾಖೆಯಿಂದ ಪರಿಗಣಿಸಲು ಆಗುತ್ತಿಲ್ಲ. 1988ರ ರಾಷ್ಟ್ರೀಯ ಅರಣ್ಯ ನೀತಿ ಪ್ರಕಾರ ಅರಣ್ಯ ಇಲಾಖೆಯನ್ನು ಆದಾಯ ಗಳಿಕೆಯ ಇಲಾಖೆಯೆಂದು ಪರಿಗಣಿಸಲಾಗುತ್ತಿಲ್ಲ. ಕರ್ನಾಟಕ

ಸರ್ಕಾರವು 1990 ರಲ್ಲಿಯೇ ಅರಣ್ಯದಲ್ಲಿ ಹಸಿರು ಮರ ಕಡಿಯುವುದನ್ನು ನಿಷೇಧಿಸಿದೆ. ಇದರ ಪರಿಣಾಮವಾಗಿ ಇಲಾಖೆಯು ಒಣಗಿದ ಮತ್ತು ಬಿದ್ದ ಮರಗಳನ್ನು, ಒಣಗಿದ ಮತ್ತು ಹೂ ಬಿಟ್ಟ ಬಿದಿರನ್ನು ಮೇದಾರ ಜನರಿಗೆ ಕೊಡುವುದು. ಇವರು ಇಲ್ಲಿ ಈ ಮರ ತೆಗೆಯುವುದಕ್ಕೆ dead and fallen tree ಅದನ್ನು ಫಾರೆಸ್ಟ್‌ನಿಂದ ತೆಗೆಯುವುದನ್ನು ನಿಲ್ಲಿಸಿದ್ದೀರ? ನನ್ನ ಒಂದೇ ಒಂದು ಪ್ರಶ್ನೆ ಈ ಫಾರೆಸ್ಟ್‌ನೊಳಗೆ ಮರ ಸಾಯುತ್ತಲೇ ಇರುತ್ತದೆಯೆ? ಅಥವಾ ಮರ ಬೀಳುತ್ತಲೇ ಇರುತ್ತದೆಯೇ? ಅದು ಹೇಗೆ? ನಮ್ಮಲ್ಲಿಯೂ ಕಾಫಿ ತೋಟಗಳಿವೆ. ಮರ ಬೀಳುವುದಿಲ್ಲವೆಂದು ಹೇಳುವುದಿಲ್ಲ, ಎಲ್ಲೋ ಒಂದೆರಡು ಮರಗಳು ಬೀಳುತ್ತವೆ. ಆದರೆ ನಿಮ್ಮ dead and fallen tree ಏಕೆ, ಈಗಲೂ ಅದನ್ನು, ನಿಮಗೆ ನಿಜವಾಗಿ ಅರಣ್ಯದ ಬಗ್ಗೆ ಕಾಳಜಿಯಿದ್ದರೆ ಆ ಫಾರೆಸ್ಟ್ ಒಳಗಿರುವಂಥ ಯಾವುದೇ ಟೈಪ್ ಮರವನ್ನು ಮುಟ್ಟುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:– ಈಗಲೂ ಅದು ಇದೆ.

ಶ್ರೀ ಕೆ.ಜಿ. ಬೋಪಯ್ಯ:– ಅದನ್ನು ನಿಲ್ಲಿಸಬೇಕಲ್ಲ ಅಧ್ಯಕ್ಷರೆ,

ಅಧ್ಯಕ್ಷರು:– ಹೌದೌದು.

ಶ್ರೀ ಕೆ.ಜಿ. ಬೋಪಯ್ಯ:– ಇವತ್ತು ಅದರ ದುರುಪಯೋಗವಾಗುತ್ತಿದೆ. ಫಾರೆಸ್ಟ್‌ನೊಳಗೆ ನುಗ್ಗುವುದು ಕಡಿಯುವುದು. ಒಂದು ಮರ ಕಡಿದಾಗ ಇಪ್ಪತ್ತೈದು ಮರಗಳು ಬೀಳುತ್ತವೆ. ಇವರಿಗೆ dead and fallen tree ಏನೆಂದರೆ it is dead and fallen ಎನ್ನುತ್ತಾರೆ. ಮರ ಸಾಯುತ್ತದೆಯೆ? ಒಂದು ಮರದ ಆಯಸ್ಸು ಎಷ್ಟಿದೆ ಎನ್ನುವುದು ಗೊತ್ತಿರುವಂಥದ್ದೇ ಆಗಿದೆ. ಇದರ ದುರುಪಯೋಗವಾಗುತ್ತಿದೆ. ರಾಜಸ್ವದಲ್ಲಿ ಕೊಟ್ಟುಬಿಡುತ್ತಾರೆ. ನಾನು 2006 ರಲ್ಲಿಯೂ ಕೂಡ ಈ ಬಗ್ಗೆ ಹೇಳಿದ್ದೆ. ಈ dead and fallen trees ಎಂದು ಹೇಳಿ ತೆಗೆಯುವಂಥದ್ದು ನಿಮ್ಮದೇನಿದೆ ಅದನ್ನು ಮೊದಲು ತೆಗೆದುಹಾಕಿ. ರಕ್ಷಿತ ಅರಣ್ಯ ಎಂದರೆ ಅದರೊಳಗೆ ಯಾರೂ ಹೋಗಬಾರದು. ನಮ್ಮಲ್ಲಿ

ದೇವರ ಕಾಡು ಎಂದಿದೆ. ಪ್ರತಿ ಗ್ರಾಮದಲ್ಲಿಯೂ ಇದೆ. ಇವರ 33% ಫಾರೆಸ್ಟ್ ಬೇಕು ನಿಮ್ಮ ಉಷ್ಣ ಇನ್ನೊಂದು ಎಂದು ಹೇಳುತ್ತೀರಲ್ಲ, ಅದನ್ನು ನಮ್ಮ ಪೂರ್ವಜರು ಬೆಳೆಸಿಕೊಂಡು ಬಂದಿದ್ದಾರೆ. ಆ ರೀತಿ ದೇವರ ಕಾಡು ಎಂದಿತ್ತು. ಆ ದೇವರ ಕಾಡನ್ನು ಹೇಗೆ ಊರಿನವರು ರಕ್ಷಣೆ ಮಾಡಿಕೊಂಡು ಬಂದಿದ್ದಾರೆಂದರೆ, ಅದರೊಳಗೆ ಯಾರೂ ಪ್ರವೇಶ ಮಾಡುವುದಿಲ್ಲ. ರೆವಿನ್ಯು ಅಥವಾ ಊರಿನವರ ಹಕ್ಕಿನಲ್ಲಿರುವಾಗ ಅದರೊಳಗೆ ಯಾರೂ ಪ್ರವೇಶ ಮಾಡುತ್ತಿರಲಿಲ್ಲ. ಒಂದು ತರಹ ಭಕ್ತಿ. ದೇವರ ಕಾಡಿನೊಳಗೆ ಯಾರೂ ಹೋಗಬಾರದು ಮತ್ತು ಅಲ್ಲಿ ಮರಗಿಡಗಳನ್ನು ಯಾರೂ ಮುಟ್ಟಬಾರದು ಎಂದು ಭಕ್ತಿಯಿತ್ತು. ಆದರೆ ನೀವು 1997 ರಲ್ಲಿ ಅದನ್ನು deemed forest ಮಾಡಿದ್ದೀರಿ. ಎಲ್ಲವನ್ನು ಅರಣ್ಯ ಇಲಾಖೆಗೆ ಕೊಟ್ಟುಬಿಟ್ಟಿದ್ದೀರಿ. ಈಗ ಎಲ್ಲವನ್ನು ಕೊಟ್ಟಿರುವುದರಿಂದ ಈಗ ಅವರದ್ದೇನು ಕೆಲಸವೆಂದರೆ ಅಲ್ಲೊಂದು ದೊಡ್ಡಾಗಿ ಬೋರ್ಡ್ ಹಾಕಿ ಅರಣ್ಯ ಇಲಾಖೆಗೆ ಸೇರಿದ ಸ್ವತ್ತು ಎಂದು ಹಾಕಿದ್ದಾರಷ್ಟೆ. ಈಗ ಅಲ್ಲಿ ಊರಿನವರು ಹೋಗುವುದಕ್ಕೆ ಆಗುವುದಿಲ್ಲ ಮತ್ತು ಬೇರೆ ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಸರ್ವನಾಶ ದೇವರ ಕಾಡುಗಳು. ಇವರದ್ದು ಎಷ್ಟರಮಟ್ಟಿಗಿದೆಯೆಂದರೆ ಇಡೀ ನಮ್ಮ ಜಿಲ್ಲೆಯಲ್ಲಿರುವಂಥ ಎಲ್ಲ ದೇವರ ಕಾಡುಗಳನ್ನು ಲಿಸ್ಟ್ ಮಾಡಿ deemed forest ಎಂದು ಕೊಟ್ಟುಬಿಟ್ಟಿದ್ದಾರೆ. ಕೊಡಗು ಪೂರ್ತಿ deemed forest. ಇನ್ನು ನಮಗೆ ಉಳಿದದ್ದು ಏನೂ ಇಲ್ಲ. ಬೇರೆ ಜಿಲ್ಲೆಯ ಪರಿಸ್ಥಿತಿ ಹೇಗೆ ಎಂದು ನನಗೆ ಗೊತ್ತಿಲ್ಲ. ಇದರ ಪರಿಣಾಮ ಏನಾಗಿದೆಯೆಂದರೆ, ಹಿಂದಿನ ಸರ್ಕಾರ ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ಸಾಕಷ್ಟು ದುಡ್ಡನ್ನು ಕೊಟ್ಟಿತು. ಈ ದೇವಸ್ಥಾನಗಳಿಗೆ D.C. ಯವರು ದುಡ್ಡನ್ನು ಕೊಡಬೇಕಲ್ಲ, ದುಡ್ಡನ್ನು ಕೊಡಬೇಕೆಂದರೆ ಅರಣ್ಯ ಇಲಾಖೆಯಿಂದ NOC ತೆಗೆದುಕೊಂಡು ಬನ್ನಿ ಎಂದಿದ್ದಾರೆ. ಆ ದೇವಸ್ಥಾನ 500 ವರ್ಷಗಳಿಗೂ ಹಳೆಯದಾಗಿದ್ದು ಅದಕ್ಕೂ ಹೆಚ್ಚಿನ ವರ್ಷಗಳು ಎಷ್ಟೆಂದು ನಮಗೇ ಗೊತ್ತಿಲ್ಲ. N.O.C. ಕೇಳುತ್ತಾರೆ. ಯಾರು ನೀವು ಸೂಪೀರಿಯರ್ ಆಗಿದ್ದೀರೋ, ಅರಣ್ಯ ಇಲಾಖೆಯವರು ಸೂಪೀರಿಯರ್ ಆಗಿದ್ದಾರೋ ಅಥವಾ ಕಂದಾಯ ಇಲಾಖೆಯವರು

ಸೂಪೀರಿಯರ್ ಆಗಿದ್ದಾರೋ ನನಗಂತೂ ಅರ್ಥವಾಗುವುದಿಲ್ಲ. ಆದರೆ ಅದನ್ನು ನಿಲ್ಲಿಸಿದ್ದೇನೆ, ಅದು ಬೇರೆ ವಿಷಯ. ಈ ರೀತಿ ದೇವರ ಕಾಡನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಊರಿನವರಿಗೆ ಕಿರುಕುಳ ಕೊಡುವುದಕ್ಕೋಸ್ಕರವೆ? ನಾಳೆ ನೀವು ಆ ದೇವಸ್ಥಾನಕ್ಕೆ ಹೋಗಬಾರದು ಎಂದು ಹೇಲುತ್ತೀರಿ. ಇದು ಸರಿಯೆ? ಇದಕ್ಕೋಸ್ಕರ deemed forest ಎಂದು ಹೆಸರನ್ನು ಹಾಕಿಕೊಂಡು ಮಾಡಿದ್ದೀರಲ್ಲ. ಆದರೆ ಇಡೀ ಕೊಡಗು ಜಿಲ್ಲೆಯದ್ದನ್ನು ಈ ರೀತಿ ಮಾಡಿದ್ದೀರಲ್ಲ, ಇದು ಏಕೆ? ಇಂಥ ಅಧಿಕಾರಿಗಳು ಹೇಳುತ್ತಾರಲ್ಲ, ಅದನ್ನು ಬಿಟ್ಟುಬಿಡಿ. ಊರಿನವರ ರಕ್ಷಣೆಗೆ ಬಿಡಿ. ರಕ್ಷಣೆಗೆ ಬಿಡಿ. ರಕ್ಷಣೆ ಮಾಡಿಕೊಳ್ಳುತ್ತೇವೆ. ನಮ್ಮ ಊರಿನಲ್ಲಿ ಇವತ್ತಿಗೂ ರಕ್ಷಣೆ ಮಡಿಕೊಂಡಿದ್ದೇವೆ. ಯಾರನ್ನೂ ಬಿಡುವುದಿಲ್ಲ. ಅದರೊಳಗೆ No entry. ನೀವು ಅದಕ್ಕಾಗಿ ಆ ಊರಿನವರಿಗೆ ಹೇಳಿ, ಇದು ನಿಮ್ಮ ಊರಿಗೆ ಸೇರಿದ ಜಾಗ, ನೀವು ರಕ್ಷಣೆ ಮಾಡಿ ಎಂದು ಅವರಿಗೆ ಅಧಕಾರವನ್ನು ಕೊಡಿ. ಅದನ್ನು ಯಾರನ್ನೋ ಬಿಟ್ಟು ಭಾಗಮಂಡಲ ತಲಕಾವೇರಿಗೆ ಹೋಗುವಾಗ ಅರಣ್ಯ ಬೆಳೆಸಿ ಎಂದು ಹೇಳಿ ಎಲ್ಲ ಖಾಸಗಿ ಜಮೀನಿನವರು ಬೋರ್ಡ್ ಹಾಕುವುದಕ್ಕೆ ಬಿಟ್ಟುಕೊಟ್ಟಿದ್ದಾರೆ. ಅದು ಜುಮ್ಮಾ ಲ್ಯಾಂಡ್ಸ್. ಇಲ್ಲೊಬ್ಬರು ಹಿಂದಿನ ಸರ್ಕಾರದಲ್ಲಿ ಒಬ್ಬ ಅಧ್ಯಕ್ಷನಿದ್ದ. ಆ ಅಧ್ಯಕ್ಷ ತಲಕಾವೇರಿಗೆ ಹೋದಾಗ ಬೋರ್ಡ್‌ನ್ನು ನೋಡಿ ಆ ಮನೆಯನ್ನೆಲ್ಲ eviction ಮಾಡಿರೆಂದ. ಈ ರೀತಿ ಮಾತನಾಡುವವರಿದ್ದರೆ ಅರಣ್ಯ ಹೇಗೆ ಉಳಿಸಬಹುದು. ಇದು ಸರಿಯಲ್ಲ. ಇಡೀ ಕೊಡಗು ಜಿಲ್ಲೆಯದ್ದು ಈ ರೀತಿಯಾಗಿದೆ. ಇನ್ನೂ ಏನೂ ಉಳಿದಿಲ್ಲ ನಮಗೆ. ಇನ್ನು ಕಾಫಿ ತೋಟದಲ್ಲಿ ಬೆಳೆದಿರುವ ಮರಗಳ ಬಗ್ಗೆ ಹೇಳುತ್ತೇನೆ. ನೀವು ನಿಮ್ಮ ನೋಟಿಫಿಕೇಶನ್‌ನಲ್ಲಿ ಏನು ಹೇಳಿದ್ದೀರೆಂದರೆ minimum 50 trees ಇದ್ದರೆ ಅದೆಲ್ಲ deemed forest ಎಂದು ಹೇಳಿದ್ದೀರಿ. ನಮ್ಮ ಕಾಫಿ ತೋಟದಲ್ಲಿ ಒಂದು ಎಕರೆಯಲ್ಲಿ ಕನಿಷ್ಟ 400 ಮರಗಳು ಇರುತ್ತವೆ. ಆದರೆ 300 ಮರಗಳಿಗಿಂತ ಕಡಿಮೆ ಇರುವುದಿಲ್ಲ. ಹೀಗಾದರೆ ನಮ್ಮ ಗತಿಯೇನು? ಕಾಫಿ ತೋಟದೊಳಗೆ ನಾವು ಆ ಮರಗಳನ್ನು ಬೆಳೆಸಿದ್ದೇ ತಪ್ಪೆ? ನೀವು ಇದನ್ನು deemed forest ಎಂದು ಹೇಳುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೀರಲ್ಲ,

ಹೇಗೆ ಇದು deemed forest ಆಗುತ್ತದೆ? ಇಂಥದ್ದು ಬಹುಶಃ ಎಷ್ಟಿದೆ? ಅದರ ಜೊತೆಗೆ ಇನ್ನೊಂದು ಬಹಳ ಮುಖ್ಯವಾಗಿರುವಂಥದ್ದು C & D lands, C & D lands ಎಂದರೆ ಏನು ಎಂದು ನಿಮ್ಮ ಅರಣ್ಯ ಇಲಾಖೆಯ ದಾಖಲೆಯಲ್ಲಿ ಏನಾದರೂ definition ಇದೆಯೆ? C & D lands ಬಗ್ಗೆ ಕಂದಾಯ ಇಲಾಖೆಯ definition ನಲ್ಲಿದೆ. ಹೀಗಿರುವಾಗ ಇದನ್ನು ನೀವು ಹೇಗೆ ನಮ್ಮದು ಎಂದು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ. ಇಲ್ಲೊಂದು ಸರ್ಕಾರಿ ಆದೇಶವಿದೆ. ಕರ್ನಾಟಕ ಸರ್ಕಾರದ ನಡೆವಳಿಗಳು, ಲ್ಯಾಂಡ್ ಬ್ಯಾಂಕ್ ನಿರ್ಮಾಣದ ಸಲುವಾಗಿ ಅರಣ್ಯ ಇಲಾಖೆಗೆ 2.58 ಲಕ್ಷ ಹೆಕ್ಟೇರ್ C&D ಜಮೀನನ್ನು ಕಂದಾಯ ಇಲಾಖೆಯಿಂದ ವರ್ಗಾಯಿಸುವ ಬಗ್ಗೆ, ಓದಲಾಗಿದೆ, ಸರ್ಕಾರದ ಆದೇಶ ಸಂಖ್ಯೆ 106/ಎಲ್‌ಪಿಜಿ 88/ದಿನಾಂಕ 07-06-1993, ಮೇಲೆ ಓದಲಾದ ಆದೇಶದಲ್ಲಿ 2.58 ಲಕ್ಷ ಹೆಕ್ಟೇರ್ C&D ವರ್ಗದ ಜಮೀನುಗಳನ್ನು ಈ ಕೆಳಗಿನ ಷರತ್ತುಗಳ ಮೇರೆಗೆ ಅರಣ್ಯ ಇಲಾಖೆಗೆ ಲ್ಯಾಂಡ್ ಬ್ಯಾಂಕ್ ನಿರ್ಮಿಸುವ ಸಲುವಾಗಿ ವರ್ಗಾಯಿಸಲು ಆದೇಶ ನೀಡಲಾಗಿತ್ತು. ಲ್ಯಾಂಡ್ ಬ್ಯಾಂಕ್ ಎಂದು ಹೇಳಿರುವುದನ್ನು ನಾನು ಟ್ರಸ್ಟ್ ಮಾಡುತ್ತೇನೆ. ಸಾರ್ವಜನಿಕ ಉದ್ದೇಶಕ್ಕೆ ಸರ್ಕಾರಿ ಜಮೀನು ಅವಶ್ಯವಿದ್ದಲ್ಲಿ ಕಂದಾಯ ಇಲಾಖೆಯು ಈ ಲ್ಯಾಂಡ್ ಬ್ಯಾಂಕಿನಿಂದ ಜಮೀನನ್ನು ವಾಪಸ್ಸು ತೆಗೆದುಕೊಳ್ಳಬಹುದಾಗಿದೆ. ವರ್ಗಾವಣೆಯಾದ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳಾಗಿ ಮುಂದುವರಿಸಬೇಕಾಗಿದ್ದು ಇವುಗಳನ್ನು ಅರಣ್ಯ ಕಾಯಿದೆಯಡಿ ಕಾಯ್ದಿರಿಸಿದ ಅರಣ್ಯ ಎಂಬುದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದು. ಈ ಜಮೀನಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ನಿರ್ಧಿಷ್ಟವಾದ ಆದೇಶಗಳನ್ನು ಹೊರಡಿಸುವ ಬಗ್ಗೆ, ತಾಲ್ಲೂಕು, ಗ್ರಾಮ, ಸರ್ವೆ ಮತ್ತು ವಿಸ್ತೀರ್ಣದ ಬಗ್ಗೆ ವಿವರಣೆಯನ್ನು ನೀಡಬೇಕಾಗುತ್ತದೆ. ಇಷ್ಟು ಸ್ಪಷ್ಟವಾಗಿದೆ. ಮತ್ತೆ ಅದರಲ್ಲಿ ಬೇರೆ ಬೇರೆ ಅಂಶಗಳು ಇವೆ. ಗಣಿಗಾರಿಕೆಗೆ alternate forest conservation section 2 ಪ್ರಕಾರ, ,

ಅಧ್ಯಕ್ಷರು:- ಇದಕ್ಕೂ subsequently ಒಂದು ತಿದ್ದುಪಡಿಯಾಯಿತು. ಈ ಬಗರ್‌ಹುಕುಂನಲ್ಲಿ 94 ಡಿ, ಎ ಮಾಡಿದೆವಲ್ಲ, ಆಗ ಏನು ಹೇಳಿತ್ತೆಂದರೆ actual forest ಬೆಳೆದಿದ್ದರೆ ಅದನ್ನು ಬಿಟ್ಟು ಉಳಿದಿದ್ದನ್ನು ವಾಪಸ್ ರೆವಿನ್ಯು ಇಲಾಖೆಗೆ ಕೊಡಬೇಕೆನ್ನಲಾಗಿತ್ತು.

ಶ್ರೀ ಕೆ.ಜಿ. ಬೋಪಯ್ಯ:- ಅದನ್ನು ಕೊಡಲಿ. ಆದರೆ ಇವತ್ತು ಇವರು entire C and D lands ಅನ್ನು deemed forest ಎಂದು ಹೇಗೆ ಹೇಳುತ್ತಾರೆ. ಹೀಗಾದರೆ ಈ ಸರ್ಕಾರಿ ಆದೇಶಕ್ಕೆ ಏನು ಬೆಲೆಯಿಲ್ಲವೆ? ನಿಮಗೆ ಅಧಿಸೂಚನೆ ಹೊರಡಿಸಬಾರದೆಂದು clear cut direction ಇದ್ದರೂ ಕೂಡ ನೀವು ಅದನ್ನು ಉಲ್ಲಂಘನೆ ಮಾಡಿ ಇವತ್ತು deemed forest ಎಂದು ಏನು ಹೇಳುತ್ತಿದ್ದೀರಿ ಯಾರು ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೋ ಆತ ಎಷ್ಟು ದೊಡ್ಡ ಅಧಿಕಾರಿಯೇ ಆಗಿರಬಹುದು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸರ್ಕಾರಕ್ಕೆ misguide ಮಾಡಿ ಈ ರೀತಿಯ ಆದೇಶಗಳನ್ನು ಮಾಡಿಸಿಕೊಳ್ಳುವುದಾದರೆ, ಇದೆಲ್ಲವನ್ನೂ ಮುಚ್ಚಿಹಾಕಿ ಮಾಡಿಸಿಕೊಳ್ಳುವುದಾದರೆ ಇದು ಹೇಗೆ? ನೀವು ಅದನ್ನು ಕಂಡುಹಿಡಿಯಬೇಕು. ಯಾರಲ್ಲಿ ಕುಳಿತುಕೊಂಡು ಅರಣ್ಯ ಭವನದಲ್ಲಿ ಬಿಳಿಯಾನೆಗಳ ರೀತಿಯಲ್ಲಿ ಇದ್ದಾರಲ್ಲ, ಎಂಟ್ಹತ್ತು, ಹದಿನೈದು ಜನರು ಕೆಲಸವಿಲ್ಲದೆ ಇದ್ದಾರಲ್ಲ, ಅವರನ್ನೆಲ್ಲ ಕಳುಹಿಸಿ ಸ್ವಲ್ಪ ಅರಣ್ಯಕ್ಕೆ. ಈಗ ಮಳೆಗಾಲದಲ್ಲಿ ನಮ್ಮ ಊರಿಗೆ ಅಥವಾ ಮಲೆನಾಡಿನ ಭಾಗಕ್ಕೆ ಹೋಗಲಿ, ಆ ಅರಣ್ಯ ಕದಿಯುವುದನ್ನು ನೋಡಿದಾಗ ಕಾಲಿಗೆ ಒಂದಷ್ಟು ಜಿಗಣೆಗಳೆಲ್ಲಾ ಅವರಿಗೆ ಕಚ್ಚಲಿ. ಆಗ ಅವರಿಗೆ ಗೊತ್ತಾಗುತ್ತದೆ ಕಷ್ಟವೇನೆಂದು. ಅರಣ್ಯದೊಳಗೆ ಇರುವ ಆ ಗ್ರಾಮದಲ್ಲಿ ಜನರು ಹೇಗೆ ವಾಸ ಮಾಡುತ್ತಾರೆ ಎಂದು ಇಲ್ಲಿರುವ ಅರಣ್ಯ ಭವನದೊಳಗೆ ಕುಳಿತುಕೊಂಡು ಕೇಳುವುದಲ್ಲ. ಅಲ್ಲಿಗೇ ಹೋಗಿ ನೋಡಲಿ. ಇಲ್ಲಿರುವ Chief Wildlife warden ಗೆ ಇಲ್ಲೇನು ಕೆಲಸ? ಇಲ್ಲಿ ಹುಲಿಗಳು, ಆನೆಗಳು ಇವೆಯೇ? ಅಲ್ಲಿಗೆ ಕಳುಹಿಸಿ. ಆನೆ ಏನಾದರೂ ಗಲಾಟೆ ಮಾಡಿದರೆ ನಾವ್ಯಾರು ಅಲ್ಲಿಗೆ ಹೋಗುವ ಹಾಗೆ ಇಲ್ಲ. ಮೊನ್ನೆ ನಮ್ಮ ಶನಿವಾರದ ದಿವಸ,

ಅಲ್ಲಿ ಸಾಯೋದು ಯಾರೆಂದರೆ, ಈ ಆನೆಗಳಿಗೆ ಅದೂ ಗೊತ್ತಿದೆ. ಭಾರೀ ಶ್ರೀಮಂತರು ಅಂತವರನ್ನು ಮುಟ್ಟುವುದಿಲ್ಲ. ಎಲ್ಲಾ ಬಡವರನ್ನು ಕಾರ್ಮಿಕರನ್ನು ಸಾಯಿಸುತ್ತವೆ.

ಅಧ್ಯಕ್ಷರು:– ಅವು ಏಕೆ ಹಾಗೆ ಮಾಡುತ್ತವೆಂದರೆ ಇವರು ಆನೆ ಬಂದು ಎಂದು ಕೋಲು ಆಡಿಸುತ್ತಾರೆ. ಆನೆ ಉದ್ದೇಶಪೂರ್ವಕವಾಗಿ ಮಾಡುವುದಕ್ಕೆ ಬರುವುದಿಲ್ಲ. ಸುಮ್ಮನೆ ನಿಂತುಕೊಂಡರೆ ಅವುಗಳು ಏನೂ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಪಾಪ ಅವನು ಕೂಲಿ ಕಾರ್ಮಿಕ, ಏನೂ ಮಾಡಿಲ್ಲ.

ಅಧ್ಯಕ್ಷರು:– ಆನೆ ಬಂತು ಎಂದು ಅಲ್ಲಿ ಬಿದ್ದಿದಂತಹ ಒಂದು ಕೋಲು ತೆಗೆದುಕೊಂಡು ಹುಷ್, ಹುಷ್ ಎಂದು ದೂರ ಮಾಡುವುದಕ್ಕೆ ಹೋಗಿದ್ದಾನೆ.

ಶ್ರೀ ಕೆ.ಜಿ. ಬೋಪಯ್ಯ:– ಅವನು ಸುಮ್ಮನೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ.

ಅಧ್ಯಕ್ಷರು:– ಇಲ್ಲ, ಅವುಗಳೂ ಏನೂ ಮಾಡುವುದಿಲ್ಲ, ಮನುಷ್ಯರನ್ನು ಕಂಡಕೂಡಲೇ ಸುಮ್ಮನೆ ನಿಂತುಕೊಂಡು ಬಿಡುತ್ತವೆ.

ಶ್ರೀ ಕೆ.ಜಿ. ಬೋಪಯ್ಯ:– ಅದು ಬರುವುದು ಗೊತ್ತೇ ಅಗುವುದಿಲ್ಲ. ತೋಟದಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾಗ ಆನೆ ಬಂದು ಮೆಟ್ಟಿದೆ. ನಾವೇನಾದರೂ ಅಲ್ಲಿ ಹೋಗಿ ಸಾಂತ್ವನ ಹೇಳುವುದು, ಈ ರೀತಿ ಆಗಿರುವುದಕ್ಕೆ ಪರಿಹಾರ ಕೊಡಿಸುತ್ತೇವೆಂದು ಹೇಳಿದರೆ ಅವರು ನಮಗೆಲ್ಲಾ ಆಡುವಂತಹ ಭಾಷೆಗಳು ಕೇಳುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಅಪ್ಪ, ಅಮ್ಮ ಯಾರನ್ನೂ ಬಿಡುವುದಿಲ್ಲ. ಎಲ್ಲರನ್ನೂ ಸೇರಿಸಿ ಬೈಯ್ದುಬಿಡುತ್ತಾರೆ. ಏನಾಗಿದೆ ಎಂದರೆ ಇವತ್ತೂ ಕೂಡ ನಮ್ಮ ಊರಿನಲ್ಲಿ 40 ಆನೆಗಳಿವೆ. ನಾಲ್ಕು ಬ್ಯಾಚ್ ಮೇಲೆ ಊರು ಜಮೀನಿನಲ್ಲೇ ಸುತ್ತುತ್ತಿರುವುದು. ಅಲ್ಲಿಯೇ ಅವುಗಳಿಗೆ ತಿನ್ನುವುದಕ್ಕೆ ಆಹಾರ ಸಿಗುವುದು, ಹಾಗಾಗಿ ಅಲ್ಲಿಯೇ ಇವೆ. ಈಗ ನಾನು whatsApp ನಲ್ಲಿ ತೋರಿಸಿದೆ. ಒಬ್ಬ ಬೈಕ್‌ನಲ್ಲಿ ಬರುತ್ತಿದ್ದಾನೆ. ಆನೆ ಓಡಿಸಿಕೊಂಡು ಬರುತ್ತಿವೆ. ಒಬ್ಬ ಚರಂಡಿಗೆ ಬಿದ್ದ. ಇನ್ನೊಬ್ಬ . . . .

ಅಧ್ಯಕ್ಷರು:- ಏನಿಲ್ಲ, ಆನೆ ಕಂಡ ತಕ್ಷಣ ಸುಮ್ಮನೆ ನಿಂತುಕೊಂಡು ಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಅವು ಸರಿ ಮಾಡಿ ಬಿಡುತ್ತವೆ. ಈಗ ಅವು ಕಲಿತು ಬಿಟ್ಟವೆ.

ಶ್ರೀ ಸಿ.ಟಿ. ರವಿ:- ಈಗ ಈ ಪ್ರಯೋಗವನ್ನು ಮಾಡುವುದಕ್ಕೆ ನಮ್ಮ ಅರಣ್ಯ ಸಚಿವರನ್ನು ಸಚಿವರನ್ನು ಅರಣ್ಯಕ್ಕೆ ಕಳಿಸೋಣ. ಆಗ ಆನೆ ಓಡಿ ಹೋಗುತ್ತವೋ, ಇವರೇ ಓಡಿ ಹೋಗುತ್ತಾರೋ ನೋಡೋಣ.

ಶ್ರೀ ವಾಸು:- ಮಾನ್ಯ ಅಧ್ಯಕ್ಷರೆ, ಆನೆ ಒಂದು ಬಾರಿ ಮೈಸೂರಿಗೆ ಜನರನ್ನು ಹುಡುಕಿಕೊಂಡು ಬಂದಿತ್ತು. ಪೊಲೀಸ್ ಸ್ಟೇಷನ್ ಮುಂದೆ ಒಬ್ಬ ವಾಚ್‌ಮನ್‌ನನ್ನು ಹಿಡಿಕೊಂಡು ಕೊಂದು ಹಾಕಿತ್ತು. ಆದುದರಿಂದ ಕಾಡಿನಲ್ಲಿರುವ ಆನೆಯಲ್ಲಿ ಅಲ್ಲಿಯೇ ಇಟ್ಟುಕೊಳ್ಳಿ. ಮೈಸೂರಿಗೆ ಏಕೆ ಕಳುಹಿಸುತ್ತೀರಿ?

ಅಧ್ಯಕ್ಷರು:- ಹಾಗಿದ್ದಮೇಲೆ ನೀವು ದಸರಾಕ್ಕೆ ಏಕೆ ಆನೆಯನ್ನು ಕರೆದುಕೊಂಡು ಬರುತ್ತೀರಿ?

ಶ್ರೀ ವಾಸು:- ಇವು ಪಳಗಿಸಿದ, ಸಾಕಿದ ಆನೆ. ಕಾಡಾನೆಗಳನ್ನು ಮೈಸೂರಿಗೆ ಬಿಟ್ಟು ಬಹಳ ತೊಂದರೆಯಾಗಿತ್ತು. ಅವರಿಗೆ ಇನ್ನೂ compensation ಕೊಟ್ಟಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಮೈಸೂರಿಗೆ ಕಾಡಾನೆ ಹೋಗಿ ಕೊಂದಿದ್ದರಿಂದ, ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಯಾವುದಾದರೂ ಕಾಡಾನೆಯಿಂದ ಜನ ಸತ್ತರೆ ಐದು ಲಕ್ಷ ರೂಪಾಯಿ ಪರಿಹಾರ ಕೊಡಬೇಕೆಂದು ಮಾಡಿದರು. ಮೊದಲು ಕೇವಲ ಒಂದು ಲಕ್ಷ ರೂಪಾಯಿ ಇತ್ತು.

ಅಧ್ಯಕ್ಷರು:- ಅದಕ್ಕೆ ಗೊತ್ತಾಗುವುದಿಲ್ಲ, ಮಾತು ಬರುವುದಿಲ್ಲವೆಂದು ಹೇಳಿ ಅದರ ಮೈಮೇಲೆ ಅಂಬಾರಿ ಹೊರಿಸುವುದು. ನಿಮ್ಮ ತಲೆ ಮೇಲೆ ಇಟ್ಟುಕೊಂಡು ಓಡಾಡಿ.

ಶ್ರೀ ವಾಸು:- ಅದು ಕಾಲದಿಂದ ಬಂದಿರುವುದು.

ಅಧ್ಯಕ್ಷರು:- ಆಗ ವಿಜ್ಞಾನ ಬಂದಿರಲಿಲ್ಲ, ಈಗ ವಿಜ್ಞಾನ ಬಂದಿದೆ, ಎಲ್ಲಾ ಕಲಿತುಕೊಳ್ಳಿ. ಪುಟ್ಟಣ್ಣಯ್ಯನವರೆ, ಇದು ವಿಜ್ಞಾನ ಯುಗ ಅಲ್ಲವೇನ್ರಿ? ಈಗ ಒಂದು ಗಂಟೆ ಆಯಿತು, ಹೇಳಿ ಚೆನ್ನಾಗಿ ಮಾತನಾಡುತ್ತೀರಿ.

ಶ್ರೀ ಕೆ.ಜಿ. ಬೋಪಯ್ಯ:- ಇವರು ಇನ್ನೂ ಹೇಗೆ ಎಲ್ಲರ ಹಿಡಿತದಿಂದ ಹೊರಗೆ ಬರಬೇಕೆಂದು ಹೇಳುವುದಕ್ಕೆ land records ಎನ್ನುವುದು ಇವರ ವಾರ್ಷಿಕ ವರದಿಯಲ್ಲಿ ಇಲ್ಲ. ಇವರ ವಾರ್ಷಿಕ ವರದಿಯಲ್ಲಿ ಒಂದು ಪ್ಯಾರಾ ಹಾಕಿಕೊಂಡು ಬಿಟ್ಟಿದ್ದಾರೆ. 'ಭೂದಾಖಲೆ, ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳು, ನನಗೆ ಗೊತ್ತಿದ್ದ ಹಾಗೆ ಎಲ್ಲಾ ಪ್ರಿನ್ಸಿಪಲ್ ಸೆಕ್ರೆಟರಿ, ಸೆಕ್ರೆಟರಿಯೇಟ್ ಆದೇಶ. ಮಾನ್ಯ ಅಧ್ಯಕ್ಷರೆ, ಇದನ್ನೆಲ್ಲಾ ನೋಡಿಕೊಂಡು ಸುಮ್ಮನೆ ಇದ್ದಾರಲ್ಲ.

ಅಧ್ಯಕ್ಷರು:- ನಮ್ಮಲ್ಲಿ ಮಾಡಿರುವುದು, ಇದು ಮೊದಲು ಇತ್ತಾ? ಮೊದಲು ಚೀಫ್ ಸೆಕ್ರೆಟರಿ ಒಬ್ಬರೇ ಇದ್ದರು, ಈಗ ಅಡಿಷನಲ್ ಚೀಫ್ ಸೆಕ್ರೆಟರಿ, ಅವನ ಮೇಲೆ ಇನ್ನೊಬ್ಬರು ಹುಟ್ಟಿದ್ದಾರೆ. ಅವರಿಗೆ ಪ್ರಮೋಷನ್ ಕೊಟ್ಟು ಜಾಗ ಕೊಡಬೇಕಲ್ಲ.

ಶ್ರೀ ಕೆ.ಜಿ. ಬೋಪಯ್ಯ:- ಇವರ ಆದೇಶದಲ್ಲಿ 'ಅರಣ್ಯ ಸಂರಕ್ಷಣೆಯಿಂದ ಭೂ ದಾಖಲೆ ಶಾಖೆಯನ್ನು ಪ್ರತ್ಯೇಕಗೊಳಿಸಿ ಈ ಕೆಳಕಂಡಂತೆ ಕೆಲಸಗಳನ್ನು ನಿರ್ವಹಿಸಲು ಆದೇಶಿಸಿರುತ್ತಾರೆ.'

ಅಧ್ಯಕ್ಷರು:- ಏನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:- ಅರಣ್ಯ ಆದೇಶದಲ್ಲಿ, ಬೆಂಗಳೂರು, ಇವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ 2010ರಲ್ಲಿ ಆಗಿಬಿಟ್ಟಿದೆ. '2004-05, ದಿನಾಂಕ: 26.01.2010ರ ಆದೇಶದಲ್ಲಿ ಅರಣ್ಯ ಸಂರಕ್ಷಣೆಯಿಂದ ಭೂ ದಾಕಲೆ ಶಾಖೆಯನ್ನು ಪ್ರತ್ಯೇಕಗೊಳಿಸಿ' ಎಂದರೆ ಅಲ್ಲಿ ಹೊಸದಾಗಿ ಯಾರೋ ಒಬ್ಬ ಪಿಸಿಸಿಎಫ್ ಕೊಡಬೇಕಾಗಿತ್ತು. 164 ಜನರಿಗೆ ಪೋಸ್ಟ್ ಕ್ರಿಯೇಟ್ ಆಗಬೇಕಲ್ಲ. ಆ ಪೋಸ್ಟ್ ಕ್ರಿಯೇಟ್ ಮಾಡುವುದಕ್ಕೆ ಈ ಕೆಳಕಂಡ ಕೆಲಸಗಳನ್ನು ಆದೇಶಿಸಿರುತ್ತಾರೆ. ಎಲ್ಲಾ ಅವರೇ, ಱಜ ಞಜಚಿಜ ಽ ಕಅಅಈ, 'ಅರಣ್ಯ ಭೂಮಿಯಲ್ಲಾಗಿರುವ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು 63ರ ಕಾಯಿದೆ ಪ್ರಕಾರ ಸೆಕ್ಷನ್ 64(ಎ) ಕ್ರಮ ಜರುಗಿಸಲು ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳಲ್ಲಿ ಸರ್ಕಾರ ಕಂದಾಯ ಇಲಾಖೆಯು ಮಾಡಿರುವ ಅನಧಿಕೃತ ಭೂ ಮಂಜೂರಾತಿಗಳನ್ನು ರದ್ದುಪಡಿಸುವುದು.' ಏನಿದು? ಇದನ್ನೆಲ್ಲಾ ಓದಿಕೊಂಡು ನಾವು ಸುಮ್ಮನಿರಬೇಕೆನ್ನುವುದಾದರೆ....

ಅಧ್ಯಕ್ಷರು:- ಇಲ್ಲ, ಸುಮ್ಮನೆ ಇರಬೇಕೆಂದು ಯಾರು ಹೇಳಿದರು? ಆಚೆಗೆ ಹೋಗಿ ಇನ್‌ಕ್ವಿಲಾಬ್ ಜಿಂದಾಬಾದ್, ಹೇಳಬೇಕು. ಆ ರೀತಿ ಮಾಡಲಿಲ್ಲವೆಂದು ಹೀಗಾಗಿದೆ.

ಶ್ರೀ ಕೆ.ಜಿ. ಬೋಪಯ್ಯ:- ಆಯಿತು, 'ಅರಣ್ಯ ಗುತ್ತಿಗೆಗಳು, KFTC, KSDC, KFC ಹಾಗೂ ಇತರ ನಿಗಮ/ಕಂಪನಿಗಳು ಗುತ್ತಿಗೆ ನೀಡಿರುವ ಅರಣ್ಯ ಜಮೀನಿನ ಗುತ್ತಿಗೆ ಬಾಡಿಗೆ ಹಣ ವಸೂಲಾತಿ, ಗುತ್ತಿಗೆ ದರ ನಿಷ್ಕರ್ಷೆ ಇತ್ಯಾದಿ ಹಾಗೂ ಕ್ವಾರಿ ಗುತ್ತಿಗೆಗಳು, ಏಕಸಾಲಿ ಗುತ್ತಿಗೆಗಳು ಇತರೆ ಅರಣ್ಯಗಳ ಬಾಬ್ತು ಆಡಿಟ್‌ಗಳ ಬಗ್ಗೆ. ಅಲ್ಲಿಂದ ಕುಮ್ಕಿ, ಕಾಣೆ, ಬೆಟ್ಟ, ಆಡಿ,' ಇಲ್ಲಿ ಇವರ ಪುಸ್ತಕದಲ್ಲಿ ಕಾಣೆ ಹೋಗಿ ಕಾನ್ ಮಾಡಿಬಿಟ್ಟಿದ್ದೀರಿ, 'ಕಾನ್, ಸೊಪ್ಪಿನ ಬೆಟ್ಟ,

ಜುಮ್ಮಾ, ಮೊಟಾಸ್ಥಳ ಜಮೀನಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.' ಇವರಿಗೆ ಯಾರು ಅಧಿಕಾರ ಕೊಟ್ಟಿದ್ದು? ರೆವಿನ್ಯೂ ಅಧಿಕಾರವನ್ನು Souo-Moto ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು:– ರೆವಿನ್ಯೂ ಇಲಾಖೆಯವರು ಸುಮ್ಮನೆ ಕುಳಿತಿದ್ದಾರೆ ಅದಕ್ಕೆ.

ಶ್ರೀ ಕೆ.ಜಿ. ಬೋಪಯ್ಯ:– You will face contempt charge ಎಂದು ಅವರಿಗೆ ಹೆದರಿಸುತ್ತಾರೆ.

ಅಧ್ಯಕ್ಷರು:– ಯಾರು ಹೇಳಿದ್ದು?

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಒಂದು ಉದಾಹರಣೆ ಕೊಡುತ್ತೇನೆ. ನಮ್ಮಲ್ಲಿ ಒಂದು ಸಿ ಅಂಡ್ ಡಿ ಲ್ಯಾಂಡ್ ಇತ್ತು. ಅದರ ಆರ್‌ಟಿಸಿ ಚೇಂಜ್ ಮಾಡುವುದಕ್ಕೆ ಬಿಟ್ಟಿರಲಿಲ್ಲ. ಅಲ್ಲಿ ಒಬ್ಬರು Conservatorಅನ್ನು Land Records head ಎಂದು ಮಾಡಿದ್ದಾರೆ. You will face contempt proceedings, you must change forest pysari, C&D land. Forest pysari ಎನ್ನುವ definition forest Actನಲ್ಲಿ ಎಲ್ಲಿದೆ ಎಂದು ಅವನನ್ನು ಕೇಳಿ. ಅದು ಯಾವಾಗ ಬಮತು? ಫಾರಸ್ಟ್ ಪೈಸಾರಿ ಎನ್ನುವುದನ್ನು definition ನಲ್ಲಿ ತೋರಿಸಿ. Section-2 ರ ಪ್ರಕಾರ ಯಾವ್ಯಾವ ಅರಣ್ಯ ಎಂದು ಕೊಟ್ಟಿದ್ದಾರೆ. ಇದನ್ನು ಕೊಟ್ಟಿದ್ದಾರೆ. 'ಅರಣ್ಯ ಜಮೀನುಗಳನ್ನು ಕಂದಾಯ ದಾಖಲಾತಿಗಳಲ್ಲಿ ಇಂಡೀಕರಣ ಮಾಡುವ ವಿಷಯಗಳ ಬಗ್ಗೆ ನಿರ್ವಹಣೆ, ಅರಣ್ಯ ಇಲಾಖೆಯ ವಶದಲ್ಲಿರುವ ಕೆರೆಗಳ ನಿರ್ವಹಣೆ, ಅದನ್ನು ಮಾಡಲಿ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು 2006–07, ಎರಡು ಮತ್ತು ನಿಯಮಗಳು ಅನುಷ್ಠಾನಗೊಳಿಸುವ ಬಗ್ಗೆ' ಎಂದು ಇದೆ. ಇವರು ಹೇಗೆ ಅನುಷ್ಠಾನಗೊಳಿಸುತ್ತಿದ್ದಾರೆಂದು ನಾನು ಹೇಳುತ್ತೇನೆ. ಹೀಗೆ ಹತ್ತು ಹಲವಾರು ಇದೆ. 'ಅರಣ್ಯ ಭೂಮಿಗೆ ಸಂಬಂಧಿಸಿದಂತೆ Central Empowered Committee ಸಲ್ಲಿಸಿರುವ ಅರ್ಜಿಗಳು ನಿರ್ವಹಣೆ' ಎಲ್ಲಾ ಇದೆ. ಇನ್ನು ನಮಗೆ

ಏನೂ ಉಳಿದಿಲ್ಲ. ತಾವು ಅವೊತ್ತು ಒಂದು ದಿವಸ ಹೇಳಿದಿರಿ, ಹದ ಹಾಕಿಕೊಳ್ಳಬೇಕಷ್ಟೆ ಎಂದು. ಎಲ್ಲಾ ಒಬ್ಬರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ, ಕೊಟ್ಟಿದ್ದೀರಿ ಎಂದರೆ ನೀವು ಕೊಟ್ಟಿದ್ದೀರಿ ಎಂದು ಹೇಳುವುದಿಲ್ಲ. ಸರ್ಕಾರದ ಕಡೆಯಿಂದ ಆಗಿದೆ. 'ಅರಣ್ಯ ಭೂಮಿಗೆ ಸಂಬಂಧಿಸಿದ ವಿಷಯಗಳ ಮೇಲಿನ ಲೋಕಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತು ..'

ಅಧ್ಯಕ್ಷರು:– ಆ ಆಜ್ಞೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆಯೇ ಎಂದು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅದನ್ನು ನೋಡಬೇಕು.

ಅಧ್ಯಕ್ಷರು:– ಇಲ್ಲಿ ಮಂತ್ರಿಗಳು ಉತ್ತರ ಹೇಳಬೇಕಾದರೆ ಹೇಳಲಿ.

ಶ್ರೀ ಕೆ.ಜಿ. ಬೋಪಯ್ಯ:– ಹಿಂದಿನ ಸರ್ಕಾರದ ಅರಣ್ಯ ಮಂತ್ರಿಗಳು ಜನಪರ ಕೆಲಸಗಳನ್ನು ಮಾಡಿಲ್ಲ. ಅದು ಬಿಜೆಪಿ ಇರಬಹುದು, ಯಾವ ಪಕ್ಷವೇ ಇರಬಹುದು. ಒಬ್ಬರಂತೂ ಆಚೆಗೆ ಟ್ರಾನ್ಸ್‌ಫರ್ ಆಗಿಬಿಟ್ಟಿದ್ದಾರೆ. ಇನ್ನೊಬ್ಬರು ಎಲ್ಲಿ ಹೋದರು ಎಂದು ಗೊತ್ತಿಲ್ಲ. ಅವರು ಮಾಡಿದ್ದು ಇಷ್ಟೆ. 'ಅರಣ್ಯ ಭೂಮಿಗೆ ಸಂಬಂಧಿಸಿದ ವಿಷಯಗಳ ಮೇಲಿನ ಲೋಕಸಭೆ, ವಿಧಾನಸಭೆ, ವಿಧಾನಪರಿಷತ್ತಿನ ಪ್ರಶ್ನೆಗಳಿಗೆ, ಭರವಸೆಗಳಿಗೆ ಉತ್ತರ ನೀಡುವುದು.' ಬೇರೆ ಸೆಕ್ರೆಟರಿಯೇಟ್ ಬೇಡ, ಅವರ ಉತ್ತರವನ್ನೇ ನೀವು ಓದಿ ಹೇಳುವುದಾ? ಇದು ನನಗೆ ಗೊತ್ತಿಲ್ಲ. ಅರಣ್ಯ' ಭೂಮಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳ ನಿರ್ವಹಣೆ ಮತ್ತು ಆಡಿಟ್ ಪ್ಯಾರಾಗಳಿಗೆ ಉತ್ತರಿಸುವುದು.' ಎಲ್ಲಾ ಅವರೇ ಹೇಳುವುದು. ಸೆಕ್ರೆಟರಿಯೇಟ್ ದಯವಿಟ್ಟು ಮುಚ್ಚಿ. ಸರ್ಕಾರದ ಖಜಾನೆಗೆ ಒಂದಿಷ್ಟು ದುಡ್ಡು ಉಳಿಯುತ್ತದೆ. 'ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಪಡೆ ಮುಖ್ಯಸ್ಥರು ವಹಿಸುವ ಇತರ ಕೆಲಸಗಳು.' ಇಷ್ಟಲ್ಲದೆ ಇನ್ನೇನಾದರೂ ಕೂಡ ಅವರಿಗೆ ಬರುತ್ತದೆ. He is the sole and super man. ನಮ್ಮ ಜಿಲ್ಲೆಯಲ್ಲಿ ಬೇಡವೆಂದಾಗ ಇಲ್ಲಿ ತಂದು ಕೂರಿಸಿಕೊಂಡಿದ್ದಾರೆ. ಆ ವ್ಯಕ್ತಿಯದು ಒಂದು ರೀತಿಯ psychiatric mind. ಕೆಲವು ಜನರು ಇದ್ದಾರೆ, ಕಿರುಕುಳ ಕೊಟ್ಟು ಸಂತೋಷ

ಪಡುವುದು. ಇವನು ಅಂಥ ವ್ಯಕ್ತಿಯಾಗಿದ್ದು, ಅವರನ್ನು ಮತ್ತೆ ಇಲ್ಲಿ ಕೂರಿಸಿಕೊಂಡು ಅವರಿಗೆ ವಹಿಸಿರುವ ಜವಾಬ್ದಾರಿಯನ್ನು ನೋಡಿದಿರಾ? ಇನ್ನೊಂದು ಬಹಳ ಮುಖ್ಯವಾಗಿ ಈ Forest Dwellers Act ಅದರಲ್ಲಿ Community Rights ಕೊಡುವುದಕ್ಕೆ Section 3, sub-clause 2ರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

"Notwithstanding anything contained in the Forest (Conservation) Act, 1980, the Central Government shall provide for diversion of forest land for the following facileties managed by the Government which involve felling of trees not exceeding seventy-five per hectare, namely, ಎಲ್ಲಾ details,

a) Schools
b) dispensary or hospital
c) anganawadis
d) Fair Price Shop
e) electric and telecommunication lines
f) Tanks and other minor water bodies
g) drinking water supply and water pipelines
h) water or rain water harvesting structures
i) minor irrigation canals
j) non-conventional source of energy
k) skill upgradation or vocational training centres
l) roads and
m) community centres.

Provided that such diversion of forest land shall be allowed only if the forest land to be diverted for the purposes mentioned in this sub-section is less than one hectare in each case.”

ಇರಲಿ, ಆದರೆ ಇಷ್ಟು ಛಿಟಜಚಿಡಿ ಆಗಿ ಇದ್ದರೂ ಇವರ circular.....

ಅಧ್ಯಕ್ಷರು:– ಈಗ ನಮ್ಮ ಜಿಲ್ಲಾ ಮಂತ್ರಿಯವರೆ, ನಮ್ಮ ಕುವೆಂಪು ಯೂನಿವರ್ಸಿಟಿ ಇದೆಯಲ್ಲಾ, ಅವರಿಗೆ 230 ಎಕರೆ forest ಇನ್ನೂ handover ಆಗಿಲ್ಲ. ದಯವಿಟ್ಟು ಅವರಿಗೆ ಆ Act ಪ್ರಕಾರ ಅರ್ಜಿ ಸಲ್ಲಿಸಲು ಹೇಳಿ, Forest Committee ಅಲ್ಲೇ ಇದೆ. ಅವರು ಕೊಟ್ಟರೆ ಅದನ್ನು ಮಾಡೋಣ. ನಾನು ವಿದ್ಯಾ ಸಚಿವರಿಗೆ ಬರೆದು ಹೇಳಿದರೂ ಏನು ಆಗಿಲ್ಲ, ಹಾಗೆ ಇದೆ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, the Forest Act rehabilitants ಯಾರಿದ್ದಾರೆ, ಇವರು wild life area ಇರಲಿ, tiger reserve ಇರಲಿ, ಎಲ್ಲರಿಗೂ ಹಕ್ಕು ಪತ್ರ ಕೊಡಬೇಕೆಂದು ಕೇಂದ್ರಸರ್ಕಾರದ ಪಾರ್ಲಿಮೆಂಟ್‌ನಲ್ಲಿ ಪಾಸ್ ಆದ ಕಾಯಿದೆಯಲ್ಲಿದೆ.

ಅಧ್ಯಕ್ಷರು:– ಅದರಲ್ಲಿ ಇನ್ನೊಂದು ವಿಷಯ ಇದೆ, ಅದನ್ನು ಹೇಳಿ. ಅವನು ಅರ್ಜಿ ಕೊಟ್ಟಿದ್ದರೆ evict ಮಾಡುವುದಕ್ಕೆ ಬರುವುದಿಲ್ಲ. ಆ ರೀತಿ ಮಾಡಿದರೆ ಅವನು ಜೈಲಿಗೆ ಹೋಗುತ್ತಾನೆ.

ಶ್ರೀ ಕೆ.ಜಿ. ಬೋಪಯ್ಯ:– ಹೌದು ಬರುವುದಿಲ್ಲ. ನಾನು ಇದೊಂದು circular ಅನ್ನು ಓದಿ ಬಿಡುತ್ತೇನೆ.

ಅಧ್ಯಕ್ಷರು:– ಓದಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇವರು ಒಂದು circular ಅನ್ನು issue ಮಾಡಿದ್ದಾರೆ. ಇವರೇ ಎಲ್ಲಾ circular ಅನ್ನು issue

ಮಾಡುವುದು. ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ನಮ್ಮ ಜಿಲ್ಲೆಗೆ ಸಂಬಂಧಿಸಿದ ಹಾಗೆ ಇದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವಾಸವಾಗಿರುವ ಜನರಿಗೆ ವಿದ್ಯುತ್ ಸಂಪರ್ಕ ಒದಗಿಸುವ ಪ್ರಸ್ತಾಪ ಕೈ ಬಿಡುವ ಬಗ್ಗೆ. ಸರ್ಕಾರದ ಪತ್ರ ಸಂಖ್ಯೆ : ಅಪ್ಪಾಜಿLbM:2013 ದಿನಾಂಕ;18/04/2013 ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಸ್ವೀಕೃತಗೊಂಡ ಸರ್ಕಾರದ ಉಲ್ಲೇಖಿಂತ ಪತ್ರ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಪತ್ರವನ್ನು ಮಾಹಿತಿಗಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ, ಈ ಪತ್ರದೊಂದಿಗೆ ಲಗತ್ತಿಸಿದೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಅಥವಾ ರಾಷ್ಟ್ರೀಯ ವನ್ಯ ಜೀವಿ ಮಂಡಳಿಯ ಅನುಮೋದನೆ ಪಡೆಯದೇ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವಿದ್ಯುತ್ ಸಂಪರ್ಕ ಜಾಲ ವಿಸ್ತರಿಸುವುದು statutory violation ಆಗುವುದರಿಂದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಜನರಿಗೆ ವಿದ್ಯುತ್ ಸೌಲಭ್ಯವನ್ನು ಕಲ್ಪಿಸುವ ಕಾರ್ಯವನ್ನು ತಕ್ಷಣದಿಂದ ಸ್ಥಗಿತಗೊಳಿಸಲು ಕ್ರಮ ತೆಗೆದುಕೊಳ್ಳಲು ಸರ್ಕಾರವೂ ನಿರ್ದೇಶಿಸಿದೆ. ಇವನೇ order ಮಾಡಿದ್ದು, ಅದನ್ನು ಸರ್ಕಾರದ ಮೇಲೆ ಹಾಕಿ ಬಿಟ್ಟರು. ಈ ವಿಷಯವನ್ನು ಗಂಭೀರವಾಗಿ ಪರಿಶೀಲಿಸಿ ಅಗತ್ಯ ರೀತಿಯ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಇದರ ಪರಿಣಾಮ ಏನೆಂದರೆ, ಕೆ.ಇ.ಬಿ. ಲೈನ್ ಎಳೆಯಲು ಹೋದಂಥ Assistant Executive Engineer, KEB ಮತ್ತೆ ಉಳಿದ contractor, ಅಲ್ಲಿ ಕರೆಂಟ್ ಬೇಕೆಂದು ಒದ್ದಾಡುತ್ತಿದ್ದಾರೆ. ಅವರೆಲ್ಲರ ಮೇಲೆ ಕೇಸ್ ಹಾಕುವುದು. ಇದು ಹೇಗೆ? ಹಾಗಾದರೆ ಈ ಕಾಯಿದೆ ನಿಮಗೆ applicable ಅಲ್ಲವೇ? Are they above this Forest Dwellers Act.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಏನೆಂದರೆ, ಆ ಆಕ್ಟಿನಲ್ಲಿ ಫಾರೆಸ್ಟ್ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೇ ಪಾರಂಪರಿಕ ಅರಣ್ಯವಾಸಿಗಳು ಎಂದು ಇದೆ. Other forest dwellers...... Others ಎಂದು ಹೇಳುತ್ತಾರೆ.

ಶ್ರೀ ಕೆ.ಜಿ. ಬೋಪಯ್ಯ:- ಇದೆ, ಅದು ಸರಿ, othersಗೂ ಇದೆ.

ಅಧ್ಯಕ್ಷರೆ:– ಅದರಲ್ಲಿ ಎಲ್ಲರೂ ಬರುತ್ತಾರೆ, ನೀವು ಬರುತ್ತೀರಿ, ನಾವು ಬರುತ್ತೇವೆ.

ಶ್ರೀ ಕೆ. ಶಿವಮೂರ್ತಿ:– ಅದರಲ್ಲೇ ನಾವು shelter ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇದು 2006ರಲ್ಲಿ ಬಂದಿರುವಂಥ ಕಾನೂನು ಆಗಿದೆ.

ಶ್ರೀ ಕೆ.ಜಿ. ಬೋಪಯ್ಯ:– ನಾನು ಈಗ ಸೂಕ್ಷ್ಮವಾಗಿ ಹೇಳಿದ್ದು, tiger reserve ಎಂದು ಏನು ಹೇಳುತ್ತಾರೆ. ಅಲ್ಲಿ ವಾಸವಿದ್ದರೂ electricity ಕೊಡಬೇಕು. ಇಲ್ಲ, ನಿಮಗೆ ಬಹಳ ಸಮಸ್ಯೆ ಆದರೆ, ಈಗ ಏನೋ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದಿರಲ್ಲಾ, ಅವರನ್ನು ಸ್ಥಳಾಂತರ ಮಾಡುವುದು. ಅವರು ಸ್ಥಳಾಂತರಕ್ಕೆ ಒಪ್ಪಿದರೆ ಮಾತ್ರ, ಅವರನ್ನು ಬಲತ್ಕಾರ ಮಾಡುವ ಹಾಗೆ ಇಲ್ಲ. ಅವರು ಒಪ್ಪಿದರೆ ನಮ್ಮದು ಏನು ತಕರಾರು ಇಲ್ಲ.

ಅದ್ಯಕ್ಷರು:– ಆ ರೀತಿ ನಿಮ್ಮ ಊರಿನ ಹುಣಸೂರು ತಾಲ್ಲೂಕಿನ ಜನರು ಮಾಡಿದ್ದರು.

ಶ್ರೀ ಕೆ.ಜಿ. ಬೋಪಯ್ಯ:– ಮಾಡಿದ್ದಾರೆ, ಈಗಲೂ ಮಾಡಿದ್ದಾರೆ.

ಅಧ್ಯಕ್ಷರು:– ಆಗ ಏನಾಯಿತೆಂದರೆ, ಆಗ ನಾನೇ ಸಮಾಜ ಕಲ್ಯಾಣ ಸಚಿವನಾಗಿದ್ದಾಗ 200 ಜನರಿಗೆ ಹುಣಸೂರು ತಾಲ್ಲೂಕಿಗೆ ಕೊಟ್ಟರು. ಆಗ ಮಾನ್ಯ ಚಿಕ್ಕಮಾದುರವರು ಇದ್ದರು, ಅವರಿಗೆಲ್ಲಾ ಎತ್ತು ಎಲ್ಲಾ ನಮ್ಮ ಇಲಾಖೆಯಿಂದ ಕೊಟ್ಟು ಮಾಡಿದ್ದೇವೆ. ಬಾಕಿಯವರನ್ನು ಬಿಡಿಸುವುದಕ್ಕೆ ಹೋದರು, ಆಗ ನಮ್ಮ ಮಾನ್ಯ ಕೆ.ಎಚ್. ರಂಗನಾಥ್‌ರವರು ಫಾರೆಸ್ಟ್ ಮಂತ್ರಿಯಾಗಿದ್ದರು. ಆಗ ನಾನು No, nothing ಎಂದು ಅವರಿಗೆ ಹೇಳಿದೆ. ಅವರಿಗೆ ಫಾರೆಸ್ಟ್ ಜಮೀನನ್ನು release ಮಾಡಿ, ಆಮೇಲೆ ಬೇಕಾದರೆ ಮಾಡಿ ಎಂದು ಹೇಳಿದಾಗ ಅದು ಅಲ್ಲೇ ನಿಂತು ಹೋಯಿತು. ಆಮೇಲೆ ಕೇಂದ್ರ ಸರ್ಕಾರಕ್ಕೆ ಹೋಗಿ ಅಲ್ಲಿ ಮಂತ್ರಿಗಳಿಗೆ ಕಂಡು ಬಂದಿದ್ದು.

ಶ್ರೀ ಕೆ.ಜಿ. ಬೋಪಯ್ಯ:- ಹೌದು, ವೀರನಹೊಸಹಳ್ಳಿಯಲ್ಲಿ ಕೊಟ್ಟಿದ್ದಾರೆ. They are happy also.

ಶ್ರೀ ಎಸ್. ಚಿಕ್ಕಮಾದು:- ಮಾನ್ಯ ಅಧ್ಯಕ್ಷರೆ, ತಮ್ಮ ಕಾಲದಲ್ಲಿ ಆ ಕುಟುಂಬಗಳಿಗೆ 4 ಎಕರೆ 38 ಗುಂಟೆ ಜಮೀನನ್ನು ಸರ್ಕಾರದಿಂದ ಮಂಜೂರಾತಿ ಕೊಟ್ಟು, ಆ ಜಮೀನಿನನ್ನು ಅಭಿವೃದ್ಧಿ ಮಾಡಿ, ವ್ಯವಸಾಯಕ್ಕೆ ಬರುವವರೆಗೂ ಇಡೀ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಎಲ್ಲವನ್ನೂ ಕೊಟ್ಟಿರುವಂಥದ್ದು. ಈಗ ಆ ಮಟ್ಟಕ್ಕೆ ಇಲ್ಲ, ಫಾರೆಸ್ಟ್‌ನಿಂದ shift ಮಾಡಿಸುತ್ತಿದ್ದಾರೆ.

ಅಧ್ಯಕ್ಷರು:- ಸಮಾಜ ಕಲ್ಯಾಣ ಇಲಾಖೆಯಿಂದ ಎಲ್ಲವನ್ನೂ ಕೊಟ್ಟಿದೆ, rehabilitation ಹೇಗೆ ಇರಬೇಕೆನ್ನುವುದನ್ನು ಅಲ್ಲಿ ಸ್ವಲ್ಪ ಮಟ್ಟಿಗೆ ಮಾಡಿದ್ದಾರೆ.

ಶ್ರೀ ಎಸ್. ಚಿಕ್ಕಮಾದು:- ಬಹಳ ಚೆನ್ನಾಗಿ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾವು ಈ ರೀತಿ ಮಾನವೀಯವಾಗಿ ಸ್ಪಂದಿಸಿದರೆ ಜನರು ನಮ್ಮ ಸರ್ಕಾರಗಳನ್ನು ಒಪ್ಪಿಕೊಳ್ಳುತ್ತಾರೆ. ಈಗ ಏನಾಗಿದೆಯೆಂಬ ಬಗ್ಗೆ ಮಾನ್ಯ ಬೋಪಯ್ಯನವರು ಬಹಳ ವಿಸ್ತೃತವಾಗಿ ಹೇಳಿದರು. ಅವರಿಗೆ ವಿದ್ಯುತ್ ಕೊಡುವ ವಿಷಯವನ್ನು ತಡೆ ಮಾಡಿದರು. ನಾವೆಲ್ಲಾ ದಿನ ಬೆಳಗಾದರೆ ಅನುಭವಿಸುತ್ತಿರುವುದು, ನಾನು ಮೊನ್ನೆ ಕಾಲೇಜ್ ಕಟ್ಟಡದ ವಿಷಯ ಹೇಳಿದೆ, release ಆಗುವುದಿಲ್ಲ. ನಾವು ಸಾರ್ವಜನಿಕ ಹಿತಾಸಕ್ತಿಗೆ ಬೇಕಾಗಿರುವ ವಿಷಯಗಳನ್ನು ಎಷ್ಟು ಕೊಕ್ಕೆ ಹಾಕಿ ವಾಪಸ್ಸು ಕಳುಹಿಸುತ್ತಾರೆ, ಎಷ್ಟು ಮಾಹಿತಿಗಳನ್ನು ಕೇಳುತ್ತಾರೆ ಎಂದು ಯಾವುದಾದರೂ ಒಂದು ಫೈಲ್‌ಅನ್ನು ಯಾರಾದರು study ಮಾಡಿದರೆ, ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಕೈಗನ್ನಡಿ ಹಿಡಿದಂತೆ ಆಗುತ್ತದೆ. ಜನಪರವಾದಂಥ ಕಾಳಜಿ ಇಲ್ಲದೇ ಮಾನವೀಯ ಸ್ಪಂದನವಿಲ್ಲದೇ ಈ ರೀತಿಯ ಅಡೆ-ತಡೆಗಳನ್ನು ಮಾಡಿಕೊಂಡು ಹೋಗುವುದರಿಂದ ಜನ ಆಕ್ರೋಶಗೊಳ್ಳುತ್ತಾರೆ. ನಕ್ಸಲ್ ಅಂಥ ಚಟುವಟಿಕೆಗಳು ಬೆಳೆಯುತ್ತದೆ. ಇದು ಆಗಬಾರದೆನ್ನುವುದಕ್ಕೆ ನಾವು ಮಾನವೀಯ ದೃಷ್ಟಿಕೋನದಲ್ಲಿ ಸರ್ಕಾರವಾಗಿ

ಸ್ಪಂದಿಸುವುದಕ್ಕೆ ಮುಂದೆ ಹೋಗಬೇಕು, ಇಲ್ಲವೆಂದರೆ ನಕ್ಸಲ್ ಚಟುವಟಿಕೆಗಳು ಹೆಚ್ಚಾಗುವುದಕ್ಕೆ ಕಾರಣವಾಗುತ್ತದೆ. ಈ ರೀತಿ ಕರೆಂಟ್ ಕೊಡುವುದಿಲ್ಲ, ರಸ್ತೆ ಕೊಡುವುದಿಲ್ಲ, ಸೇತುವೆ ಕೊಡುವುದಿಲ್ಲ.

ಅಧ್ಯಕ್ಷರು:- ಅಯಿತು, ಹೌದು ನಮ್ಮ ಶಿವಮೊಗ್ಗದ ಶೆಟ್ಟಿಹಳ್ಳಿ ಎಂದು ಇದೆ, ಇಲ್ಲೂ ಇದೇ ಗೋಳು. ಅದು Principal CCF ಗೆ ಬಂದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಎಷ್ಟು ದಿನದಲ್ಲಿ ಆ ಫೈಲ್ clear ಆಗುತ್ತದೆಂಬುದು ಗೊತ್ತಾದರೆ, ನಾವೆಲ್ಲಾ ಬೇಕಾದರೆ ಹೇಳಿ ಬಿಡುತ್ತೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ಒಪ್ಪುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು Education Minister ಆಗಿದ್ದವರು. Rehabilitation of education ಎಂದು ಇದೆ. He has systematically.....

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಇನ್ನು ಎರಡು ವಿಚಾರಗಳನ್ನು ಹೇಳಿ ಮುಗಿಸುತ್ತೇನೆ. ಇವತ್ತು ಇನ್ನೊಂದು ಬಹಳ ಮುಖ್ಯವಾಗಿರುವಂಥ ವಿಚಾರವೇನೆಂದರೆ, 1904ರಲ್ಲಿ ಒಂದು notification ಆಗಿದೆ. ಆದರ ಪ್ರಕಾರ ಎಲ್ಲಾ Indian Forest Act procedure ಆಗಿದೆ, it cannot be taken back ಎಂದು ಇದೆ. ಆದರೆ 1904 notification ಆದಮೇಲೆ ಸಾಕಷ್ಟು ಪ್ರಭಾವಿಗಳಿಗೆ de-notify ಆಗಿದೆ. ತಾವು ನಮ್ಮ ಉತ್ತರದಲ್ಲಿ ಹೇಳಬೇಕು. ಏಕೆಂದರೆ, ಒಂದು ಪ್ರತ್ಯೇಕ wing ಇದೆ, ಈಗ ಭೂ ದಾಖಲೆ ಬಗ್ಗೆ 1904 notification ಪ್ರಕಾರ village wise ಎಷ್ಟೆಷ್ಟು notify ಮಾಡಿದ್ದೀರಿ, as per the procedure following all the formalities ಅದರ ಮಾಹಿತಿಯನ್ನು ಕೊಡಬೇಕು ಮತ್ತೆ ಎಷ್ಟು de-notification ಆಗಿದೆ? ಸೋಮವಾರ ಪೇಟೆ ತಾಲ್ಲೂಕಿನಲ್ಲಿ....

ಶ್ರೀ ಕೆ. ಶಿವಮೂರ್ತಿ:– ತಾವು non-village ಬಗ್ಗೆಯೂ ಸ್ವಲ್ಪ ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅದನ್ನು ಹೇಳುತ್ತೇನೆ. ಅದು ಈ ಅರಣ್ಯ ಮಂತ್ರಿಯವರಿಗೆ ಬರುವುದಿಲ್ಲ, ರೆವಿನ್ಯೂಗೆ ಬರುವುದು.

(ಗೊಂದಲ)

ಅಧ್ಯಕ್ಷರು:– ಅಯಿತು, ತಾವು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಈ ವ್ಯವಸ್ಥೆಗಳು ಹೇಗೆ ಆಗಿದೆಯೆಂದರೆ, ಬೇಕು ಬೇಕಾದವರಿಗೆಲ್ಲಾ de–notify ಮಾಡಿದ್ದಾರೆ. 7847 ಎಕರೆ de-notify 1944ರಲ್ಲಿ ಮಾಡಿದ್ದಾರೆ. ಯಾರೋ ಶ್ರೀಮಂತ, ಎಲ್ಲಾ de-notify ಆಗಿದೆ, de-notify ಮಾಡುವುದಕ್ಕೆ ಅವಕಾಶಗಳು ಆ ಕಾಲದಲ್ಲೂ ಇದೆ, ಈ ಕಾಲದಲ್ಲೂ ಇದೆ. Forest Conservation Act ಪ್ರಕಾರ if any land is used for non-forest activities alternate land ಕೊಡಬೇಕೆಂದು ಇದೆ. 1904ರಲ್ಲಿ ಆಗಿರುವುದರ ಬಗ್ಗೆ ನಾನು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಅರಣ್ಯ ಹಕ್ಕು ಕಾಯಿದೆಯಡಿಯಲ್ಲಿ ಹಕ್ಕುಪತ್ರಗಳನ್ನು ಪಡೆದಂಥವರು ಅಲ್ಲಿ ಬಹಳಷ್ಟು ಜನರಿದ್ದಾರೆ. ಮೊದಲು ಅವರ ಹತ್ತಿರ ಹಕ್ಕುಪತ್ರ ಇದ್ದರೂ, ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ ಎಂದು ಹೇಳುತ್ತಿದ್ದರು. ಹಾಗಾಗಿ, it is of no use, no consequence. It has no legal validity ಎಂದು ಶುರು ಮಾಡಿದ್ದರು. ಅದಕ್ಕಾಗಿ ನಾನು ಮತ್ತೆ ಅವರಿಗೆ ಹಕ್ಕುಪತ್ರ ಕೊಡಿಸಿದೆ. ಆದರೆ de-notify ಆಗಿದ್ದು ಎಷ್ಟು? 1904ರಲ್ಲಿ ಎಷ್ಟು de-notify ಆಗಿದೆ, ಯಾರಿಗೆ ಆಗಿದೆ ಎನ್ನುವುದರ ಮಾಹಿತಿ ಕೊಡಿ. Notify ಮಾಡುವಾಗ ಒಂದು ಕಡೆ ಬೆಟ್ಟ, ಇನ್ನೊಂದು ಕಡೆ river ಇದೆ ಎಂದು identification ಮಾಡಿ ಮಾಡುವುದು, ಆಮೇಲೆ ಸೆಕ್ಷನ್–5 ರ ಪ್ರಕಾರ Settlement Officer he has to identify all. Notificationನಲ್ಲೂ ಕೂಡ ಹಾಕಿದ್ದಾರೆ, ಅಲ್ಲಿರುವ enclosures ಅಂದರೆ ಅಲ್ಲಿ ಯಾರು ವಾಸವಾಗಿದ್ದಾರೆ, ಅವರ ಜಮೀನು ಇದ್ದರೆ it shall be deleted ಎಂದು ಇದೆ. ಅದರಂತೆ delete ಸಹ ಮಾಡಿದ್ದಾರೆ. ಆದರೆ ದುರಾದೃಷ್ಟವೆಂದರೆ, ಅದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ನಾಶ

ಮಾಡಿದ್ದಾರೆ. ಅದು ಸಿಕ್ಕಿದರೆ ಇವರ ಆಟವೇನು ನಡೆಯುವುದಿಲ್ಲ. ಆ ಎಲ್ಲ land recotds ಅನ್ನು ಸುಟ್ಟುಹಾಕಿದ್ದಾರೆ. ನಾನು ಒಂದು ಸ್ವಲ್ಪ ರೆಕಾರ್ಡ್‌ಗಳನ್ನು ತಂದಿದ್ದೇನೆ. London Libraryಯಲ್ಲಿ ಕೊಡಗಿಗೆ ಸಂಬಂಧಪಟ್ಟಹಾಗೆ 1900 ರಿಂದ 1947 ವರೆಗಿನ ಎಲ್ಲ ಆದೇಶಗಳು ಇವೆ. ಅಲ್ಲಿಂದ ಯಾರೋ ಕೆಲವನ್ನೆಲ್ಲ ತಂದಿದ್ದಾರೆ. ಅದೇ ರೀತಿ ಎಲ್ಲ ಜಿಲ್ಲೆಗಳದ್ದೂ ಇರಬಹುದು. ಯಾವುದೇ ದಾಖಲೆಗಳಿಲ್ಲ ಎಂದು ಇವರು ಬಹಳ ಸುಲಭದಲ್ಲಿ ಹೇಳಿಬಿಡುತ್ತಾರೆ. ನಾನು ಕೆಲವು ಆದೇಶಗಳನ್ನೂ ತರಿಸಿ ಇಟ್ಟುಕೊಂಡಿದ್ದೇನೆ. ಸುಮ್ಮಸುಮ್ಮನೆ ಹೇಳಬಾರದು ಎನ್ನುವ ಕಾರಣಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಇಷ್ಟೇ ಅಲ್ಲ, even after independence, ಮಡಿಕೇರಿ ಟೌನ್ ಒಳಗೆ ಒಂದು ಕಡೆ East Range ಎಂದು ಇತ್ತೀಚೆಗೆ ಒಂದು ಬೋರ್ಡ್ ಹಾಕಿದ್ದಾರೆ. East Range ಎಂದರೆ ಏನು ಎಂದು ನನಗೆ ಗೊತ್ತೇ ಇಲ್ಲ. ಅಲ್ಲೂ ಕೂಡ ಫಾರೆಸ್ಟ್ ಲ್ಯಾಂಡ್ ಇತ್ತು. ಆ ಫಾರೆಸ್ಟ್ ಲ್ಯಾಂಡಿನಲ್ಲಿ ಸುಮಾರು 20 ಎಕರೆ ಜಾಗವನ್ನು 1953ರಲ್ಲಿ de-notify ಮಾಡಿ, ಆವತ್ತು ಕೂರ್ಗ್ ಸ್ಟೇಟ್ ಇತ್ತು, ಅಂದಿನ Chief Commissioner, Field Marshall Cariappaರವರಿಗೆ ಕಾಫಿ ತೋಟ ಮಾಡಲು ಕೊಟ್ಟಂಥ ಉದಾಹಣೆಗಳೂ ಇವೆ. ಹಾಗೆ ಕೊಟ್ಟಿರುವುದಕ್ಕೆ ನನ್ನ ಹತ್ತಿರ ದಾಖಲೆಗಳಿವೆ. ಹೀಗೆಲ್ಲ ಇರುವಾಗ 1904ರಲ್ಲಿ notification ಆಗಿದೆ ಎಂದು ಹೇಳಿ, the entire ಸಂಪಾಜೆ, ಚೆಂಬು, ಸೋಮವಾರಪೇಟೆ ಬೆಲ್ಟ್ ಪೂರ್ತಿ ಫಾರೆಸ್ಟ್ ಎಂದು ಹೇಳುತ್ತಾರೆ. How do you say? Delete ಆಗಿರುವುದನ್ನು ನೀವೇನಾದರೂ ನಿಮ್ಮ ಮ್ಯಾಪಿನಲ್ಲಿ ಸೇರಿಸಿಕೊಂಡಿದ್ದೀರಾ? ನಿಮ್ಮ ಮ್ಯಾಪ್‌ನಲ್ಲಿ ತಿದ್ದುಪಡಿ ಮಾಡಿದ್ದೀರಾ? Forest Registerನಲ್ಲಿ ಎಂಟ್ರಿ ಮಾಡಿದ್ದೀರಾ? ಏಕೆ ಈ ರೀತಿಯ ಅವ್ಯವಸ್ಥೆಗಳಾಗುತ್ತಿವೆ? ಇದರಿಂದಾಗಿ, ಜನ ಅರಣ್ಯ ಇಲಾಖೆಯ ಬಗ್ಗೆ ತಾತ್ಸಾರದಿಂದ ನೋಡುವಂಥ, ಸಿಟ್ಟಿನಿಂದ ನೋಡುವಂಥ ಪರಿಸ್ಥಿತಿ ಇದೆ. ಫಾರೆಸ್ಟ್, ಮಿನಿಸ್ಟರ್ ಎಂದರೆ ಅಲ್ಲಿಯ ಜನ ಹಾಗೆ ಮಾತನಾಡುತ್ತಾರೆ ಎಂದು ನಿಮಗೆ ಗೊತ್ತು. ಅದನ್ನು ನಾನು ವಿಧಾನಸಭೆಯೊಳಗೆ ಹೇಳಬಾರದು. ಹಾಗೆ ಮಾತನಾಡುವಂಥ ಪರಿಸ್ಥಿತಿ ಯಾರಿಂದ ಆಗಿದೆ ಎಂದರೆ ಅರಣ್ಯ ಭವನದೊಳಗೆ ಕುಳಿತಂಥ ಕೆಲವೇ ಕೆಲವು

ಅಧಿಕಾರಿಗಳಿಂದ ಆಗುತ್ತಿದೆ. ಹಾಗೆಂದು ಹೇಳಿ, ಎಲ್ಲ ಅಧಿಕಾರಿಗಳು ಈ ರೀತಿ ಇದ್ದಾರೆ ಎಂದು ನಾನು ಹೇಳುವುದಿಲ್ಲ. ಜನಪರವಾದ ಕೆಲಸ ಮಾಡುವುದಕ್ಕೆ ಸಹಕಾರ ಮಾಡುವಂಥವರೂ ಅನೇಕ ಅಧಿಕಾರಿಗಳಿದ್ದಾರೆ. ಆದರೆ ಅವರಿಗೆ ಇಲ್ಲಿ ಅವಕಾಶ ಕೊಡುವುದೇ ಇಲ್ಲ. ಕರ್ನಾಟಕ ಕೇಡರ್ I.F.S. ಎಂದು ಪ್ರಮೋಷನ್ ಆದರೆ ಅವರಿಗೆ ಇಂಥ Key posts ಯಾವುದೂ ಸಿಗುವುದಿಲ್ಲ. ಏಕೆಂದರೆ, Super Time Scale ಎಂದು ಮಾಡಿಕೊಂಡು ಬಿಟ್ಟಿದ್ದಾರೆ. ಅವನು ಪಾಪ, ರೇಂಜರ್ ಆಗಿ ಕಷ್ಟಪಟ್ಟು, ಕಾಡೆಲ್ಲ ಸುತ್ತಿ ಅಲ್ಲಿ ಬಂದರೆ he is not eligible. ಈ ರೀತಿಯ ವ್ಯವಸ್ಥೆಗಳು ಇವೆ. ಇದನ್ನೆಲ್ಲ ಸರಿ ಮಾಡುತ್ತೇನೆ ಎಂದು ನೀವು ಹೇಳಿದ್ದೀರಿ, ಸಂತೋಷ. ನಿಮ್ಮ ಕಾಳಜಿಯನ್ನು ನಾನು ಖಂಡಿತಾ ಮೆಚ್ಚುತ್ತೇನೆ.

(ಈ ಹಂತದಲ್ಲಿ ಶ್ರೀ ಬಿ.ಆರ್. ಯಾವಗಲ್‌ರವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಆದರೆ ತಾವು ಯೋಚಿಸಿದಷ್ಟು ಸುಲಭದಲ್ಲಿ ಇದು ಆಗಿಬಿಡುತ್ತದೆ ಎಂದು ಖಂಡಿತಾ ಭಾವಿಸಬೇಡಿ. ಇದಕ್ಕೆ ಅವರು ಬೇರೆಬೇರೆ ಕಥೆಗಳನ್ನೆಲ್ಲ ಕಟ್ಟುತ್ತಾರೆ. ನೀವು ಯೋಚಿಸಿದಷ್ಟು ಸುಲಭದಲ್ಲಿ ಖಂಡಿತ ಅರಣ್ಯ ಇಲಾಖೆಯನ್ನು ಸರಿ ಮಾಡಲು ಆಗುವುದಿಲ್ಲ. ಅಲ್ಲಿರುವಂಥ ಕಾಯಿದೆಗಳನ್ನು ತಪ್ಪಾಗಿ ಅರ್ಥೈಸಿ, ತಪ್ಪು ಮಾಹಿತಿಗಳನ್ನು ಕೊಡುವುದೇ ಅವರ ಉದ್ದೇಶವಾಗಿದೆ. ಆದ್ದರಿಂದ, ಇದನ್ನು ಹೇಗೆ ಸರಿ ಮಾಡುತ್ತೀರಿ ಎಂದು ಹೇಳಬೇಕು. ಮತ್ತೆ ಆ ಕಮಿಟಿಯನ್ನು ಮಾಡಿದ್ದೇವೆ, C & D land ಬಗ್ಗೆ ಮತ್ತೆ ಅಫಿಡವಿಟ್ ಹಾಕುತ್ತೇವೆ ಎಂದೂ ಹೇಳಿದ್ದೀರಿ.

ಶ್ರೀ ಕೆ. ಶಿವಮೂರ್ತಿ:– ಹಿಂದೆ ಒಂದು ಸಲ ಅಫಿಡವಿಟ್ ಹಾಕಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಹಾಕಿ ಆಗಿದೆ. ಎರಡು ಸಲ ಹಾಕಿದ್ದಾರೆ ಎಂದು ಅವರದೇ ಕಮಿಟಿಯ ರಿಪೋರ್ಟಿನಲ್ಲಿದೆ. ಒಂದು ಸಲ ಸುಪ್ರೀಂ ಕೋರ್ಟಿನಲ್ಲಿ ಅಫಿಡವಿಟ್ ಹಾಕಿದ ಮೇಲೆ, ಅದೆಲ್ಲವೂ ಆದಮೇಲೆ ಬದಲಾವಣೆಯನ್ನು ಹೇಗೆ ಮಾಡುತ್ತೀರಿ ಎಂದು ನನಗಂತೂ ಗೊತ್ತಿಲ್ಲ.

ಬದಲಾವಣೆಯಾದರೆ ನಮ್ಮೆಲ್ಲರ ಅದೃಷ್ಟ. ಆದರೆ ನಿಮ್ಮ ಕೈಯ್ಯಲ್ಲೇ, ವಿಶೇಷವಾಗಿ, ಕಂದಾಯ ಇಲಾಖೆಯ ಕೈಯ್ಯಲ್ಲಿ ಅಸ್ತ್ರವನ್ನಿಟ್ಟುಕೊಂಡಿದ್ದಾರೆ. Land Bank ಎಂದು ಅದಕ್ಕೆ ಹೆಸರನ್ನು ಕೊಟ್ಟಿದ್ದಾರೆ. ನಾನು ತಿಳಿದುಕೊಂಡ ಮಟ್ಟಿಗೆ ಬ್ಯಾಂಕ್ ಎಂದರೆ ನಾವು ಅಲ್ಲಿ ಇಡುವುದು, ಯಾವಾಗ ಬೇಕಾದರೂ ವಾಪಸ್ಸು ತೆಗೆದುಕೊಳ್ಳುವುದು ಎಂದು ಅರ್ಥ. That is Bank. ಅದರ ದುರುಪಯೋಗ ಮಾಡಿಕೊಂಡು, ಈಗ ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಹಾಕುವುದಕ್ಕೆ ಹೊರಟಿದ್ದೀರಿ. I do not Know, how far you are going to succeed. ಅದನ್ನು ನೋಡಬೇಕಾಗುತ್ತದೆ.

ಶ್ರೀ ಕೆ. ಶಿವಮೂರ್ತಿ:– Notified area and declared area ಎಂದು ಇದೆಯಲ್ಲ, ಅದು ಸೆಟ್ಲ್‌ಮೆಂಟೋ ಅಥವಾ ವಿಲೇಜೋ ಅಥವಾ ನಾನ್–ವಿಲೇಜೋ? Settlement ಗೆ Aforest Actನಲ್ಲಿ ಏನಾದರೂ definition ಇದೆಯೇ?

ಶ್ರೀ ಕೆ.ಜಿ. ಬೋಪಯ್ಯ:– ನಾನು ಆಗಲೇ ಅದೆಲ್ಲವನ್ನೂ ಹೇಳಿದ್ದೇನೆ. Ehat are the forests? ಎಂದು ಹೇಳಿದ್ದೇನೆ. ಮತ್ತೆ ಅದು ಪುರಾವರ್ತನೆಯಾಗುವುದು ಬೇಡ. ಸಾಕಷ್ಟು ಸಲಹೆಯನ್ನೂ ನಾನು ತೆಗೆದುಕೊಂಡಿದ್ದೇನೆ. 1916ನೇ ಇಸವಿಯಲ್ಲಿ ಏಳು ಎಕರೆ ಅರಣ್ಯ ಪ್ರದೇಶವನ್ನು de-notify ಮಾಡಿ ಒಬ್ಬ port land estate owner, ಒಬ್ಬ ಶ್ರೀಮಂತನಿಗೆ ಬಂಗಲೆ ಕಟ್ಟುವುದಕ್ಕೆ ಕೊಟ್ಟಿದ್ದಾರೆ. 1916ರಲ್ಲೇ notificationಅನ್ನು delete ಮಾಡಿ ಕೊಟ್ಟಿದ್ದಾರೆ. ಇನ್ನೊಬ್ಬ ಪುಣ್ಯಾತ್ಮರಿಗೆ 56 ಎಕರೆ ಕೊಟ್ಟಿದ್ದಾರೆ. ನನ್ನ ಹತ್ತಿರ ಎಲ್ಲ ದಾಖಲೆಗಳೂ ಇವೆ. ಯಾರೋ ಪುಣ್ಯಾತ್ಮರು ಲಂಡನ್ ಲೈಬ್ರರಿಯಿಂದ ಕಾಪಿ ತೆಗೆದುಕೊಂಡಿದ್ದರು, ಅವರು ನನಗೆ ಕೊಟ್ಟಿದ್ದಾರೆ. 1944ರಲ್ಲಿ 27 ಸೆಂಟ್ ಜಾಗವನ್ನು de-notify ಮಾಡಿ ಕೊಟ್ಟಿದ್ದಾರೆ. ಯಾರಿಗೆ ಎಂದರೆ, ಆಗ P.W.D. gangmen ಗಳಿದರಲ್ಲ, to construct houses to the P.W.D. coolie men ಎಂದು ಇದರಲ್ಲಿ ಬರೆದಿದ್ದಾರೆ. ಅವರಿಗೆ ಕೇವಲ 27 ಸೆಂಟ್, ಶ್ರೀಮಂತನಿಗೆ ಏಳು ಎಕರೆ ಕೊಟ್ಟಿದ್ದಾರೆ. ಇದೆಲ್ಲವೂ ಇದ್ದರೂ ಸಹ ನೀವು, ಸುಪ್ರೀಂ ಕೋರ್ಟ್

ಜಡ್ಜ್‌ಮೆಂಟ್ ಇದೆ ಎಂದು ಹೇಳಿಕೊಂಡು ಬರುತ್ತಿದ್ದೀರಿ. ಇದೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡರೆ, ನಿಮ್ಮ definition, ನಿಮ್ಮ deemed forestಅನ್ನು ನಾನಂತೂ ಒಪ್ಪುವುದಿಲ್ಲ. Unless Sections 2 to 17 of the Act are complied, you cannot say it as a deemed forest. Deemed Forest ಎನ್ನುವುದಕ್ಕೆ Forest Actನಲ್ಲಿ ಎಲ್ಲಿಯೂ ಜಜಜಿಟಿಣಜುಂಟಿ ಇಲ್ಲ. ಕೋರ್ಟಿನವರು deemed forest ಎಂದು ಎಲ್ಲಿಯೂ ಹೇಳಿಯೇ ಇಲ್ಲ. ಖಜಿ 25 tree growth is there, deemed forest ಎಂದು ಇವರು ಹೇಳುವುದಾದರೆ, ಇವರು ಮೊದಲು ಅರಣ್ಯ ಭವನವನ್ನು deemed forest ಎಂದು declare ಮಾಡಲಿ. ನಿಮ್ಮ ಅರಣ್ಯ ಭವನದೊಳಗೆ 25 ಮರಗಳಿಲ್ಲವೇ? ಇವೆ. ಹಾಗಿದ್ದರೆ ಅದನ್ನು declare ಮಾಡಿಕೊಳ್ಳಿ. ಕಬ್ಬನ್ ಪಾರ್ಕ್‌ಅನ್ನೂ ಅರಣ್ಯ ಎಂದು ಮಾಡಿಕೊಳ್ಳಿ. ಅಲ್ಲಿರುವ ಆನೆಗಳನ್ನೆಲ್ಲ ತಂದು ಬೆಂಗಳೂರಿನಲ್ಲಿ ಹಾಕಿಕೊಳ್ಳಿ. ನಿಮಗೂ ಸುಲಭವಾಗುತ್ತದೆ, ನಾವೂ ನೆಮ್ಮದಿಯಿಂದ ಇರುತ್ತೇವೆ. ಅವುಗಳನ್ನು ಇಲ್ಲಿಗೆ ತಂದು ನಿಮ್ಮ ಅರಣ್ಯ ಭವನದೊಳಗೆ ಒಂದಿಷ್ಟು ಆನೆಗಳನ್ನು ಬಿಟ್ಟುಕೊಳ್ಳಿ, ಕಬ್ಬನ್ ಪಾರ್ಕ್‌ನೊಳಗೆ ಒಂದಿಷ್ಟು ಬಿಟ್ಟುಕೊಳ್ಳಿ. ಅದೇ ರೀತಿ ಇನ್ನೆಲ್ಲೆಲ್ಲಿ deemed forest ಎಂದು ಬರುತ್ತದೋ ಗೊತ್ತಿಲ್ಲ. ಹಾಗೆ ತೆಗೆದುಕೊಂಡರೆ, ಈ ವಿಧಾನಸೌಧವೂ deemed forest ಎಂದಾಗುತ್ತದೆ. ಲೆಕ್ಕ ಹಾಕಿದರೆ ಇದರ ಸುತ್ತಮುತ್ತ 25 ಮರಗಳಿಲ್ಲವೇ? ಅದೇ ರೀತಿ, ಲಾಲ್‌ಬಾಗ್ ಒಳಗೂ ಆನೆಗಳನ್ನು ಬಿಟ್ಟುಕೊಳ್ಳಿ. ನಮಗೆ ಏಕೆ ಕಷ್ಟ ಕೊಡುತ್ತೀರಿ? ಇನ್ನು, ಆನೆಗಳ ಕಾಟ ತಡೆಯಲು ಏನು ಕಾರ್ಯಕ್ರಮ ಇದೆ ಎಂದು ಹೇಳಿ. Solar fence ಮಾಡುವುದಂತೆ, forest trench ತೆಗೆಯುವುದು ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಒಟ್ಟು ಐದು Wild life areaಗಳಿವೆ. ಆಮೇಲೆ forest ನಲ್ಲಿ trench ತೆಗೆಯುವುದು. ನಮ್ಮ ಜಿಲ್ಲೆಯಲ್ಲಿ 5 Wild Life Area ಗಳಿವೆ. Nagarahole, Tiger Reserve Forest, ಅದರ ಸುತ್ತು ಕೇಂದ್ರ ಸರ್ಕಾರದಿಂದ ಒಂದಿಷ್ಟು grant ಬರುತ್ತಿತ್ತು. ಪಕ್ಕಾ trench ತೆಗೆದು ಆನೆಗಳು ಬರದ ಹಾಗೆ ವ್ಯವಸ್ಥೆಗಳು ಇತ್ತೀಚಿನ ವರ್ಷಗಳಲ್ಲಿ ಆಗಿದೆ. ಕಳೆದ 3–4 ವರ್ಷಗಳಿಂದ ನಾವು ಒಂದಿಷ್ಟು ಅಲ್ಲಿಗೆ ಹೋಗಿ ಆ ಹುಣಸೂರು ಭಾಗದಲ್ಲೂ ಕೂಡ ಮಾಡಿ

ಆ ಭಾಗದಿಂದ ಆನೆಗಳು ಬರದ ಹಾಗೆ ಮಾಡಿದ್ದಾರೆ. ಇನ್ನೂ ಇದೆ. ಬ್ರಹ್ಮಗಿರಿ, ಪುಷ್ಪಗಿರಿ, ತಲಕಾವೇರಿ ಮತ್ತು ಇನ್ನೊಂದು ಇದೆ. ಒಟ್ಟು 4 ಇದೆ. ಇದರ ಬಗ್ಗೆ 1987ರಲ್ಲಿ ಈ 4 Wild Life Area ವನ್ನು Wild Life Area ಎಂದು declare ಮಾಡಿದ್ದೀರಿ. ಇಲ್ಲಿಯವರೆಗೆ ನೀವು ಅದರ boundary ಅನ್ನು fix ಮಾಡಿದ್ದೀರಾ? Survevy ಮಾಡಿ fix ಮಾಡಬೇಕಲ್ಲವೇ? ಅದರೊಳಗೂ ಗಿರಿಜನರಿದ್ದಾರೆ. ನಮ್ಮಲ್ಲಿ ಕುಡಿಯ ಜನಾಂಗ ಎಂದು ಹೇಳುತ್ತಾರೆ. ಅವರು ST ಗೆ ಬರುತ್ತಾರೆ. ಅವರ ಪರಿಸ್ಥಿತಿ ಹೇಗಿದೆ ಎಂದರೆ ಆ ಪುಷ್ಪಗಿರಿ Wild Life Area ದಲ್ಲಿ existing road ಅನ್ನು repair ಮಾಡುವುದಕ್ಕೆ ಹೋದಾಗ ಮರ ನಾಶ ಮಾಡಿದರು ಮತ್ತೊಂದು ಎಂದು ಅಡ್ಡಬಂದರು. ಅಲ್ಲಿ 2000 ಎಕರೆಯನ್ನು ಹುಣಸೂರು fly wood ಗೆ ಕೊಟ್ಟಾಗ ಇವರಿಗೆ ಏನೂ ಅನಿಸಿಲ್ಲ. ಅವರಿಗೆ ಇದ್ದ ರಸ್ತೆಯನ್ನು repair ಮಾಡಿದಾಗ ಇವರು ಮಾಡಿದರು. ಇವತ್ತು ಏನಾದರೂ ಅವರಿಗೆ ಕಾಯಿಲೆ ಬಂದರೆ ಅದರಲ್ಲೂ ಈ ಮಳೆಗಾಲದಲ್ಲಿ bed sheet, ಕಂಬಳಿಯಲ್ಲಿ ಕಟ್ಟಿ ಬಡಿಗೆಯಲ್ಲಿ ಹೊತ್ತುಕೊಂಡು ಬರುವಂಥ ಪರಿಸ್ಥಿತಿ ಇವತ್ತು ಆ ಪುಷ್ಪಗಿರಿ Wild Life Area ಎಂದು ನೀವು ಏನು declare ಮಾಡಿದ್ದೀರಿ, ಅಲ್ಲಿ ವಾಸಿಸುವ ಗಿರಿಜನರು ಏನು ಪಾಪ ಮಾಡಿದ್ದಾರೆ? ಮಾನವಿಯತೆಯಾದರೂ ನಿಮಗೆ ಬೇಡವೇ? ಅಲ್ಲಿ ಒಂದು ಜೀಪು ಹೋದರೆ ಅದನ್ನು ಅರಣ್ಯ ಇಲಾಖೆಯವರು ತಡೆಯುತ್ತಾರೆ. ಇಂಥ ಪರಿಸ್ಥಿತಿಗಳು ಇವೆ. ಇದೆಲ್ಲವನ್ನೂ ಸರಿಮಾಡುವ ಕೆಲಸ ಇವತ್ತು ಆಗಬೇಕಾಗಿದೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು.)

ಈ ನಾಲ್ಕು Wild Life Area boundary ಗಳನ್ನು ನೀವು ಗುರುತು ಮಾಡಬೇಕು. ಅಲ್ಲಿಯ ತಕರಾರುಗಳನ್ನು ಇನ್ನೊಂದು ಸಲ ಕೇಳಬೇಕು. ಆಗ declare ಮಾಡುವಾಗ ನಾವು ದನ ಮೇಯಿಸಲಿಕ್ಕೆ 300 ಎಕರೆ ಜಾಗ ಬಿಡಿ ಎಂದು ಕೇಳಿದ್ದೆವು. ಮಾನ್ಯ ಅಧ್ಯಕ್ಷರೆ, ಇನ್ನು 5 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ತಾವು ನನಗೆ ಸ್ವಲ್ಪ ಕಾಲಾವಕಾಶ ಕೊಟ್ಟಿದ್ದೀರಿ. ಈ ಅರಣ್ಯದ ಸಮಸ್ಯೆ ಬಗ್ಗೆ ಹೇಳಿಕೊಳ್ಳದೇ ಹೋದರೆ ಇವರಿಗೆ ಏನೂ ಅನಿಸುವುದೇ ಇಲ್ಲ.

ಅಧ್ಯಕ್ಷರು:– You have really done well.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ಕರ್ಪಗಲ್ಲು ರಸ್ತೆ ಮಾಡಿದ್ದಾರೆಂದು ನಮ್ಮ ಮೇಲೆ case ಹಾಕಿದ್ದಾರೆ. ಆ report ನಲ್ಲಿ ಏನಿದೆ ಎಂದರೆ ಹೊಸ ರಸ್ತೆ 10 ಕಿ.ಮೀ. ಅನ್ನು ಒಂದೇ ದಿವಸದಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೇ? ಹಾಗಾದರೆ road ಮಾಡುವುದಕ್ಕೆ ನಮ್ಮನ್ನೇ ಬಿಟ್ಟುಬಿಟ್ಟರೆ ಸಾಕು. ನಾವು ಒಂದು ದಿವಸಕ್ಕೆ 10 ಕಿ.ಮೀ. ರಸ್ತೆ ಮಾಡಿಕೊಂಡು ಹೋಗುತ್ತೇವೆ. ಈ ರೀತಿ caseನಲ್ಲಿ ಅವರು ಕೊಟ್ಟಿರುವಂಥದ್ದು. 2–3 ಜನ ಶಾಸಕರು ಸೇರಿಕೊಂಡು ಸಾರ್ವಜನಿಕರನ್ನು ಸೇರಿಸಿಕೊಂಡು 10 ಕಿ.ಮೀ. ರಸ್ತೆಯನ್ನು ಹೊಸದಾಗಿ forest ನೊಳಗೆ ಮಾಡಿದ್ದಾರೆ ಎಂದು case ಹಾಕಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಆ Wild Life Area ದ್ದು ಇವತ್ತಿನವರೆಗೂ boundary fix ಮಾಡಿಲ್ಲ.

ಅಧ್ಯಕ್ಷರು:– ಮಾನ್ಯ ಅರಣ್ಯ ಸಚಿವರೆ, ಶಾಸಕರು ಇವರೆಲ್ಲ ಸೇರಿ ಮಾಡುವಾಗ ಸ್ವಲ್ಪ ನಿಯತ್ತಿನಿಂದ ನಡೆದುಕೊಳ್ಳುವುದಕ್ಕೆ ಕಲಿತುಕೊಳ್ಳಲಿ. ನಿಮ್ಮ ಸ್ಥಳೀಯ ಅಧಿಕಾರಿಗಳಿಗೆ ಹೇಳಿ.

ಶ್ರೀ ಬಿ. ರಮಾನಾಥ ರೈ:– ನಮ್ಮ ಕಾಲದಲ್ಲಿ ಆಗಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಅಲ್ಲ, ಇವರ ಕಾಲದಲ್ಲಿ ಅಲ್ಲ.

ಅಧ್ಯಕ್ಷರು:– ಯಾರ ಕಾಲದಲ್ಲಾದರೂ ಆಗಿರಲಿ.

ಶ್ರೀ ಕೆ.ಜಿ. ಬೋಪಯ್ಯ:– ನಮ್ಮ ಕಾಲದಲ್ಲಿ ಆಗಿದ್ದಕ್ಕೆ ಅನುಭವಿಸುತ್ತಿದ್ದೇವೆ. ನಾನೇನು ನಮ್ಮ ಅರಣ್ಯ ಮಂತ್ರಿಗಳನ್ನೂ ಬಿಟ್ಟಿಲ್ಲ. ನಿಮ್ಮ ಅನಂತ ಹೆಗಡೆಯವರನ್ನೂ ಬಿಟ್ಟಿಲ್ಲ. ಯಾರನ್ನೂ ಬಿಟ್ಟಿಲ್ಲ. ನಿಮ್ಮ ಅನಂತ ಹೆಗಡೆ ಆ ಶಿಷ್ಯರನ್ನೂ ಬಿಟ್ಟಿಲ್ಲ.

ಶ್ರೀ ಬಿ. ರಮಾನಾಥ ರೈ:– ಅವರ ಕಾಲದಲ್ಲಿ ಆಗಿರುವಂಥ ದ್ದು. ಅದಕ್ಕೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮಿಂದ ಏನು ಸಹಾಯ ಆಗಬೇಕೋ ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:- ಯಾರ ಕಾಲದಲ್ಲಾದರೂ ಆಗಲಿ, ನೀವು boundary fix ಮಾಡಬೇಕು. ನೀವು ನಾಗರಹೊಳೆಗೆ ಯಾವ ರೀತಿ trench ಗಳನ್ನು ಮಾಡಿದ್ದೀರಿ ಇದಕ್ಕೂ ಮಾಡಿ. ಏಕೆ ಮಾಡುವುದಕ್ಕಾಗುವುದಿಲ್ಲ? Wild Life ಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆಯಲ್ಲಾ. ಆನೆಗಳನ್ನು ಒಂದಿಷ್ಟು ತಡೆಯಬಹುದು. ಇನ್ನು ಆ 3 ರಸ್ತೆಗಳ ಬಗ್ಗೆ ನಿಮ್ಮ ಗಮನಕ್ಕೂ ತಂದಿದ್ದೇನೆ. ಅಲ್ಲಿ Wild Life Act ಪ್ರಕಾರ alternate land ಕೊಡಬೇಕು. ನಾವು 3 ರಸ್ತೆಗಳಿಗೆ forest land ಬೇಕಾಗಿದ್ದದ್ದು 3 ಎಕರೆ. ಆದರೆ, ಇವರಿಗೆ 25 ಎಕರೆ alternate land ಕೊಟ್ಟುಬಿಟ್ಟಿದ್ದೇವೆ. ಆದರೂ, ಇವತ್ತಿಗೂ permission ಕೊಟ್ಟಿಲ್ಲ. ಅದು ಹಿಂದಿನ ಸರ್ಕಾರದ ತಪ್ಪು. ಹಿಂದಿನ ಸರ್ಕಾರ ಒಬ್ಬರು ಅಧ್ಯಕ್ಷರನ್ನು ಕೂರಿಸಿದ್ದರು. ಕ್ರಿಕೆಟ್ ಆಡುವುದು ಬಿಟ್ಟು ಅವರಿಗೆ ಅರಣ್ಯವನ್ನು ಕೊಟ್ಟರು. ಕ್ರಿಕೆಟ್ ಆಡುವುದನ್ನು ಕಲಿಸಿಕೊಂಡು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಇವರು ತಂದು forest ನಲ್ಲಿ ಕೂರಿಸಿದರು. ಕ್ರಿಕೆಟ್ ಆಡುವುದನ್ನು ಮೊದಲು ಕಲಿಸಬೇಕಾಗಿತ್ತು. ನಾನು ಆಗ ಹೇಳುವುದನ್ನೆಲ್ಲ ಹೇಳಿದ್ದೇನೆ. ಈಗ ಮಾನ್ಯ ಸಭಾಧ್ಯಕ್ಷರು ಹೇಗೆ ಹೇಳುತ್ತಿದ್ದಾರೆ ಅಷ್ಟೇ ಕಠಿಣವಾಗಿಯೂ ನಾನು ಹೇಳಿದ್ದೇನೆ. ಆದರೆ, ಇವತ್ತಿಗೂ ಆಗಿಲ್ಲ. ಕೇಳಿದರೆ, ಅದು Wild Life Board, State Wild Life Board ಗೆ ಮಂತ್ರಿಗಳು ಅಧ್ಯಕ್ಷರು. ಕ್ರಿಕೆಟ್ ಆಡುವವರಿಗೆ ಅದನ್ನು ಕೊಟ್ಟುಬಿಟ್ಟರು. ಮಾಡಲೇ ಇಲ್ಲ. ಇನ್ನಾದರೂ ಅದನ್ನು clear ಮಾಡಿ. Clear ಮಾಡಿ, ಏಕೆ? Forest ಬಗ್ಗೆ ಕಾಳಜಿ ಇರುವವರನ್ನು ಮಾಡಿ. ಆನೆಗಳು ಉಳಿಯಬೇಕು, ಜನರು ಉಳಿಯಬೇಕು, ಕಾಡು ಉಳಿಯಬೇಕು, ಅಂಥವರನ್ನು ಮಾಡಿ, ನಾನು ಒಪ್ಪುತ್ತೇನೆ. ಹಾಗಾಗಿ ಈ ಅರಣ್ಯ ಪ್ರದೇಶದಲ್ಲಿ ಆನೆಗಳಿಗೆ food ಆಗುವಂಥ ಗಿಡಗಳನ್ನು ಬೆಳೆಸಿ. ಈಗ ನಮ್ಮ ಜಿಲ್ಲೆ acacia ವನ್ನು ಬೆಳೆಸುವುದಕ್ಕೆ ಬಿಡುತ್ತಿಲ್ಲ. ಈ ಬಗ್ಗೆ ಜಿಲ್ಲಾ ಪಂಚಾಯತ್‌ನಲ್ಲಿ resolution ಮಾಡಿ ಬೆಳೆಸುವುದಕ್ಕೆ ಬಿಡುತ್ತಿಲ್ಲ.

ಅಧ್ಯಕ್ಷರು:- Good.

ಶ್ರೀ ಕೆ.ಜಿ. ಬೋಪಯ್ಯ:- ಈಗಲ್ಲ, 2006ನೇ ಇಸವಿಯಲ್ಲಿಯೇ ಮಾಡಿದ್ದೇವೆ.

ಅಧ್ಯಕ್ಷರು:– ಒಳ್ಳೆಯ ಕೆಲಸ ಮಾಡಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ:– ಹಾಗೆಯೇ ನೀಲಗಿರಿ eucalyptus ನೆಡಕೂಡದು. Teak ನಡಕೂಡದು ಎಂದು ಮಾಡಿದ್ದೇವೆ. ನಾಗರಹೊಳೆಯಂಥ ಅರಣ್ಯದೊಳಗೆ ತಾವು ಹೋಗಿ ಅಧ್ಯಕ್ಷರೆ.

ಅಧ್ಯಕ್ಷರು:– ನಾನು ಹೋಗಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ:– ಅಲ್ಲಿ ಕೇವಲ Teak wood ಇದೆ. ಅದನ್ನು ಯಾರಾದರೂ ನೆಡುತ್ತಾರೆಯೇ? ನಾನು ಬಹಳಷ್ಟು ಸಲ ವಿನಂತಿ ಮಾಡಿದೆ. ಕೇಂದ್ರ ಸರ್ಕಾರದಿಂದ ಅನುಮತಿ ತೆಗೆದುಕೊಂಡು ಆ teak wood ಅನ್ನು ಹಂತ ಹಂತವಾಗಿ ತೆಗೆದು ಅಲ್ಲಿ ಪ್ರಾಣಿಗಳಿಗೆ ಅನುಕೂಲವಾಗುವಂಥ ಮರಗಳನ್ನು ನೆಡಬೇಕೆಂದು ವಿನಂತಿ ಮಾಡಿದ್ದೆ. ಅಲ್ಲಿ ನೀರು ಸಾಕಷ್ಟು ಇದೆ. ಆದರೆ, teak wood ನಿಂದಾಗುವ ಪರಿಣಾಮ ಏನೆಂದರೆ ಬೇಸಿಗೆಯಲ್ಲಿ ಆ ಮರದ ಎಲೆಗಳು complete ಕೆಳಗೆ ಬಿದ್ದು ಅದು ಒಂದು petrol ಇದ್ದ ಹಾಗೆ. ಅದಕ್ಕೆ ಬೆಂಕಿ ಹತ್ತಿಬಿಟ್ಟರೆ petrol ಸಹ ಬೇಡ. ಆ ತರಹ ಬೆಂಕಿ ಹತ್ತಿಕೊಂಡು ಉರಿಯುತ್ತದೆ.

ಅಧ್ಯಕ್ಷರು:– ಅಲ್ಲಿ ಏನೂ ಬೆಳೆಯುವುದಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಹಾಗೇ ಆಗುತ್ತಿರುವುದು. ಏನೂ ಬೆಳೆಯುವುದಿಲ್ಲ. Acacia ದ್ದೂ ಅಷ್ಟೆ. ನಮ್ಮಲ್ಲಿ ಬೆಟ್ಟ ಸಾಲುಗಳು ಇತ್ತು. ಅಲ್ಲಿ ದರ್ಬೆ ಹುಲ್ಲು ಎಂದು ಬೆಳೆಯುತ್ತಿದೆ. ಆ ದರ್ಬೆ ಹುಲ್ಲನ್ನು ಕಾಡುಕೋಣ, ಜಿಂಕೆ, ಕಡವೆ ಇವೆಲ್ಲ ಮೇಯ್ದು ಆರಾಮದಲ್ಲಿ ನಮ್ಮ ಏಲಕ್ಕಿ ತೋಟದ ಒಳಗೆ ಏನೂ ಗಲಾಟೆ ಮಾಡದೆ ಅವರಿಷ್ಟಕ್ಕೆ ಇರುತ್ತಿದ್ದವು. ಇವರು ಬಂದು ಸಾಮಾಜಿಕ ಅರಣ್ಯವೆಂದು ಎಲ್ಲಾ ಕಡೆ acacia ನೆಟ್ಟು ಈಗ ದರ್ಬೆ ಹುಲ್ಲು ಕಾಣುವುದಿಲ್ಲ, ಈ ಚೀಪೆ ಅದು ಇತ್ತು, ಅದೂ ಕಾಣುವುದಿಲ್ಲ. ಮೊದಲು ಹೇಗಿತ್ತು ಎಂದರೆ ನಾವೆಲ್ಲ ಬೆಟ್ಟಕ್ಕೆ ಹೋದರೆ ಆ ದನಗಳು ಆ ಹುಲ್ಲಿನೊಳಗೆ ನಮಗೆ ಕಾಣಿಸುತ್ತಲೇ ಇರಲಿಲ್ಲ. ಒಂದೆರಡು ದನ ಅಲ್ಲಿಂದ ಬರದೇ ಇದ್ದರೆ. ಅದಕ್ಕೋಸ್ಕರ ನಾವು ಮನೆಯಲ್ಲಿ ಬೈಸಿಕೊಳ್ಳುತ್ತಿದ್ದೆವು. ಇದನ್ನೆಲ್ಲ ಅರಣ್ಯ

ಇಲಾಖೆಯವರು ಹಾಳು ಮಾಡಿದ್ದಾರೆ. ಇದೆಲ್ಲವನ್ನು ನಿಲ್ಲಿಸುವಂಥ ಕೆಲಸ ಆಗಲೇ ಬೇಕು. Teak wood ಅನ್ನು ಎಲ್ಲಿ ಬೇರೆ ಮರಗಿಡಗಳು ಬೆಳೆಯುವುದಿಲ್ಲವೋ ಅಲ್ಲಿ ಹಂತ ಹಂತವಾಗಿ ಬೆಳೆಯಲಿ. ನಿಮ್ಮ ಅರಣ್ಯ ವಿಸ್ತರಣೆ ಮಾಡುವುದು, ಅದು ಎಲ್ಲಿ ಮಾಡಬೇಕೆಂದರೆ, ಕೊಡಗು ಜಿಲ್ಲೆಯಲ್ಲಿ ಸ್ವಲ್ಪ ಮರಗಿಡಗಳು ಉಳಿದಿವೆ. ಬೇರೆ ಜಿಲ್ಲೆಗಳಲ್ಲೂ ಒಂದಿಷ್ಟು ಮಾಡಿ. ಏಕೆ ಮಾಡಬಾರದು? ಈ ಉಷ್ಣಾಂಶ ಇನ್ನೊಂದು ತಡೆಯಬೇಕಾದರೆ ಮಲೆನಾಡಿನಲ್ಲಿ ಮಾತ್ರ ರಕ್ಷಣೆಯಾದರೆ ಸಾಕೇ? ಬಯಲುಸೀಮೆಯಲ್ಲಿ ಅರಣ್ಯ ಬೇಡವೇ? ಒಂದಿಷ್ಟು sampleಗಾದರೂ ಅರಣ್ಯ ಮಾಡಬೇಕೆಂದು ನನ್ನ ಸಲಹೆ. ಹಾಗೆ ಮಾಡಿದರೆ ಎಲ್ಲಾ ಕಡೆ ಸಮತೋಲನವಾಗುತ್ತದೆ. ಅದನ್ನು ಮಾಡುವಂಥ ಕೆಲಸ ಆಗಬೇಕು. ಹಾಗೆಯ ಆನೆಗಳಿಂದ ತೊಂದರೆಗೊಳಗಾದವರಿಗೆ ಏನು ಪರಿಹಾರ ಕೊಡುತ್ತಿದ್ದೀರಿ, ಅದನ್ನು ದಯವಿಟ್ಟು 50 ಪಾಲಾದರೂ ಜಾಸ್ತಿ ಮಾಡಿ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಕಳೆದ 50 ವರ್ಷಗಳಲ್ಲಿ ಅರಣ್ಯ ಬೆಳೆಸುವುದಕ್ಕೆ ಅರಣ್ಯ ಇಲಾಖೆ ಖರ್ಚು ಮಾಡಿರುವುದು ಹಣ ಎಷ್ಟು? ಬೆಳೆಸಿರುವ ಅರಣ್ಯ ಎಷ್ಟು? ಒಂದು ಸಮೀಕ್ಷೆ ನಡೆಸಿ ಈ ಬಗ್ಗೆ ಶ್ವೇತಪತ್ರ ಹೊರಡಿಸಿ ಬಿಚ್ಚಿಟ್ಟರೆ ಎಷ್ಟು ಅರಣ್ಯ ಬೆಳೆಸಿದ್ದಾರೆ, ಅರಣ್ಯ ಇಲಾಖೆ ಅರಣ್ಯ ಬೆಳೆಸಿ ಏನು ಮಾಡಿದೆ ಎನ್ನುವುದು ಗೊತ್ತಾಗುತ್ತದೆ. ಯಾವ್ಯಾವ ಜಿಲ್ಲೆಯಲ್ಲಿ ಬೆಳೆಸಿದ್ದಾರೆಂಬುದರ ಮಾಹಿತಿಯನ್ನು ಕೊಡಲಿ. ಇದಕ್ಕೆ ಸದನ ಸಮಿತಿ ಏನೂ ಬೇಡ. ಸದನದ ಮುಂದೆ ತಂದು ಇಡಲಿ. ಮಾನ್ಯ ಅರಣ್ಯ ಖಾತೆ ಸಚಿವರೆ, ನಿಮ್ಮ ಕಾಲದಲ್ಲಿ ಎಂದಲ್ಲ, ಕಳೆದ 50 ವರ್ಷಗಳಲ್ಲಿ ಅರಣ್ಯ ಇಲಾಖೆ ಅರಣ್ಯ ಬೆಳೆಸುವುದಕ್ಕೆ ಖರ್ಚು ಮಾಡಿದ ಹಣವೆಷ್ಟು? ಬೆಳೆಸಿರುವ ಅರಣ್ಯ ಎಷ್ಟು?

ಅಧ್ಯಕ್ಷರು:– ಈಗ ಹಳೆಯದ್ದನ್ನೆಲ್ಲ ನೆನೆಸಿಕೊಂಡು ಕುಳಿತರೆ.... ಊರಿಲ್ಲ, ಉದಯಮನೆ ಇಲ್ಲ. ಈಗ ಏನು ಮಾಡಬೇಕು, ಮುಂದೆ ಹೇಗೆ ನಡೆಯಬೇಕು ಅದರ ಬಗ್ಗೆ ಚಿಂತನೆ ಮಾಡಿ ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ:– ಅರಣ್ಯ ಇಲಾಖೆಯವರು ಖರ್ಚು ಮಾಡಿರುವಷ್ಟಕ್ಕೆ ನಿಜವಾಗಿ ಗಿಡ ಬೆಳೆಸಿದ್ದರೆ ಮನುಷ್ಯರೇ ಇರುತ್ತಿರಲಿಲ್ಲ. ಊರೆಲ್ಲ ಕಾಡಾಗಿರುತ್ತಿತ್ತು. ಸೊಳ್ಳೆ ಸಹಿತ pass ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅಷ್ಟು ಕಾಡು ಬೆಳೆದಿರುವುದು. ಅಷ್ಟು ಹಣ ಖರ್ಚು ಮಾಡಿದ್ದಾರೆ.

ಅಧ್ಯಕ್ಷರು:– ಕಾಡು ಇರುವುದು ಇದ್ದೇ ಇದೆ.

ಶ್ರೀ ಕೆ.ಜಿ. ಬೋಪಯ್ಯ:– ಕಾಡು ಧಾರಾಳವಾಗಿ ಇದೆ. ಅದನ್ನು ಉಳಿಸುವಂಥ ಕೆಲಸ ಪ್ರಾಮಾಣಿಕವಾಗಿ ಆಗಬೇಕು. ಪರಿಹಾರ ಕೊಡುವಂಥದ್ದರ ಬಗ್ಗೆ ಹೇಳುವುದಾರೆ, ಕಾಡು ಪ್ರಾಣಿಗಳಿಂದ ಮನುಷ್ಯ ಸತ್ತರೆ ಅವನ ಕುಟುಂಬಕ್ಕೆ ಪರಿಹಾರ ಕೊಡುವುದು ಏನೇನೂ ಸಾಲದು. ಒಂದು ಜೀವಕ್ಕೆ 5 ಲಕ್ಷ ರೂ.ಗಳ ಬೆಲೆ ಕಟ್ಟುತ್ತೀರಲ್ಲಾ.

ಅಧ್ಯಕ್ಷರು:– ಮಾಜಿ ಕೇಂದ್ರ ಸಚಿವರೊಬ್ಬರು ಮಂಗಳೂರಿನಲ್ಲಿ ಹೇಳಿದ್ದಾರೆ, ಅದು ಯಾರೋ ಗುಂಡು ಹೊಡೆದಾಗ ಒಬ್ಬರು ಸತ್ತರಲ್ಲ, ಅವನಿಗೆ ಪರಿಹಾರವಾಗಿ 50 ಲಕ್ಷ ರೂ. ಕೊಡಬೇಕೆಂದು ಹೇಳಿದರಂತೆ. ಅಲ್ಲವೇನ್ರಿ.

ಶ್ರೀ ಕೆ.ಜಿ. ಬೋಪಯ್ಯ:– ಹೌದು, ಶೃಂಗೇರಿಯದು. ಮೊದಲು ಪರಿಹಾರ ರೂಪದಲ್ಲಿ ಒಂದು ಲಕ್ಷ ರೂ.ಗಳನ್ನು ಮಾತ್ರ ಕೊಡುತ್ತಿದ್ದರು. ಮೈಸೂರು ಸಿಟಿಯೊಳಗೆ ಒಬ್ಬರು ಸತ್ತುಹೋದರು. ಸಿಟಿಯವರು ಗಲಾಟೆ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಆಗಿನ ಸರ್ಕಾರ ಪರಿಹಾರ 5 ಲಕ್ಷ ರೂ.ಗಳೆಂದು ಮಾಡಿತು. ಒಬ್ಬ ಮನುಷ್ಯನ ಬೆಲೆ ಈಗ 5 ಲಕ್ಷ ರೂ. ಎರಡು ವರ್ಷಗಳ ಹಿಂದೆ ಒಬ್ಬ ಕಾರ್ಮಿಕ ಸತ್ತುಹೋದ. ಅವನು ಕಷ್ಟಪಟ್ಟು ಅವನ ಮಗಳನ್ನು Medical ಓದಿಸುತ್ತಿದ್ದ. ಅವರ ಗತಿ ಏನು? ಇವರು ಕೊಡುವ 5 ಲಕ್ಷ ರೂ. ಅವರಿಗೆ ಸಾಕಾಗುತ್ತದೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅಲ್ಲಿರುವ body ಬೇರೆ, ಮೈಸೂರಿನಲ್ಲಿರುವ body ಬೇರೆ.

ಶ್ರೀ ಕೆ.ಜಿ. ಬೋಪಯ್ಯ:- ಹಾಗಾಗಿ ಈ ರೀತಿ ನೀಡುವ ಪರಿಹಾರವನ್ನು ಜಾಸ್ತಿ ಮಾಡಬೇಕು. ಇನ್ನು ಬೆಳೆ ನಾಶದ ವಿಚಾರವಾಗಿ ಕೊಡಗಿನಲ್ಲಿ crop assessment ಮಾಡುವಂಥದ್ದು ಯಾರಾದರೂ ಕೃಷಿ ಇಲಾಖೆಯವರು ಮಾಡಲಿ. ಯಾರೋ Forest ನವರು ಹೋಗುತ್ತಾರೆ, ಮಹಜರ್ ಮಾಡುತ್ತಾರೆ, ಮಹಜರ್ ಮಾಡಿದರೂ ಅಲ್ಲಿ damage ಆಗಿರುವುದರ ಲೆಕ್ಕ ಇಲ್ಲ. ಎಕರೆಗೆ ಇಂತಿಷ್ಟು ಎಂದು ಇದೆ. ಒಂದು ಎಕರೆ ಬೆಳೆ ನಾಶವಾದರೆ ಅದಕ್ಕೆ ಕೇವಲ 250 ರೂ. ಸಹ ಕೊಡುವುದಿದೆ ಮಾನ್ಯ ಅಧ್ಯಕ್ಷರೆ. ಒಂದು ಎಕರೆ ಗದ್ದೆಗೆ 250 ರೂ. Fix ಮಾಡುತ್ತಾರೆ. ದಯವಿಟ್ಟು ಈ ರೀತಿ ಮಾಡಬೇಡಿ. ಯಾರೂ ಕೃಷಿ ಮಾಡದೆ ಪರಿಸ್ಥಿತಿ ಇದೆ. ನಾವೇ ಗದ್ದೆ ಕೃಷಿ ಮಾಡದೆ 20 ವರ್ಷ ಆಯಿತು. ಹಾಗಾಗಿ ಇದಕ್ಕೆ ಸಮಗ್ರ ಬದಲಾವಣೆ ತರಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಏನಿದ್ದಾರೆ, ಅವರು ಆ Forest ಕಾಯಿದೆಯಂತೆ ಅದನ್ನು ತಪ್ಪಾಗಿ ಅರ್ಥೈಸಿ ಜನರಿಗೆ ಕಾಟ ಕೊಡುವುದನ್ನು ನಿಲ್ಲಿಸಬೇಕು. Forest ಕಾಯಿದೆಯಲ್ಲಿ ಏನಿದೆ ಅದನ್ನು ಅನುಷ್ಠಾನ ಮಾಡುವುದಕ್ಕೆ Procedure, Rules, Regulations ಎಲ್ಲವೂ ಇದೆ. ಅದು ಬಿಟ್ಟು we are the superior ಎಲ್ಲಾ ಆದೇಶಗಳು ಅವರಿಂದಲೇ ಹೊರಡುತ್ತದೆ. ನಿಮಗೂ ಬರುವುದಿಲ್ಲ, ನಿಮ್ಮ Principal Secretary ಯವರಿಗೂ ಬರುವುದಿಲ್ಲ, that must be stopped from the Aranya Bhavan. ಅರಣ್ಯ ಭವನ ಇರುವುದು ಅದಕ್ಕಲ್ಲ. ಇದನ್ನು ಮಾಡಬೇಕೆನ್ನುವ ವಿನಂತಿ ಇದೆ. ಒಟ್ಟಿನಲ್ಲಿ ಸಮಗ್ರ ಬದಲಾವಣೆಯನ್ನು ಈ ಇಲಾಖೆಯಲ್ಲಿ ತರುವಂಥ ಕೆಲಸ ತಮ್ಮ ನಾಯಕತ್ವದಲ್ಲಿ ಆಗಬೇಕೆನ್ನುವುದು ನನ್ನ ಅಪೇಕ್ಷೆ ಇದೆ. ಅದಕ್ಕೆ ತಾವು ಸಹಕಾರವನ್ನು ಮಾಡಬೇಕು. ಅರಣ್ಯ ಇಲಾಖೆ ಎನ್ನುವುದು ಅದು ಜನಪರ ಇಲಾಖೆ ಆಗಬೇಕು. ಆನರು ಶಾಪ ಹಾಕುವಂಥದ್ದು, ಅದರ ಬಗ್ಗೆ ಅಸಹ್ಯ ಇವತ್ತು ಏನು ತುಂಬಿಕೊಂಡಿದೆ, ಅದನ್ನು ತೆಗೆದು ಪರಿಸರವನ್ನು ಉಳಿಸಬೇಕೆಂದಿದೆ. ಅದಕ್ಕೆ ಪೂರಕವಾದ ಕೆಲಸವನ್ನು ಮಾಡಲಿಕ್ಕೆ ತಾವು ಯೋಜನೆಗಳನ್ನು ಹಾಕಬೇಕೆಂದು ಹೇಳಿ, ಅಧ್ಯಕ್ಷರು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದಾರೆ, ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಟಿ. ಪಾಟೀಲ್ (ಬೀಳಗಿ):– ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಕಡೆಯಿಂದ ಮೊದಲನೆ ಬಾರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ತುಂಬಾ ಧನ್ಯವಾದಗಳು. ನಮ್ಮ ಜಿಲ್ಲೆಯಲ್ಲಿ 838 ಚದರ ಕಿ.ಮೀ. ವಿಸ್ತಾರದಲ್ಲಿ ಅರಣ್ಯವಿದೆ. ನಮ್ಮ ಜಿಲ್ಲೆಯಲ್ಲಿ ಒಟ್ಟಾರೆಯಾಗಿ 12.72% ಅರಣ್ಯ ಪ್ರದೇಶವಿದೆ. ಅರಣ್ಯ ಎನ್ನುವುದು ಹೆಸರಿಗೆ ಹೇಳಲಿಕ್ಕೆ ಮಾತ್ರ ಇದೆ. ಕುರುಚಲು ಗಡ್ಡದ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಅರಣ್ಯವಿದೆ. ನಾನು 2009ನೇ ಇಸವಿಯಲ್ಲಿ Washington City ಗೆ ಹೋದಾಗ ಅಲ್ಲಿ ಒಂದು lake ನೋಡಲಿಕ್ಕೆ ಹೋಗಿದ್ದೆ. ಅಲ್ಲಿ lake ನೋಡುವ ಸಂದರ್ಭದಲ್ಲಿ ಅಲ್ಲಿ ದಟ್ಟವಾದ ಒಂದು ಅರಣ್ಯ ನೋಡಿದೆ. ಅಲ್ಲೊಂದು ನಾಮಫಲಕವಿತ್ತು. 'This forest is planted in the year 1825 and this forest is planted for the next generation' ಎಂದು Board ಇತ್ತು. ಅಲ್ಲಿ ಒಂದೇ ಒಂದು ಗಿಡ cut ಆಗಿದ್ದಾಗಲಿ, ಕಡಿದು ಹೋಗಿದ್ದಾಗಲಿ ನೋಡಲಿಲ್ಲ. ಇನ್ನೊಂದು ಕಡೆಯಲ್ಲೂ ನಾನು ಅರಣ್ಯವನ್ನು ನೋಡಿದ್ದೇನೆ. Seattle City ಯೊಳಗೆ 15 ರಿಂದ 20 foot ಉದ್ದ ಇದ್ದಂಥ ಗಿಡಗಳನ್ನು ನೋಡಿದಾಗ ಅದ್ಭುತವಾಗಿತ್ತು. 50 ರಿಂದ 60 foot ಅಡಿ ಎತ್ತರದಲ್ಲಿ ಬೆಳೆದಂಥ ಮರಗಳನ್ನು ನೋಡಿದೆ. ಅಲ್ಲಿಯ ಅರಣ್ಯ ಮತ್ತು ನಮ್ಮಲ್ಲಿಯ ಅರಣ್ಯವನ್ನು ನೋಡಿದಾಗ ನಿಜವಾಗಿಯೂ ದುಃಖವಾಗುತ್ತದೆ. ನಾನು ಇಡೀ ದೇಶದ ಅಥವಾ ರಾಜ್ಯದ್ದು ಹೇಳುವುದಿಲ್ಲ. ನಮ್ಮ ಅರಣ್ಯದ ಸ್ಥಿತಿಗತಿಯನ್ನು ನೋಡಿದಾಗ ಬ್ರಿಟಿಷರ ಕಾಲದಲ್ಲಿ ನಮ್ಮ ರಾಜ್ಯಲ್ಲಿ 37% ಗಿಂತಲೂ ಹೆಚ್ಚು ಅರಣ್ಯವಿತ್ತು. ಆದರೆ, ಈಗಿನ ಅಂಕಿಸಂಖ್ಯೆ ಪ್ರಕಾರ 22%ಗೆ ಬಂದಿದೆ. ಇದರಿಂದ ಎಷ್ಟು ಉತ್ತಮವಾದಂಥ ಅರಣ್ಯ ಇದೆ ಎನ್ನುವುದನ್ನು ಇವತ್ತು ನಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ನಮ್ಮ ಮಾಜಿ Speaker ರವರು ಶ್ರೀಗಂಧದ ಗಿಡದ ಬಗ್ಗೆ ಏನೋ ಒಂದು ಮಾತನ್ನು ಹೇಳುವ ಸಂದರ್ಭದಲ್ಲಿ, ನನಗೊಂದು ನೆನಪಾಯಿತು. ನನ್ನ ಸ್ನೇಹಿತರೊಬ್ಬರ ಮನೆ ಧಾರವಾಡ ಸಿಟಿ ಮಧ್ಯದಲ್ಲಿ ಇದ್ದು ಮನೆ ಬದಿಯಲ್ಲಿಯೇ ಒಂದು ಗಂಧದ ಮರ ಇತ್ತು. ನನ್ನ ಮನೆ ಆವರಣದೊಳಗೆ ಗಂಧದ ಮರ ಇದೆ, ಅದಕ್ಕೆ ದಯಮಾಡಿ ಬೆಲೆ ಕಟ್ಟಿರಿ ಎಂದು ಅವರು

ಅರಣ್ಯ ಇಲಾಖೆಗೆ ಅರ್ಜಿ ಕೊಡುವವರೆಗೂ ಇವರ ರಕ್ಷಣೆಯೊಳಗಡೆ ಇತ್ತು. ಯಾವಾಗ ಇವರು ಅರಣ್ಯ ಇಲಾಖೆಗ ಅರ್ಜಿ ಕೊಟ್ಟರೋ, ಅಂದರೆ ಇದು 1988ನೇ ಇಸವಿಯಲ್ಲಿ ನಡೆದಿರುವಂಥದ್ದು. ಅದಕ್ಕ 65 ಸಾವಿರ ರೂ. ಬೆಲೆ ಕಟ್ಟಿದ್ದ ಮೂರೇ ದಿವಸದಲ್ಲಿ ಆ ಮರ ಕಳವು ಆಗಿಹೋಯಿತು. ನಮ್ಮಲ್ಲಿಯೂ ಸಹಿತ ಬಾಗಲಕೋಟೆ ಜಿಲ್ಲೆಯಲ್ಲಿ ಈ ಅರಣ್ಯ ಇಲಾಖೆಯ ಕೆಳಮಟ್ಟದ ಅಧಿಕಾರಿಗಳ ಒಂದು ಸಹಭಾಗಿತ್ವದಲ್ಲಿ ಅರಣ್ಯ ಹಾಳಾಗುತ್ತಿದೆ ಎನ್ನುವ ಮಾತನ್ನು ಸಹಿತ ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ 2004–05 ರಿಂದ 2013–14ರವರೆಗೆ ಒಟ್ಟು Social Forestry ಯಲ್ಲಿ ಅರಣ್ಯ ಬೆಳೆಸಲಿಕ್ಕೆ 75 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ರಸ್ತೆ ಬದಿಯಲ್ಲಿರುವ ಗಿಡಗಳನ್ನು ರಕ್ಷಣೆ ಮಾಡುವವರು ಯಾರೂ ಇಲ್ಲವೇ ಇಲ್ಲ. ದಿನಂಪ್ರತಿ ಮಾರಣಹೋಮ ಆಗುತ್ತಿದೆ. ಯಾವುದೇ ರಸ್ತೆಗಳ ಬದಿಯಲ್ಲಿರುವ ಗಿಡಗಳನ್ನು ರಕ್ಷಣೆ ಮಾಡಲಿಕ್ಕೆ ಯಾರೇ ಅಧಿಕಾರಿಗಳು ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅದಕ್ಕೆ ದಯಮಾಡಿ ಇದರ ಜವಾಬ್ದಾರಿಯನ್ನು ಇಲಾಖೆಯ ಅಧಿಕಾರಿಗಳು ಹೊತ್ತುಕೊಳ್ಳಬೇಕೆನ್ನುವ ಮಾತನ್ನು ಹೇಳಬಯಸುತ್ತೇನೆ. ನನಗನ್ನಿಸುವುದೇನೆಂದರೆ, ಈ ಇಲಾಖೆಯ ಕೆಳಮಟ್ಟಡದ ಅಧಿಕಾರಿಗಳಲ್ಲಿ, ಅದು ಜಿಲ್ಲಾ ಮಟ್ಟದ ಅಧಿಕಾರಿಗಳಿರಬಹುದು, ತಾಲ್ಲೂಕು ಮಟ್ಟದ ಅಧಿಕಾರಿಗಳಿರಬಹುದು, ಅವರಲ್ಲಿ accountability ಇಲ್ಲವೇ ಇಲ್ಲ ಎಂದು ತಿಳಿದುಕೊಂಡು ನಾನು ಆರೋಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಎಲ್ಲಿಯವರೆಗೆ ಜವಾಬ್ದಾರಿ ಬರುವುದಿಲ್ಲ, ಇವರಿಗೆ accountability ಬರುವುದಿಲ್ಲ ಮತ್ತು ಅರಣ್ಯ ಬೆಳೆಸಬೇಕೆನ್ನುವ ಮನಸ್ಸು ಕೂಡ ಇವರಿಗೆ ಬರುವುದಿಲ್ಲವೋ ಅಲ್ಲಿಯವರೆಗೆ ಅರಣ್ಯ ರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ, ಅರಣ್ಯ ಬೆಳೆಯಲಿಕ್ಕೂ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಉದಾಹರಣೆಗಾಗಿ, ಬೀಳಗಿ ಕ್ಷೇತ್ರದಲ್ಲಿ 48 ಸಾವಿರ ಎಕರೆ ಅರಣ್ಯ ಇದೆ. ಅದೆಲ್ಲವೂ Reserve Forest ಆಗಿದೆ. 1964ನೇ ಇಸವಿಯೊಳಗೆ ನಮ್ಮ ಊರಿನ ಗುಡ್ಡದೊಳಗಡೆ ಚೀತಾಗಳಿದ್ದವು. ಅತ್ಯಂತ cruel animals ಇದ್ದವು. ಇವತ್ತು ಅಲ್ಲಿ ಮೊಲ

ಮತ್ತು ನರಿಗಳನ್ನು ಬಿಟ್ಟರೆ ಬೇರೆ ಯಾವುದೇ ಪ್ರಾಣಿಗಳನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಈ 48 ಸಾವಿರ ಎಕರೆ ಅರಣ್ಯದಲ್ಲಿ ಕನಿಷ್ಟ 25 ರಿಂದ 30 ಸಾವಿರ ಎಕರೆ ಅರಣ್ಯವನ್ನು ಸರ್ಕಾರದ ಮೇಲೆ ಯಾವುದೇ ಹಣಕಾಸಿನ ಭಾರ ಇಲ್ಲದೆ ಅರಣ್ಯ ಬೆಳೆಸಲಿಕ್ಕೆ ಸಾಧ್ಯವಿದೆ. ಅದಕ್ಕೆ ಒಂದೇ ಒಂದು ಬೇಕಾಗಿರುವುದು ಅದು ಮನಸ್ಸು. ಆ ಮನಸ್ಸನ್ನು ಇವತ್ತಿನವರೆಗೂ ಅಧಿಕಾರಿಗಳು ಮಾಡುತ್ತಿಲ್ಲ. ಇವತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆಗೆ ನಾನು Principal Secretary ಮದನಗೋಪಲಾಲ್‌ರವರ ಜೊತೆಗೂ ಸಹಿತ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಮಾನ್ಯ ಅರಣ್ಯ ಮಂತ್ರಿಯವರು ಇರಬಹುದು ಅಥವಾ ಉನ್ನತ ದರ್ಜೆಯ ಅಧಿಕಾರಿಗಳಿರಬಹುದು, ಒಂದು ಸಭೆಯನ್ನು ಮಾಡಿದರೆ ಸಾಕು. ನಾವು ಇವತ್ತು 25 ರಿಂದ 30 ಸಾವಿರ ಎಕರೆ ಅರಣ್ಯವನ್ನು ಕೇವಲ ಅಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಂದಲೇ ಬೆಳೆಸಲಿಕ್ಕೆ ಸಾಧ್ಯವಿದೆ. ದಯಮಾಡಿ ಆ ಕಾರ್ಯಕ್ರಮವನ್ನು ಮಾನ್ಯ ಅರಣ್ಯ ಮಂತ್ರಿಯವರು ರೂಪಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇವತ್ತು Peacock ಅನ್ನು National Bird ಎಂದು ಏನು ಕರೆಯುತ್ತೇವೆ, ನಮ್ಮ ಅರಣ್ಯದಲ್ಲಿ Peacocks ಸಾವಿರಾರು ಸಂಖ್ಯೆಯಲ್ಲಿವೆ. ಜೊತೆಗೆ ಚಿಂಕಾರ ಎನ್ನುವಂಥದ್ದು, Indian Gazelle ಎಂದು ಕರೆಯುತ್ತೇವೆ. South India ದಲ್ಲಿ ಇದು rare animal. ಇವತ್ತು 10–20 ಸಂಖ್ಯೆಯಲ್ಲಿ ಆ animal ನಮಲ್ಲಿ ಇವೆ. ಅದರ ರಕ್ಷಣೆ ಮಾಡುವಂಥ ಜವಾಬ್ದಾರಿಯನ್ನು ಸಹ ಅರಣ್ಯ ಇಲಾಖೆ ಕೈಗೆತ್ತಿಕೊಳ್ಳಬೇಕು. ಕಂದಗಲ್, ಹರಕಲ್ ಮತ್ತು ನಡುಗಡ್ಡೆ ನನ್ನ ಕ್ಷೇತ್ರದಲ್ಲಿ ಸಹಿತ ಬೇರೆ ಬೇರೆ ದೇಶಗಳಿಂದ 51 ನಮೂನೆಯ ಪಕ್ಷಿಗಳು ವಲಸೆ ಬರುತ್ತಿವೆ. ಅದರ ರಕ್ಷಣೆ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು. ಅಲ್ಲಿ ಆ ಪಕ್ಷಿಧಾಮವನ್ನು ಮಾಡಬೇಕಾಗಿದೆ. ಚಿಂಕಾರ ರಕ್ಷಣೆಗಾಗಿ Peacoak ರಕ್ಷಣೆ ಮಾಡುವುದಕ್ಕಾಗಿ ಪಕ್ಷಿಧಾಮ, ಪ್ರಾಣಿಧಾಮವನ್ನು ಸಹಿತ ತಾವು ಮಾಡಬೇಕು. ನಾನು ವಿಶೇಷವಾಗಿ ನಮ್ಮ ಅರಣ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ. ಬಾಗಲಕೋಟೆ

ಜಿಲ್ಲೆಗೆ ನೀವು ಒಮ್ಮೆ ಭೇಟಿ ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಚಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಏಳು ಹಳ್ಳಿಗಳನ್ನು ಹೊಂದಿದಂಥ ನಡುಗಡ್ಡೆ, ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಅದು ಸಂಪೂರ್ಣವಾಗಿ ನೀರಿನಿಂದ ಆವೃತ್ತಿಯಾಗಿದೆ. 10–12 ವರ್ಷಗಳಿಂದ ಈಗಾಗಲೇ ಅರಣ್ಯ ಇಲಾಖೆಯವರು ಗಿಡಗಳನ್ನು ಬೆಳೆಸಿದ್ದಾರೆ. ಅಲ್ಲಿ ಜಂಗಲ್ ಲಾಡ್ಜ್ ಮಾಡಲಿಕ್ಕೆ ಅವಕಾಶವಿದೆ. ಜೊತೆಗೆ ಚಿಕ್ಕಸಂಗಮ ಎನ್ನುವಂಥದ್ದು ಇದೆ, ನಮ್ಮ ಇಡೀ ರಾಜ್ಯದಲ್ಲಿ ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡಲಿಕ್ಕೆ ಸಾಧ್ಯವಿದೆ, ಅಲ್ಲಿ 55 ಎಕರೆ ಅರಣ್ಯ ಜಮೀನು ಇದೆ. ಅದನ್ನು ಉತ್ತಮ ರೀತಿಯಲ್ಲಿ ಬೆಳೆವಣಿಗೆ ಮಾಡಿದರೆ ಅಲ್ಲಿ ಸುಂದರವಾದ ಸಂಗಮನಾಥನ ದೇವಾಲಯವಿದೆ. ಬೋಟಿಂಗ್ ವ್ಯವಸ್ಥೆ ಮಾಡುವುದಕ್ಕೂ ಕೂಡ ಸಾಧ್ಯವಿದೆ. ಇದನ್ನು ಕಂದಗಲ್, ಹೆಗ್ಗೂರು, ಅಣಗವಾಡಿ, ಹೆರಕಲ್ ಹತ್ತಿರ ಪಕ್ಷಿಧಾಮ ಮಾಡಿದರೆ ನಿಶ್ಚಿತವಾಗಿ ನಮ್ಮ ಬಾಗಲಕೋಟ ಜಿಲ್ಲೆಯಲ್ಲಿ ಅತ್ಯಂತ ಸುಂದರ ಪ್ರವಾಸಿ ಕೇಂದ್ರವಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಒತ್ತಾಯವನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮಾಡುತ್ತೇನೆ. ನಮ್ಮ ಅರಣ್ಯದೊಳಗೆ ಸಾಕಷ್ಟು ತರಹದ ಕನಿಷ್ಟ ಹತ್ತು ತರಹದ ಕಾಡು ಹಣ್ಣುಗಳ ಮರಗಳಿವೆ. ಇರುವುದನ್ನು ರಕ್ಷಣೆ ಮಾಡಿದರೆ ಪಕ್ಷಿಗಳಿಗೆ ಆಹಾರ ಆಗುತ್ತದೆ. ನಾವು ಚಿಕ್ಕ ಹುಡುಗರಾಗಿದ್ದಾಗ ತಿಂದಂಥ ಆ ಹಣ್ಣಿನ ರುಚಿ ಇಂದು mango ಮತ್ತೊಂದು ನೂರೆಂಟು ಹಣ್ಣು ತಿಂದರೂ ಆ ರುಚಿ ಸಿಗುವುದಿಲ್ಲ. ಹೀಗಾಗಿ ಇವೆಲ್ಲಕ್ಕಿಂತಲೂ ಹೆಚ್ಚಿನ ರುಚಿಕರವಾದ ಕಾಡು ಹಣ್ಣಿನ ಗಿಡಗಳಿವೆ. ಅವುಗಳನ್ನು ಬೆಳೆಸಿದರೆ ಜನರಿಗೆ, ಪಕ್ಷಿಗಳಿಗೆ, ಜನರಿಗೆ ಅನುಕೂಲವಾಗುತ್ತದೆಂದು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದಕ್ಕೆ ಹಣ್ಣಿನ ಗಿಡಗಳನ್ನು ರಕ್ಷಿಸಲು ತಾವು ಕಾರ್ಯಕ್ರಮ ರೂಪಿಸಬೇಕೆಂದು ಹೇಳುತ್ತೇನೆ. ಜೊತೆಗೆ ಅರಣ್ಯ ಇಲಾಖೆಯಲ್ಲಿ ಮೇಲ್ಮಟ್ಟದಲ್ಲಿ ಸಾಕಷ್ಟು ಅಧಿಕಾರಿಗಳಿದ್ದಾರೆ. ಆದರೆ, ಕೆಳಮಟ್ಟದಲ್ಲಿ captains ಇದ್ದಾರೆ soldiers ಇಲ್ಲ. ನೀವು ಎಲ್ಲಿಯವರೆಗೆ ಪ್ರತಿಯೊಂದು ಇಲಾಖೆಯಲ್ಲಿ, ಗ್ರಾಮ ಸಹಾಯಕನಿಂದ ಹಿಡಿದು ಅಥವಾ ಲೈನ್‌ಮೆನ್‌ನಿಂದ ಹಿಡಿದು ನೀರುಗಂಟಿ, ಫಾರೆಸ್ಟ್ ಗಾರ್ಡ್ ಎಂದೇನು

ಹೇಳುತ್ತೇವೆ, ಆ ಮಟ್ಟದವರೆಗೆ ನೀವು ಎಲ್ಲಿಯವರೆಗೆ foundation ಗಟ್ಟಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಕೆಲಸಗಳು ಯಶಸ್ಸು ಆಗುವುದಿಲ್ಲ. ಏಕೆಂದರೆ, ರಕ್ಷಣೆ ಮಾಡುವವರು ಅವರೆ, ನಮ್ಮ ಸರ್ಕಾರದ ಕೆಲಸಗಳಿಗೆ ಹೆಚ್ಚಿನ ಮಹತ್ವ ತಂದು ಕೊಡುವವರು ಅವರೆ, ದಯಮಾಡಿ ಆ ಸಿಬ್ಬಂದಿ ಏನಿದೆ ಆ ಸಿಬ್ಬಂದಿಯನ್ನು ಹೆಚ್ಚಿನ ಪ್ರಮಾಣ ಬಲಪಡಿಸಬೇಕೆಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರ ಜೊತೆಗೆ ಅಣಗವಾಡಿಯಲ್ಲಿ ನಿಸರ್ಗಧಾಮ ಮಾಡುವುದಕ್ಕೆ ಅವಕಾಶವಿದೆ. ಈಗಾಗಲೇ ನಾವು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ವಿನಂತಿ ಮಾಡಿದ್ದೇವೆ. ಅದನ್ನು ಕಾರ್ಯರೂಪಕ್ಕೆ ತರಬೇಕು. ಅಲ್ಲಿ ಶ್ರೀಗಂಧದ ವನ ಮಾಡಲಿಕ್ಕೂ ಅವಕಾಶವಿದೆ. ಹಲಗಲಿ, ಮೆಳ್ಳೀಗೇರಿ, ಯಡಹಳ್ಳಿ, ಬೀಳಗಿ, ಮುಧೋಳ ವಲಯಗಳು, ಇಲ್ಲಿ ಶ್ರೀಗಂಧದ ವನ ಮಾಡಲಿಕ್ಕೆ ಅವಕಾಶವಿದೆ. ರಸ್ತೆಬದಿ ನೆಡುತೋಪು ಎಂದಿದ್ದಾರೆ, ಇದರ ಮೇಲೆ ನನಗೆ ವಿಶ್ವಾಸವಿಲ್ಲ. ಚಿಂಕಾರ ವನ್ಯಜೀವಿಧಾಮ ನಿರ್ಮಾಣ, ಈಗಾಗಲೇ ಹೇಳಿರುವಂತೆ, ಹೆರಕಲ್, ಬೆನ್ನೂರು, ಅಣಗವಾಡಿ ಬ್ರಿಡ್ಜ್ ಮತ್ತು ಕೊರ್ತಿ, ಕೋಲ್ಹಾರ್, ಚಿಕ್ಕಸಂಗಮ, ಸೀತೆಮನಿ ಹತ್ತಿರ, ಇಂದು ನಾವು ಪಕ್ಷಿಧಾಮ ಮಾಡಲಿಕ್ಕೆ ಅವಕಾಶವಿದೆ. ನವಿಲುಗಳನ್ನು ರಕ್ಷಣೆ ಮಾಡುವಂಥ ಕೆಲಸ ಬಹಳ ಜವಾಬ್ದಾರಿಯಿಂದ ಮಾಡಬೇಕಾಗಿದೆ. ನಮ್ಮ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮೊಸಳೆಗಳು ಸಂಖ್ಯೆ ಬಹಳ ಜಾಸ್ತಿಯಾಗಿದೆ. ಇದು ಒಂದು ಕಡೆ ನಮಗೆ ತೊಂದರೆಯಾಗಿದೆ. ಎಷ್ಟೊ ಜನರಿಗೆ ತೊಂದರೆಯಾಗಿದೆ. ಮೂರು ತಿಂಗಳ ಹಿಂದೆ ನಮ್ಮೂರಿನ ಒಬ್ಬ ಮನುಷ್ಯನನ್ನು ತೆಗೆದುಕೊಂಡು ಹೋಗಿ ಬಿಡ್ತು. ಕುಂದುರಿಯಲ್ಲಿ ಒಬ್ಬ ಮನುಷ್ಯ ಆ ಮೊಸಳೆ ಜೊತೆಗೆ ಹೋರಾಟ ಮಾಡಿ ತನ್ನ ಕಾಲು ಕಳೆದುಕೊಂಡಿದ್ದಾನೆ. ಹೀಗಿದ್ದರೂ ಅಲ್ಲಿ ಒಂದು ಮೊಸಳೆ ಪಾರ್ಕ್ ಮಾಡುವುದಕ್ಕೆ ಅವಕಾಶವಿದೆ ಎಂದು ಹೇಳುತ್ತೇನೆ. ಈಗಾಗಲೇ ಹೇಳಿದ ಹಾಗೆ ಚಿಕ್ಕಸಂಗಮದಲ್ಲಿ 4 ಕೋಟಿ ರೂಪಾಯಿ ಖರ್ಚಿನಲ್ಲಿ ಸುಂದರವಾದಂಥ ಸಂಗಮನಾಥನ ದೇವಾಲಯ ಕಟ್ಟಿದ್ದಾರೆ. ಇದು ಕೂಡ ಅರಣ್ಯ ಇಲಾಖೆಗೆ ಬರುತ್ತದೆ. ಅಲ್ಲಿ 55 ಎಕರೆ ಅರಣ್ಯ ಪ್ರದೇಶವಿದೆ. ಅಲ್ಲಿ ಬೋಟಿಂಗ್ ವ್ಯವಸ್ಥೆ

ಮಾಡಲಿಕ್ಕೆ ಸಾಧ್ಯವಿದೆ. ಕನಿಷ್ಟ 500 ಎಕರೆಯೊಳಗೆ ನಾನು ಈಗಾಗಲೇ ಹೇಳಿದ ಹಾಗೆ 51 ತರಹದ ಯಾವ್ಯಾವ ಪಕ್ಷಿಗಳು ಪಕ್ಷಿಧಾಮಕ್ಕೆ ಬರುತ್ತವೆ ಎನ್ನುವ ಹಾಗೆ ನನ್ನ ಹತ್ತಿರ ಲಿಸ್ಟ್ ಇದೆ. ಅದ್ದರಿಂದ ಅಲ್ಲಿ ಪಕ್ಷಿಧಾಮ, ಬೋಟಿಂಗ್ ವ್ಯವಸ್ಥೆ ಆಗಬೇಕಾಗಿದೆ. ರಾಮಾಯಣ ಮಹಾಭಾರತದ ಕಲ್ಪನೆಯೊಳಗೆ ಅರಣ್ಯವನ್ನು ನಾವು ಬೆಳಿಸಿದರೆ ನಿಶ್ಚಿತವಾಗಿ ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಲಿಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಏಳು ಹಳ್ಳಿಗಳನನು ಹೊಂದಿದಂಥ ನಡುಗಡ್ಡೆ ಕಂದಗಲ್ ನಡುಗಡ್ಡೆ, ಹೊಲದೂರು ನಡುಗಡ್ಡೆ ಸಹಿತ ಇಲ್ಲಿಯೂ ಕೂಡ ಅರಣ್ಯವನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ Eco tourisms ಮಾಡಲಿಕ್ಕೆ ಸಾಧ್ಯವಿದೆ. ಆಲಮಟ್ಟಿ ಜಲಾಶಯದಲ್ಲಿ adventurous sports activities ಅಂದರೆ, speed boating ಮಾಡಬಹುದು, banana boatinf ಮಾಡಬಹುದು, tourist cruses to islands ಮಾಡಬಹುದು, parasailing, rock climbing ಮಾಡಬಹುದು. ಈಗಾಗಲೇ ನಮ್ಮ ಸೈನಿಕರು ಬಂದು ಪ್ರದರ್ಶನ ಮಾಡಿ ಹೋಗಿದ್ದಾರೆ. ಪಟ್ಟದಕಲ್ಲು ಮಹೋತ್ಸವ, ಬಾದಾಮಿ ಚಾಲುಕ್ಯ ಉತ್ಸವದಲ್ಲಿ ಈಗಾಗಲೇ ಅದನ್ನು ತೋರಿಸಿಕೊಟ್ಟು ಹೋಗಿದ್ದಾರೆ. Trekingಗೆ ಅವಕಾಶ ಇದೆ, boat houseಗಳನ್ನು ಮಾಡಬಹುದು. ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಜಂಗಲ್ ಲಾಡ್ಜ್ ಮಾಡಲಿಕ್ಕೆ ಅತ್ಯುತ್ತಮವಾದ ಪರಿಸರವಿದೆ. ಅದರಲ್ಲೂ ವಿಶೇಷವಾಗಿ ಬೀಳಗಿ ಕ್ಷೇತ್ರದ ನಡುಗಡ್ಡೆಯಲ್ಲಿ ಜಂಗಲ್ ಲಾಡ್ಜ್ ಮಾಡಲಿಕ್ಕೆ ಸಾಧ್ಯವಿದೆ. Dormitory, tent campಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಬೈಸಿಕಲ್, ಕುದರೆ, ಜೀಪ್ ಸವಾರಿ ಕೂಡ ಮಾಡಬಹುದು. ಇದರ ಜೊತೆಗೆ ಐಹೊಳೆ, ಪಟ್ಟದಕಲ್ಲು, ಚಿಕ್ಕಸಂಗಮ, ಕೂಡಲ ಸಂಗಮ ಮತ್ತು ಆಲಮಟ್ಟಿ ಜಲಾಶಯದ ಹಿನ್ನೀರಿನ ನಡುವೆ creation of tourism circuit ಮಾಡಲಿಕ್ಕೆ ಸಾಧ್ಯವಿದೆ. ಇದನ್ನೆಲ್ಲಾ ಮಾಡಿದರೆ, ಜಗತ್ತಿನೊಳಗೆ ಎಷ್ಟು ದೇಶದೊಳಗೆ....

ಅಧ್ಯಕ್ಷರು:- ಅದು ಬೇಡ, ಟೂರಿಸಂ ವಿಷಯಕ್ಕೆ ಬನ್ನಿ.

ಶ್ರೀ ಜಿ.ಟಿ. ಪಾಟೀಲ್:- ಇದಕ್ಕೂ ಬರುತ್ತದೆ. Fores and Tourism ಇಲಾಖೆಗಳು ಜಂಟಿಯಾಗಿ ಮಾಡಬೇಕೆಂದು ಸಹ ನಾನು ಈ ಸಂದರ್ಭದೊಳಗೆ ಒತ್ತಾಯ ಮಾಡುತ್ತೇನೆ. ಪರಿಸರ ಎಲ್ಲರೂ ಕೂಡಿ ಹಾಳು ಮಾಡಿದ್ದೇವೆ. ಪರಿಸರ ರಕ್ಷಣೆಯಾಗಲಿಲ್ಲವೆಂದರೆ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದವರು ಸಂಪೂರ್ಣವಾಗಿ ಮಳೆಯಿಂದ ವಂಚಿತರಾಗಿದ್ದೇವೆ. ಕಾರಣ ಏನೆಂದರೆ, ಹಿಂದೆ ಸಾಕಷ್ಟು ಅರಣ್ಯವಿತ್ತು. ನಾನು ಚಿಕ್ಕ ಹುಡುಗನಾಗಿದ್ದಾಗ ಪ್ರೈಮರಿ ಸ್ಕೂಲ್‌ನಲ್ಲಿದ್ದಾಗ ಆಗ ಏನು ಮಳೆ ಬೀಳುತ್ತಿತ್ತು ಅದರ 5% ಸಹ ಇಂದು ನಮ್ಮಲ್ಲಿ ಮಳೆ ಆಗುತ್ತಿಲ್ಲ. ಕಾರಣ ಏನೆಂದರೆ, ನಾವು ಇವತ್ತು ಬೇಕಾಬಿಟ್ಟಿಯಾಗಿ ಅರಣ್ಯವನ್ನು ಹಾಳು ಮಾಡಿದ್ದೇವೆನ್ನುವ ಮಾತನ್ನು ಹೇಳುತ್ತೇನೆ. ನಾನು ಮೂರನೆ ಬಾರಿ ಶಾಸಕನಾದ ನಂತರ ನನ್ನ ಕ್ಷೇತ್ರದಲ್ಲಿ ಒಟ್ಟು 172 ಶಾಲಾ ಕ್ಯಾಂಪಸ್‌ಗಳಿವೆ. ಪ್ರತಿಯೊಂದು ಕ್ಯಾಂಪಸ್‌ನಲ್ಲಿ ಅದರಲ್ಲಿ 100 ಶಾಲೆಗಳಲ್ಲಿ ಗಿಡಗಳನ್ನು ಬೆಳೆಸುವ ವ್ಯವಸ್ಥೆ ಮಾಡಿಸಿದ್ದೇನೆ. ಈ ರೀತಿ ನಮಗೆ ಎಲ್ಲೆಲ್ಲಿ ಸಾರ್ವಜನಿಕ ಜಾಗಗಳಿವೆ ಅಲ್ಲಿ ಗಿಡಗಳನ್ನು ಬೆಳೆಸುವುದು, ಮತ್ತು ಗಿಡಗಳನ್ನು ರಕ್ಷಿಸುವ ಕೆಲಸವಾಗಬೇಕಾಗಿದೆ. Social sorest ಎನ್ನುವುದು ಏನಿದೆ, ಇದರಿಂದ ನಮಗೆ ಏನೂ result ಬಂದಿಲ್ಲ. Plantations ಮಾಡುತ್ತಾರೆ, ಆದರೆ, ಯಾವ ಸಸಿಗಳನ್ನು ನೆಡುತ್ತಾರೆ, ಆ ಸಸಿಗಳನ್ನು ನೆಟ್ಟ ಮೇಲೆ post harvesting protection ಏನಿದೆ ಅದನ್ನು ಯಾರೂ ಮಾಡುತ್ತಿಲ್ಲ. ಇದರಿಂದ ನನಗೆ ಅನ್ನಿಸುತ್ತದೆ 5% ಗಿಡಗಳು ಬೆಳೆಯುತ್ತಿಲ್ಲ. ಹತ್ತು ವರ್ಷದೊಳಗೆ ಲಕ್ಷಾಂತರ ಗಿಡಗಳನ್ನು ನೆಟ್ಟಿದ್ದಾರೆ. ಇವರು ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಲಕ್ಷಾಂತರ ಗಿಡಗಳನ್ನು ನೆಟ್ಟಿದ್ದಾರೆ. ಅದರಲ್ಲಿ survival percentage is not more than 5%. ದು ದುರ್ದೈವದ ಸಂಗತಿ. ಅದಕ್ಕಾಗಿ ಇದನ್ನು ಸರಿಯಾಗಿ ರಕ್ಷಣೆ ಮಾಡಬೇಕೆಂದು ಹೇಳಿ, ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಅರಣ್ಯ ರಕ್ಷಣೆ ಮಾಡಲಿಕ್ಕೆ ಅರಣ್ಯ ಬೆಳೆಯಲಿಕ್ಕೆ ವಿಪುಲವಾದ ಅವಕಾಶಗಳಿವೆ. 838 ಚ.ಕಿ.ಮಿ. ಅರಣ್ಯ ಪ್ರದೇಶವಿದೆ. ನಾನು ಅರಣ್ಯ ಮಂತ್ರಿಗಳಿಗೆ ವಿನಂತಿಸುತ್ತೇನೆ, ಆದಷ್ಟು ಬೇಗನೆ ಪಕ್ಷಿಧಾಮ, ಚಿಂಕಾರ protection, ಜಂಗಲ್ ಲಾಡ್ಜ್ ಇರಬಹುದು, ಇವಲ್ಲವನ್ನು ಮಾಡುವುದರ

ಮೂಲಕ ಬಾಗಲಕೋಟ ಜಿಲ್ಲೆಯನ್ನು ನಿಮ್ಮ ಅರಣ್ಯ ಇಲಾಖೆಯ ನಕ್ಷೆಯಲ್ಲಿ ಮೂಡಿಸುವುದಕ್ಕೆ ಸುಂದರವಾದಂಥ ಅರಣ್ಯ ಬೆಳೆಸುವುದಕ್ಕೆ ಸಾಧ್ಯವಿದೆ ಎನ್ನುವ ಒತ್ತಾಯ ಮಾಡುತ್ತೇನೆ. ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿದ್ದರೂ ಸಹಿತ ನನಗೆ ಕೊಟ್ಟಿರುವ ಸಮಯ ಕೇವಲ ಹತ್ತು ನಿಮಿಷ, ಹಾಗಾಗಿ ದಯಮಾಡಿ ನನ್ನ ಕ್ಷೇತ್ರಕ್ಕೆ ನನ್ನ ಜಿಲ್ಲೆಗೆ ಸೀಮಿತವಾಗಿ ಮಾತನಾಡಿದ್ದೇನೆ. ಈ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಹೇಳುತ್ತೇನೆ. ನಮ್ಮ ಅರಣ್ಯ ಸಚಿವರಾದ ಮಾನ್ಯ ರಮಾನಾಥ್ ರೈ ರವರು ಮಲೆನಾಡು ಪ್ರದೇಶ ಮತ್ತು ಅರಣ್ಯ ಪ್ರದೇಶದಿಂದ ಬಂದವರು. ಅದಕ್ಕೂ ನಮ್ಮ ಈ ಒಣ ಪ್ರದೇಶಕ್ಕೆ ಹೆಚ್ಚಿನ ಹಣಕಾಸು ಕೊಟ್ಟು ಈ ಅರಣ್ಯ ರಕ್ಷಣೆ ಮಾಡುವುದು, ಅರಣ್ಯ ಬೆಳೆಸುವುದು ಜೊತೆಗೆ tourism place ಮಾಡಲಿಕ್ಕೆ ನಿಮ್ಮ ಸಹಕಾರ ನಮಗೆ ಅವಶ್ಯವಿದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಒತ್ತಾಯಿಸಿ, ದಯಮಾಡಿ ಮತ್ತೊಮ್ಮೆ ಈ ಅಧಿವೇಶನ ಮುಗಿದ ನಂತರ ನೀವು ಮತ್ತು ನಿಮ್ಮ ಪ್ರದಾನ ಕಾರ್ಯದರ್ಶಿಯವರು ಬಾಗಲಕೋಟೆ ಜಿಲ್ಲೆಗೆ ವಿಸಿಟ್ ಮಾಡಿ, ಪ್ರತಿಯೊಂದು ಸ್ಥಳಗಳನ್ನು ನೋಡಿದರೆ ನಿಮಗೆ ಏನು ಮಾಡಬೇಕೆಂದು ನಾವು ಹೇಳುವ ಅವಶ್ಯಕತೆ ಇರುವುದಿಲ್ಲ. ನೀವಾಗಿಯೇ ನಮಗೆ ಹಣಕಾಸು ಮಂಜೂರು ಮಾಡಿ ಅಲ್ಲಿ ಏನೇನು ಮಾಡಬೇಕು ಅವೆಲ್ಲವನ್ನೂ ಮಾಡುತ್ತೀರಿ ಎನ್ನುವಂತಹ ಮಾತನ್ನು ಹೇಳಿ, ಸನ್ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಎರಡು ಮಾತು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):- ಮಾನ್ಯ ಅಧ್ಯಕ್ಷರೆ, ಈ ಮನೆಯ ಹಿರಿಯ ಸದಸ್ಯರು ಹಾಗೂ ಮಾಜಿ ಸ್ಪೀಕರ್ ಆಗಿದ್ದಂಥ ಮಾನ್ಯ ಬೋಪಯ್ಯನವರು ಈ ಇಲಾಖೆ ಬಗ್ಗೆ ಎಲ್ಲಾ ವಿಚಾರಗಳನ್ನು ಬಹಳ ಸವಿಸ್ತಾರವಾಗಿ ಹೇಳಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಇಲಾಖೆ ಬಗ್ಗೆ ಇದುವರೆಗೂ ಮಾತನಾಡಿದವರು ಹೇಳಿದಂತೆ ಈ ಇಲಾಖೆಯಲ್ಲಿ ಅತೀ

ಹೆಚ್ಚು ಹುದ್ದೆಗಳನ್ನು ಸೃಷ್ಟಿ ಮಾಡಿದ್ದರೂ ಕೂಡ ಕಡಿಮೆ ಕೆಲಸ ಆಗುತ್ತಿದೆ ಎಂದು ನಾನೂ ಕೂಡ ಭಾವಿಸುತ್ತೇನೆ. ಇವತ್ತು ಕರ್ನಾಟಕ ರಾಜ್ಯ 1.91 ಲಕ್ಷ ಚ.ಕೀ.ಮೀ. ವಿಸ್ತೀರ್ಣ ಹೊಂದಿದೆ. ಇದರಲ್ಲಿ 43,000 ಚ.ಕೀ.ಮೀ.ನಷ್ಟು ಅರಣ್ಯ ಪ್ರದೇಶ ಇದೆ. ಅದರಲ್ಲಿ 33,000 ಚ.ಕೀ.ಮೀ.ನಷ್ಟು ಪ್ರದೇಶ ವಿವಿಧ ಹಂತಗಳಲ್ಲಿದ್ದು, 10,000 ಚ.ಕೀ.ಮೀ.ನಷ್ಟು ಪ್ರದೇಶವನ್ನು deemed forest ಎಂದು ಘೋಷಣೆ ಮಾಡಿಕೊಂಡಿದ್ದೀರಿ. ಸ್ಥಳೀಯ ಮಟ್ಟದಲ್ಲಿ Range Forest Officer ಮತ್ತು ಜಿಲ್ಲಾ ಅರಣ್ಯ ಅಧಿಕಾರಿಗಳ ಹಂತದಲ್ಲಿ ಸರಿಯಾಗಿ ಕೆಲಸವಾದರೆ ಮೇಲ್ಮಟ್ಟಕ್ಕೆ ಅಷ್ಟು ಕೆಲಸ ಇರುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಹಿಂದೆ ಜಿಲ್ಲಾಮಟ್ಟದಲ್ಲಿ DFO(Territorial), DFO(Social Forestry) ಎಂಬ ಎರಡು ಹುದ್ದೆಗಳಿದ್ದವು. ಇವತ್ತು ಅವು ಆರೇಳು ಪೋಸ್ಟ್‌ಗಳಾಗಿವೆ. ಅಂದರೆ, DFO(Territorial), DFO(Social Forestry), Squad, Forest Cell, Police Cell, Wild life, ಇಷ್ಟೆಲ್ಲ ಹುದ್ದೆಗಳು ಇದ್ದರು ಕೂಡ ಪ್ಲಾಂಟೇಷನ್ ಆಗಲಿ ಅಥವಾ ಇತರೇ ಯಾವುದೇ ಕೆಲಸವೂ ಕೂಡ ಇವತ್ತಿನದಿವಸ ಸಮರ್ಪಕವಾಗಿ ಆಗುತ್ತಿಲ್ಲ. ಇವತ್ತು territorial ನವರು ಹೋಗಿ ಮರವನ್ನು ಅಕ್ರಮವಾಗಿ ತೆಗೆದುಕೊಂಡು ಹೋಗುವವರನ್ನು ಹಿಡಿಯುತ್ತಾರೆ. ಹಾಗೆಯೇ, Forest Cell, Police Cell and Squad ನವರು ಸಹ ಈ ಕೆಲಸಕ್ಕೆ ಹೋಗುತ್ತಾರೆ. ಆದರೆ, ಯಾವುದನ್ನು ಹಿಡಿಯಬೇಕೆಂದು ಅವರಲ್ಲಿಯೇ ಪೈಪೋಟಿ ಪ್ರಾರಂಭವಾಗಿದೆ. ಇನ್ನೊಂದು ವಿಷಯ ಏನೆಂದರೆ, ನಾವು ಮರಗಳನ್ನು ಏಕೆ ಬೆಳೆಯಬೇಕೆಂದು ಗೊತ್ತಾಗುತ್ತಿಲ್ಲ. ಏಕೆಂದರೆ, forest is nature ಎಂದು ಹೇಳಬೇಕಾದರೆ ಇದಕ್ಕೆ ಯಾರು ಕಾರಣರು? ಇದಕ್ಕೆ ಪ್ಲಾಂಟರ್ಸ್ ಮತ್ತು ರೈತರು ಕಾರಣರಾಗಿದ್ದಾರೆ. ಒಂದು ಎಕರೆಯಲ್ಲಿ ಸುಮಾರು 600 ರಿಂದ 700 ಮರಗಳನ್ನು ಬೆಳೆಯುತ್ತೇವೆ. ನೀವು ಕೊಟ್ಟಂಥ ಸಸಿಗಳನ್ನು ನಾವು ಬೆಳೆಯದೆ ನಾವು ಮತ್ತು ರೈತರು ಅಸಹಕಾರ ಚಳುವಳಿ ಮಾಡುತ್ತೇವೆಂದು ತಿಳಿದುಕೊಳ್ಳಿ. ಈ ರೀತಿಯಾದರೆ ನಿಮ್ಮ ಫಾರೆಸ್ಟ್ ಎಲ್ಲಿಂದ ಆಗುತ್ತೆ? ಆತ 20 ರಿಂದ 30 ವರ್ಷಗಳವರೆಗೆ ಮರಗಳನ್ನು ಬೆಳೆದು ಅತ

ಮರವನ್ನು ಕಡಿದು ತನ್ನ ಸ್ವಂತ ಹಕ್ಕಿಗೆ ತೆಗೆದುಕೊಳ್ಳಬೇಕಾದರೆ ಆತ ಪಡುವಂಥ ಕಷ್ಟ ಅಷ್ಟಿಷ್ಟಲ್ಲ. ಈ ಬಗ್ಗೆ ಲೀಗಲ್ ಆಗಿರುವ ಎಲ್ಲಾ ಡಾಕ್ಯುಮೆಂಟ್ಸ್ ಅನ್ನು ಕೊಟ್ಟರೂ ಸಹ 6 ತಿಂಗಳು ಅಥವಾ ಒಂದು ವರ್ಷ Range Forest Officeನಿಂದ, DFOಗೆ, DFO ನಿಂದ PCF ಕಛೇರಿ ಬರುವ ಹೊತ್ತಿಗೆ ಏನಾಗುತ್ತದೆ ಎಂದರೆ ಇದು ನನ್ನ ಸ್ವಂತ ಮರವೋ ಅಥವಾ ಬೇರೆ ಎಲ್ಲಿಂದಾದರೂ ಕದ್ದು ತಂದಿರುವ ಮರವೇ ಎಂದು ಆತನಿಗೆ ಅನುಮಾನ ಬರುವಷ್ಟು ಕಷ್ಟಪಡುತ್ತಾನೆ. ಆದ್ದರಿಂದ, ದಯಮಾಡಿ ಕಛೇರಿಗಳಲ್ಲಿ ಒಂದು ಕಾಲಮಿತಿ ಕಾರ್ಯಕ್ರಮವನ್ನು ಹಾಕಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆತ ಬೆಳೆದಿರತಕ್ಕಂಥ ಸ್ವಂತ ಮರವನ್ನು ತೆಗೆದುಕೊಂಡು ಹೋಗುವುದಕ್ಕೆ ಬಹಳಷ್ಟು ಕಷ್ಟಪಡಬೇಕಾಗಿದೆ. ಕೆಲವು ಸಾರಿ ತಪ್ಪಾಗಿ, ಅಕ್ರಮವಾಗಿ ಅಥವಾ ಬೇರೆ ಬೇರೆ ರೂಪದಲ್ಲಿ ಮರಗಳನ್ನು ಕಡಿಯುತ್ತಾರೆ. ಅದನ್ನು ತಂದು ಕಛೇರಿ ಹತ್ತಿರ ಹಾಕಿ ವಾಹನವನ್ನು ರಿಲೀಸ್ ಮಾಡಿಸಿಕೊಳ್ಳುವುದಕ್ಕೆ ಆತ ಪಡತಕ್ಕಂಥ ಕಷ್ಟ ಬಹಳ ಇದೆ. ಆತ ಈ ಸಂದರ್ಭದಲ್ಲಿ ಪಹಣಿ, ಖಾತೆ, ಇತರೆ ದಾಖಲಾತಿಗಳೆಲ್ಲವನ್ನು ಕೊಟ್ಟಿದ್ದರೂ ಸಹ ಬಿಡುವುದಿಲ್ಲ. ನಮ್ಮಲ್ಲಿ ನೀಲಕಂಠ ಎಂಬುವವರ ತೋಟದಲ್ಲಿ ಒಂದು ತಿಂಗಳ ಹಿಂದೆ ಮರ ಕಳ್ಳತನ ಆಗಿದೆ. ಈ ಬಗ್ಗೆ ನಾನು ತಮ್ಮ ಹತ್ತಿರ ಬಂದಿದೆ. ಅವರ ಸ್ವಂತ ತೋಟದಲ್ಲಿದ್ದ ಮರವನ್ನು ಬೇರೊಬ್ಬ ಕಳ್ಳತನ ಮಾಡಿದ್ದಾನೆ. ಇದರ ಬಗ್ಗೆ ಕಳ್ಳತನದ ಕೇಸ್ ಆಗಿದೆ. ಇದು ನನ್ನ ಸ್ವಂತ ಹಿಡುವಳಿ ಜಾಗದ್ದು ಎಂದು ಎಲ್ಲಾ ಡಾಕ್ಯುಮೆಂಟ್ಸ್ ಅನ್ನು ಕಛೇರಿಗೆ ಕೊಟ್ಟಿದ್ದಾರೆ. ಆದರೆ, ಅವರು ಏನು ಹೇಳುತ್ತಾರೆಂದರೆ, ನೀವು ಅದರ valuation ಕಟ್ಟಿ, ನಾವು ನಿಮಗೆ ಮರ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನನ್ನ ಹಕ್ಕಿನ ಮರಕ್ಕೆ ನಾನೇಕೆ valuation ಕಟ್ಟಬೇಕೆಂದು ಅವರು ಕೇಳಿದ್ದಾರೆ. ಇದು ಈ ಇಲಾಖೆಯ ಎಂತಹ ವಿಚಿತ್ರವಾದಂಥ interpretation ಅಥವಾ ಕಾನೂನು ಎಂಬುದು ಅರ್ಥವಾಗುತ್ತಿಲ್ಲ. ಆದ್ದರಿಂದ, ಈ ರೀತಿಯಾದ ವಿಚಾರಗಳಿಗೆ ಖಂಡಿತವಾಗಿ ಇಲಾಖೆ ಅಡ್ಡಿ ಬರಬಾರದು. ಈ ಜೊತೆಗೆ ಖಾಸಗಿ ಭೂ ಹಿಡುವಳಿ ಪ್ರದೇಶದಲ್ಲಿ ರೈತರು ಕಡಿಯತಕ್ಕಂಥ ಮರಕ್ಕೆ ಹಕ್ಕನ್ನು ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟ ಇದೆ. ತಾವು ಹಾಸನದಲ್ಲಿ ಮೂರು

ದಿನಗಳು ಸಭೆ ಮಾಡಿದ್ದೀರಿ. ಇದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ದೇವೇಗೌಡರು ಸಹ ಲೋಕಸಭಾ ಸದಸ್ಯರಾದಾಗ ಅವರು ಕೂಡ ಈ ಹಕ್ಕಿನ ಬಗ್ಗೆ ತುಂಬಾ ಮಾತನಾಡಿದ್ದಾರೆ. ಆದರೆ, ಇಂಥ ಸಂರ್ಭದಲ್ಲಿ ಕೂಡ ಕಾನೂನು ಅಡ್ಡಿ ಬಂದಿದೆ ಎಂದು ಹಾಗೂ Interpretation of law ಬಗ್ಗೆ ಮಾನ್ಯ ಬೋಪಯ್ಯ ಸಾಹೇಬರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ರೀತಿಯಾದ ಸಂದರ್ಭದಲ್ಲಿ ಕಾಫಿ ಮತ್ತು ಏಲಕ್ಕಿ ತೋಟದಲ್ಲಿ ಎಷ್ಟು ಮರ ಇರಬೇಕೆಂದು ಹೇಳಿ. ಅನಾವಶ್ಯಕವಾಗಿ ಎಲ್ಲ ಮರಗಳನ್ನು ತೆಗೆಯಬೇಕೆಂಬ ಆಸೆ ಇಲ್ಲ. ಆದರೆ reasonable ಆಗಿ ಕಾನೂನಿನಲ್ಲಿರತಕ್ಕಂಥ ಅವಕಾಶವನ್ನು ಬಳಸಿಕೊಂಡು ಕಾಫಿ ತೋಟದಲ್ಲಿ ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಡಬೇಕು. ಏಲಕ್ಕಿ ತೋಟದಲ್ಲಿ ಏನಾಗಿದೆ ಎಂದರೆ, ಇವತ್ತು ಮಳೆ ಇಲ್ಲ, ಅದಕ್ಕೆ ನೆರಳು ಹೆಚ್ಚಾಗಿರುತ್ತದೆ ಹಾಗೆಯೇ, ಇದಕ್ಕೆ ಕೊಕ್ಕೆ ಕಂದು ರೋಗ ಬಂದು ಇವತ್ತು ಎಲ್ಲಾ ಹಾಳಾಗಿ ಹೋಗಿವೆ. ಸರ್ಕಾರ ಒಂದು ಕಡೆ ಸಾಲ ಕೂಡ ಮನ್ನಾ ಮಾಡುತ್ತಿಲ್ಲ ಅಥವಾ ಇಲ್ಲಿರುವ ಮರಗಳನ್ನು ತೆಗೆಯುವುದಕ್ಕೆ ಬಿಡುತ್ತಿಲ್ಲ. ಏಲಕ್ಕಿ ಪ್ರದೇಶದಲ್ಲಿರುವಂಥದ್ದನ್ನು ತೆಗೆಯುವುದಕ್ಕೂ ಕೂಡ ಅರಣ್ಯ ಇಲಾಖೆಯವರು ಅಡ್ಡಿ ಮಾಡುತ್ತಿದ್ದಾರೆ. ಈ ರೀತಿಯಾದ ಅನೇಕ ತೊಂದರೆಗಳಿಂದ ಬೆಳೆಗಾರ ತುಂಬಾ ಸಂಕಷ್ಟದಲ್ಲಿದ್ದಾನೆ. ಮನೆಯ ಮುಂದೆ ಎರಡು ಮರ ನೆಡಬೇಕೆಂದು ಹಾಗೂ ಊರನ್ನು ವನ ಮಾಡಬೇಕೆಂದು ಗೊತ್ತಿದೆ. ಕಾಡಿನಿಂದ ಮಳೆ, ಮಳೆಯಿಂದ ಬೆಳೆ ಎಂದು ನೀವೇ ಜಾಹೀರಾತು ಕೊಟ್ಟಿದ್ದೀರಿ. ಇದೆಲ್ಲ ಸರಿ, ಆದರೆ, ಇದು ಎಲ್ಲಿ ಆಗುತ್ತಿದೆ? ಇವೆಲ್ಲ ಘೋಷಣೆಗೆ ಬಹಳ ಚೆನ್ನಾಗಿ ಆಗುತ್ತಿದೆ.

ಆನೆ ಹಾವಳಿ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಸಾಕಷ್ಟು ಹೇಳಿದ್ದಾರೆ. ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾದಾಗ ಧನಾತ್ಮಕ ಹಣವನ್ನು ನಾವು ಏಕೆ ಕೊಡುತ್ತಿದ್ದೇವೆಯೋ ಅದನ್ನು 2011ರಲ್ಲಿ ಹೆಚ್ಚುವರಿ ಮಾಡಲಾಗಿದೆ. ಇದನ್ನು ಹೆಚ್ಚು ಮಾಡಿ ಮೂರು ವರ್ಷಗಳಾಗಿದ್ದು, ಈ ಪರಿಹಾರವನ್ನು ದುಪ್ಪಟ್ಟು ಮಾಡಬೇಕು. ಅದನ್ನು ಎರಡರಷ್ಟು ಮಾಡಿ. ಮಾನ್ಯ

ಸದಸ್ಯರು ಹೇಳಿದ ಹಾಗೆ ಇವತ್ತಿನದಿವಸ ಯಾರಾದರೂ ಸತ್ತರೆ ಬಹುಶಃ ನಾವು ಕೇಳತಕ್ಕಂಥ ಭಾಷೆ ಹೇಳುವುದಕ್ಕೆ ಆಗುವುದಿಲ್ಲ. ಮೌನವಾಗಿ ಅಲ್ಲಿ ಇರಬೇಕೇ ಹೊರತು ಏನಾದರೂ ಮಾತನಾಡಿದರೆ ಮುಗಿಯಿತು. ಇವತ್ತಿನದಿವಸ ಮಿನಿಸ್ಟರ್ ಮತ್ತು PCFಗಳು ಬಹಳ ಸುಲಭವಾಗಿ ಫೋನ್‌ಗೆ ತಪ್ಪಿಸಿಕೊಳ್ಳುತ್ತಾರೆ. ಆದರೆ ನಾವು ಸಿಕ್ಕಿಕೊಳ್ಳುತ್ತೇವೆ. ಇದರ ಕಷ್ಟ ಏನೆಂದು ತಮಗೆ ಅರ್ಥವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆದರೆ, ಆ ಸಂದರ್ಭದಲ್ಲಿ ಶಾಸಕನಾದವನು ಅಥವಾ ಒಬ್ಬ ಜನಪ್ರತಿನಿಧಿಯಾಗಿ ಆ ಸನ್ನಿವೇಶವನ್ನು ಎದರಿಸುವಂಥದ್ದು ಹಾಗೂ ಆ ಸಂದರ್ಭದಲ್ಲಿ ಅಲ್ಲಿನ ಜನರ ಭಾಷೆಯನ್ನು ಕೇಳುವುದಕ್ಕೆ ಸಾಧ್ಯವಿಲ್ಲ. ನಿಮ್ಮ 5 ಅಥವಾ 10 ಲಕ್ಷ ಯಾವನಿಗೆ ಬೇಕೆಂದು ಹೇಳುತ್ತಾರೆ. ಬೆಳೆ ಹಾನಿ ಕೂಡ ಜಾಸ್ತಿ ಆಗುತ್ತಿದೆ. ಇವತ್ತು ಎಲ್ಲಾ ಇವತ್ತು ಎಲ್ಲಾ ಕಡೆ ಭತ್ತ ಹಾಕುತ್ತಿದ್ದಾರೆ, ನಮ್ಮ ಕಡೆ 25 ಆನೆ ಹಿಡಿಯುವುದಕ್ಕೆ ಆದೇಶವಾಗಿತ್ತು. ತಾವು 22 ಆನೆಗಳನ್ನು ಮಾತ್ರ ಹಿಡಿದಿದ್ದೀರಿ. ಇನ್ನೂ ಮೂರು ಆನೆಗಳನ್ನು ಹಿಡಿಯತಕ್ಕಂಥದು ಬಾಕಿ ಇದೆ. ಅದರಲ್ಲಿಯೂ ಕೂಡ ಚಿಕ್ಕ ಚಿಕ್ಕ ನಾಲ್ಕು ಮರಿ ಆನೆಗಳನ್ನು ಸಹ ಸೇರಿಸಿಕೊಂಡಿದ್ದಾರೆ. 25 ಆನೆ ಹಿಡಿದಿದ್ದೀರಿ. ಆದರೆ, ಇನ್ನೂ 3 ಆನೆಗಳನ್ನು ಹಿಡಿಯಬೇಕಾಗಿದೆ. ಇದು ಅಲ್ಲದೆ ಮತ್ತೆ 14 ಆನೆಗಳು ಅಲ್ಲಿಯೇ ಅಡ್ಡಾಡುತ್ತಿವೆ. ನನ್ನ ಕ್ಷೇತ್ರದಲ್ಲಿ ಇನ್ನೂ ಕೂಡ ಸುಮಾರು 30–35 ಆನೆಗಳಿವೆ. ಈಗ ಸಧ್ಯಕ್ಕೆ ಮೂಡಿಗೆರೆ ಕಡೆ ಹೋಗಿವೆ ಎಂದು ಸುದ್ಧಿ ಇವೆ. ಕುಮಾರಸ್ವಾಮಿಯವರೇ, ಆನೆ ಕಾರಿಡಾರ್ ಮಾಡುವುದಕ್ಕಾಗುವುದಿಲ್ಲ, ಸಮಸ್ಯೆ ಇದೆ ಎಂದು ತಾವು ಹೇಳಿದಿರಿ. ಆನೆ ಕಾರಿಡಾರ್ ಬೇಡ, ಆನೆಧಾಮ ಮಾಡಬಹುದಲ್ಲ. ನಮ್ಮ ಹೊಂಗದಹಳ್ಳಿ ಸುತ್ತ ಮುತ್ತ ಎರಡೂವರೆ ಸಾವಿರ ಎಕರೆ ಖಾಸಗಿ ಹಿಡುವಳಿ ಜಾಗವನ್ನು ಕೊಡಲು ತಯಾರಿದ್ದಾರೆ. ಅದರ ಬಗ್ಗೆ ಮಾತುಕತೆ ನಡೆಯುತ್ತಿದೆ. ಇನ್ನುಳಿದ 23 ಸಾವಿರ ಎಕರೆ ಸರ್ಕಾರಿ ಜಾಗವಾಗಿದೆ. ಅದನ್ನು ನೀವು ತೆಗೆದುಕೊಳ್ಳಬಹುದು. ಅದನ್ನು ಯಾರು ತೆಗೆದುಕೊಳ್ಳುವವರಿಲ್ಲ. ನಾವು ವಿದೇಶ ಪ್ರವಾಸ ಹೋಗಿದ್ದಾಗ ಸೌತ್ ಆಫ್ರಿಕಾದಲ್ಲಿರುವ ಕ್ರೂಗರ್ ನ್ಯಾಷನಲ್ ಪಾರ್ಕ್‌ಗೆ ಹೋಗಿ ಬಂದಿದ್ದೇವೆ. ಅಲ್ಲಿ ಹತ್ತು ಸಾವಿರ ಆನೆಗಳಿವೆ, ಒಂದು ಲಕ್ಷ ಇಪ್ಪತ್ತು ಸಾವಿರ ಜಿಂಕೆಗಳಿವೆ, ಸಿಂಹ,

ಹುಲಿ, ಮುಂತಾದ ಎಲ್ಲಾ ತರಹದ ಪ್ರಾಣಿಗಳು ಸುಮಾರು ಎರಡು ಲಕ್ಷ ಚಿಲ್ಲರೆ ಪ್ರಾಣಿಗಳಿವೆ. ಅವರು ಎಷ್ಟು ಚೆನ್ನಾಗಿ ಮಾಡಿದ್ದಾರೆಂದರೆ ನಾವೂ ಸಹ ಆ ತರಹದನ್ನು ಏಕೆ ಮಾಡಬಾರದು?

ಅಧ್ಯಕ್ಷರು:– ಅದು ಎಷ್ಟು ಏರಿಯಾದಲ್ಲಿದೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅದು ಬಹುಶಃ 25 ಸಾವಿರ ಚದರ ಕಿ.ಮೀ. ಇರಬಹುದು. ಅಲ್ಲೇ ಹೊಳೆ ಇದೆ. ಅದನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಅವರು ಹೋಗಿ ನೋಡಿಕೊಂಡು ಬರಲಿ. ಕೊಲಂಬೋದಲ್ಲೂ ಸಹ ಈ ತರಹದ ಪಾರ್ಕ್ ಮಾಡಿದ್ದಾರೆ. ಈ ತರಹ ನಾವು ಏನಾದರೂ ಮಾಡಿ ಅವುಗಳನ್ನು ಸ್ಥಳಾಂತರಿಸಿ ಜನರಿಂದ ರಕ್ಷಣೆ ಕೊಡಬೇಕೇ ಹೊರತು ಇವತ್ತು ಆನೆ ದಾಳಿಯಿಂದ ಜನರು ಸಾಯುತ್ತಿದ್ದಾರೆ, ಬೆಳೆ ನಾಶವಾಗುತ್ತಿದೆ. ಆ ತರಹ ನಾಶವಾಗಿರುವ ಬೆಳೆಗೆ ಪರಿಹಾರ ನಮ್ಮದೂ ಇನ್ನೂ ಆರು ತಿಂಗಳ ಪರಿಹಾರ ಬಾಕಿ ಇದೆ. ಆ ರೀತಿಯ ಬೆಳೆ ಹಾನಿ ಪರಿಹಾರವನ್ನು ದುಪ್ಪಟ್ಟು ಮಾಡಬೇಕು ಮತ್ತು ಬಾಕಿ ಇರುವ ಪರಿಹಾರವನ್ನು ಕೊಡಬೇಕು. 426 ಕಿ.ಮೀ.ನಲ್ಲಿ ಸೌರಶಕ್ತಿ ಬೇಲಿ ಹಾಕುವುದಕ್ಕೆ ಹಣ ಇಟ್ಟಿದ್ದೇವೆ, ಶೇ.50ರಷ್ಟು ಸಹಾಯಧನ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಸಹಾಯಧನವನ್ನು ಯಾರ್ಯಾರಿಗೆ ಕೊಡುತ್ತೀರಿ, ಎಲ್ಲಿ ಕೊಡುತ್ತೀರಿ? ಅದು ಇನ್ನೂ ಜಾರಿಗೆ ಒಂದಿಲ್ಲ. ಉಪಯೋಗಿಸಿರುವ ಹಳೇ ರೈಲು ಹಳಿಗಳನ್ನು ಅರಣ್ಯದ ಸುತ್ತ ಮುತ್ತ ಹಾಕುತ್ತೇವೆ, ಅದಕ್ಕಾಗಿ 212 ಕೋಟಿ ರೂಪಾಯಿಗಳಷ್ಟು ಹಣ ವೆಚ್ಚ ಮಾಡುತ್ತೇವೆಂದು ಹೇಳಿದ್ದೀರಿ. 4 ತಿಂಗಳಾಯಿತು, ಇನ್ನೂ ಆ Process start ಆಗಿಲ್ಲ. ಈಗಾಗಲೇ ಆಗಬೇಕಿತ್ತು. ಈಗ ಮಳೆಗಾಲ ಶುರುವಾಯಿತು. ಇನ್ನೂ ಮೂರ್ನಾಲ್ಕು ತಿಂಗಳು ಮಳೆ ಇರುತ್ತದೆ, ಅದನ್ನು ಯಾವಾಗ ಮಾಡುತ್ತೀರಿ? ನಮ್ಮದು ಲಾಭದಾಯಕ ಇಲಾಖೆಯಲ್ಲವೆಂದು ಹೇಳುತ್ತೀರಿ, ಆದರೂ ಕೂಡ ಬೇರೆ ಬೇರೆ ರೂಪದಲ್ಲಿ 185 ಕೋಟಿ ರೂಪಾಯಿಗಳ ಲಾಭವನ್ನು ನೀವು ನಿರೀಕ್ಷೆ ಮಾಡಿದ್ದೀರಿ. 335 ಕಿ.ಮೀ. ಆನೆ ಕಂದಕಗಳನ್ನು ಸಹ

ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಎಲ್ಲಿ ಮಾಡುತ್ತೀರಿ, ಹೇಗೆ ಮಾಡುತ್ತೀರಿ? ಅದು practical ಆಗಿ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅದೇನೇ ಇರಲಿ, ನಾವು ಆಶಾಭಾವನೆಯಲ್ಲಿರಬೇಕು. ಆನೆಗಳನ್ನು ರಕ್ಷಿಸುವುದು, ಜನರನ್ನು ರಕ್ಷಿಸುವುದು, ಇದೆಲ್ಲವನ್ನು ತಾವು ಕಡ್ಡಾಯವಾಗಿ ಮಾಡಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಬಹುಶಃ ಇದು ಕೂಡ ಪರಿಸರ ಸಮತೋಲನವನ್ನು ಕಾಪಾಡುವುದಕ್ಕಾಗಿ ಬಹಳ ಅಗತ್ಯವಿರುವ ಇಲಾಖೆ. ಅದರಲ್ಲಿ ಎರಡು ಮಾತಿಲ್ಲ. ಈಗ NREG ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆ ಇದೆ. ನಮ್ಮಲ್ಲಿ ಬೆಟ್ಟಗಳು ಇವೆ, ಸಾಕಷ್ಟು ಪ್ರದೇಶಗಳು ಇವೆ, ಅಲ್ಲಿ ಆನೆಗಳು ಆಹಾರವನ್ನು ಬೆಳೆಯುವುದಕ್ಕೆ ಎಲ್ಲಿ ಏನು ಕಾರ್ಯಕ್ರಮ ಆಗಿದೆ. ಬಿದಿರು ಬೆಳೆಸತಕ್ಕಂಥದ್ದು ಇರಬಹುದು. ಬೇರೆ ಬೇರೆ ಸಸಿಗಳನ್ನು ಬೆಳೆಸತಕ್ಕಂಥದ್ದು ಇರಬಹುದು. ಹೊಳೆಯ ಪಕ್ಕದಲ್ಲಿ ಉದ್ದಕ್ಕೆ ಬರುವಂಥದು ಇರಬಹುದು. ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು. ನಮ್ಮಲ್ಲಿ MDR ರಸ್ತೆಗಳು ಇದ್ದಾವೆ. ರಾಜ್ಯ ಹೆದ್ದಾರಿ ಇದೆ, ರಾಷ್ಟ್ರೀಯ ಹೆದ್ದಾರಿ ಇವೆ, ಫಾರೆಸ್ಟ್‌ನವರು ಎಲ್ಲಿ ಗಿಡಗಳನ್ನು ನೆಡುವುದು. ರಾಷ್ಟ್ರೀಯ ಹೆದ್ದಾರಿಯಲ್ಲಿ correct ಆಗಿ ಏಳುವರೆ ಮೀಟರ್‌ಗೆ ಗಿಡ ನೆಡುವುದು, ರಾಜ್ಯ ಹೆದ್ದಾರಿಯಲ್ಲಿ correct ಆಗಿ ಐದುವರೆ ಮೀಟರಿಗೆ ಗಿಡ ನೆಡುವುದು. ಬೆಳೆದು ರಸ್ತೆಗೆ ಬಂದಿವೆ ನಾವು ಹೊಸ ರಸ್ತೆಗಳನ್ನು ಮಾಡಿಸಿದ್ದೇವೆ. ರಸ್ತೆಗೆ ಎಲ್ಲಾ ನೀರು ಬೀಳುತ್ತದೆ. ಕಾಮತಿ–ಭೈರಾಪುರ–ಮಗ್ಗೆ–ಹರೆಹಳ್ಳಿ ಎಂದು ರಸ್ತೆ ಇದೆ 83 ಲಕ್ಷ ರೂ.ಗಳನ್ನು ಕೊಡಿ ಎಂದು ಫಾರೆಸ್ಟ್‌ನವರು estimate ಕೊಡಿ ಎಂದು ಕೇಳಿದ್ದಾರೆ. ಅವೆಲ್ಲಾ ನಾವು ತೆಗೆಯುತ್ತೇವೆ PWD ಯವರಿಂದ 83 ಲಕ್ಷ ರೂ.ಗಳ ಹಣ ಕಟ್ಟಿಸಿ ಎಂದು ಕೇಳಿದ್ದಾರೆ. ಎಲ್ಲಾ ಪಕ್ಕಪಕ್ಕದಲ್ಲಿಯೆ ಬೆಳೆದಿವೆ. ಕನಿಷ್ಠ ಸಾಮಾನ್ಯ ಜ್ಞಾನ ಇಲಾಖೆಯವರಿಗೆ ಬೇಡವೆ? ರಾಜ್ಯ ಹೆದ್ದಾರಿ ಎಂದರೆ ಇಷ್ಟು ಮೀಟರ್ ಅಗಲ ಇರಬೇಕೆಂದು ಇದೆ. ರಾಷ್ಟ್ರೀಯ ಹೆದ್ದಾರಿ ಎಂದು ಇಷ್ಟು ಮೀಟರ್ ಅಗಲ ಇರಬೇಕೆಂದು ಇದೆ. 40 ಮೀಟರ್ ಅಗಲಕ್ಕೆ ಆದರೂ ಮರಗಳನ್ನು ನೆಡಬೇಕು ಅಲ್ಲವೆ? 30 ಮೀಟರ್ ಅಗಲಕ್ಕೆ ಮರಗಳನ್ನು ನೆಡಬೇಕು. ನಮಗೆ ಆ ಚಿಕ್ಕ

ಚಿಕಲ್ಕ ಮರಗಳನ್ನು ತೆಗೆಯುವುದಕ್ಕೆ ಬೇಸರವಾಗುತ್ತದೆ. ಹತ್ತಿರಕ್ಕೆ ಬಂದು ಕೂಡಿಕೊಂಡಿದ್ದಾವೆ ಮೊನ್ನೆ accident ಆಗಿದೆ ಆ ಮರಗಳಿಗೆ ಬಸ್ touch ಆಗುತ್ತವೆ, ಮಳೆ ನೀರು ಬೀಳುತ್ತವೆ. ರಸ್ತೆ ಹಾಳಾಗುತ್ತದೆ. ಇದಕ್ಕಾಗಿ ಫಾರೆಸ್ಟ್‌ನವರು ಆ ಒಂದು ಸಾಮಾನ್ಯ ಜ್ಞಾನವನ್ನು ಉಪಯೋಗಿಸಿಕೊಂಡು ದೂರ ದೂರ ಮರಗಳನ್ನು ನೆಡತಕ್ಕಂಥದು ಈ ತರಹದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎನ್ನತಕ್ಕಂಥ ಮಾತನ್ನು ಹೇಳಿ ಕೊನೆಯದಾಗಿ ನಮಗೂ ಸಾಕಾಗಿ ಹೋಗಿದೆ. ಇದು Deemed forest land, forest land ಎಂದು ಹೇಳಿ ಮಲೆನಾಡಿನಲ್ಲಿರುವುದು ಎಲ್ಲಾ ಫಾರೆಸ್ಟ್‌ನಲ್ಲಿಯೆ ಇರುವುದು. ಬೇರೆ ಎಲ್ಲಿಯೂ ಇಲ್ಲ. Revenue land, C & D land ಅವರೆ ಎಲ್ಲವನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಆನರಿಗೆ ಇವತ್ತು ನಾವು ಆಶ್ರಯ ಮನೆಗಳನ್ನು ಕೊಡಬೇಕಾದರೆ ಬಸವಾ ಇಂದಿರಾ ಆವಾಜ್ ಇರಬಹುದು, ಇಂದಿರಾ ಆವಾಜ್ ಇರಬಹುದು, ಅಥವಾ ಯಾವುದೇ ಸ್ಕೀಂ ನಲ್ಲಿ ಇರಬಹುದು, ಸೈಟ್ ಬೇಕು. ಒಂದೇ ಒಂದು ಸೈಟ್ ಇಲ್ಲ, ನಾವು ಕೊಟ್ಟರೆ ಇವರ ಜಾಗದಲ್ಲಿಯೆ ಕೊಡಬೇಕು. ಅವಕಾಶ ಇಲ್ಲದಿರುವುದರಿಂದ ನಾವು ಮನೆಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಅಧಿಕಾರಿಗಳು ಅಡ್ಡ ಬರುತ್ತಾರೆ. RFO ಮತ್ತು ನಿಮ್ಮ ಅಧಿಕಾರಿಗಳು ಹೋಗಿ ಇಲ್ಲಿ ನಮ್ಮ ಜಾಗ ಬರುತ್ತದೆ ನೀವು ಅಲ್ಲಿ ಕಟ್ಟಬೇಡಿ ಎಂದು ಹೇಳುತ್ತಾರೆ. ಅವರು ಹೇಳಿದಂತೆ ನಾವು ಕೇಳಿದಂತೆ ಕೇಳುವುದಕ್ಕೆ ನಾವು ಶುರು ಮಾಡಬೇಕಾಗುತ್ತದೆ, ಆ ಮಟ್ಟದ ಸ್ಥಿತಿಗೆ ಬಂದಿದೆ. ಆದ್ದರಿಂದ ಅದಕ್ಕೂ ಕೂಡ ಅಲ್ಲಿ ಫಾರೆಸ್ಟ್ ಇರುತ್ತದೆ, ಊರ ಪಕ್ಕದಲ್ಲಿಯೆ ಇರುತ್ತವೆ. ಅಧಿಕಾರಿಗಳು ಒಂದು ಬುದ್ಧಿವಂತಿಕೆಯಿಂದ ಆ ತರಹ ಇರುವುದಕ್ಕೆ ಒಂದು ಸಹಕಾರವನ್ನು ಕೊಡಲಿ ಎಂದು ಆ ವಿಷಯವನ್ನು ಹೇಳುತ್ತೇನೆ. ಇನ್ನು ಆನೆಧಾಮವನ್ನು ಕಡ್ಡಾಯವಾಗಿ ನಮ್ಮ ವಣಗೂರು ಸುತ್ತಮುತ್ತಲ ಭಾಗದಲ್ಲಿ ಮಾಡಬೇಕು. ಹೆಚ್ಚು ಗಿಡಗಳನ್ನು ತಾವು ಗಿಡ ನೆಡಲಿಕ್ಕೆ social forest ನಲ್ಲಿ ಎಲ್ಲಿ ಇಲ್ಲ ಆ ಕಡೆಗೆ ಮಾಡಬೇಕು. ಒಂದೊಂದು ಲಕ್ಷ ಗಿಡಗಳನ್ನು ತಾವು ಕೊಡುತ್ತೇವೆಂದು ಹೇಳಿದಿರಿ. ಒಂದು ಲಕ್ಷ ಗಿಡದಲ್ಲಿ ಎಷ್ಟು ಗಿಡ ನೆಟ್ಟಿದ್ದೇವೆ, ಎಷ್ಟು ಉಳಿದಿವೆ, ಯಾವ ರೀತಿ ಪೋಷಣೆ ಮಾಡುತ್ತಿದ್ದೇವೆ. ಈ ತರಹದನ್ನು ತಾವು

ಗಮನದಲ್ಲಿಟ್ಟುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಕೂಡ ಮಾತನಾಡಬೇಕು ಮಾನ್ಯ ಬೋಪಯ್ಯನವರು ಈ ವಿಷಯವಾಗಿ ಮಾತನಾಡಿದ್ದಾರೆ, ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಈ ಇಲಾಖೆ ಒಂದು ಪರಿಸರ ಸ್ನೇಹಿ ಇಲಾಖೆ ಆಗಿರುವುದರಿಂದ ಇನ್ನು ಉನ್ನತ ಮಟ್ಟದಲ್ಲಿ ಚೆನ್ನಾಗಿ ಆಗುವುದಕ್ಕೆ ಸಹಕರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರಗಳು.

ಶ್ರೀ ಶಿವರಾಂ ಅರಬೈಲ್ ಹೆದ್ದಾರಿ (ಯಲ್ಲಾಪೂರ):– ಮಾನ್ಯ ಅಧ್ಯಕ್ಷರೆ, ಅರಣ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮೊಟ್ಟಮೊದಲನೆಯದಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಉತ್ತರ ಕನ್ನೆ ಜಿಲ್ಲೆ ತಮಗೆ ಗೊತ್ತಿದ್ದ ಹಾಗೆ ರಾಜ್ಯದಲ್ಲಿ ಶೇಕಡಾ 80.62% ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆ, ಎರಡನೆಯದು ತಮ್ಮ ಜಿಲ್ಲೆ 78% ಮೂರನೆಯದು ಕೊಡಗು ಜಿಲ್ಲೆ ಅತ್ಯಂತ ಅರಣ್ಯ ಪ್ರದೇಶ ಹೊಂದಿರತಕ್ಕಂಥ ಜಿಲ್ಲೆಗಳು ಇವು. ಅರಣ್ಯ ಕಳವು ಮಾಡತಕ್ಕಂಥ ದೊಡ್ಡ ಜಿಲ್ಲೆ ಕೂಡ ನಮ್ಮದೇ ಆಗಬಹುದು. ಅತ್ಯಂತ ಹೆಚ್ಚು ಜನ ಕಳುವು ಮಾಡುತ್ತಾರೆ. ಕಳುವು ಮಾಡಿದಂಥ ಸಂದರ್ಭದಲ್ಲಿ ಅರಣ್ಯ ಇಲಾಖೆಯ ವಾಹನಗಳನ್ನು ಹಿಡಿದುಕೊಂಡು ಬರುತ್ತಾರೆ. ಹಿಡಿದುಕೊಂಡು ಬಂದ ನಂತರ ತಾವು ಮತ್ತಷ್ಟು ಕಠಿಣವಾದ ಕ್ರಮಗಳನ್ನು ತಾವು ಕೈಕೊಳ್ಳಬೇಕು. ಆದರೆ ಕಳೆದ 15–20 ವರ್ಷಗಳಿಂದ ಯಾವ್ಯಾವ ವಾಹನಗಳನ್ನು ಹಿಡಿದುಕೊಂಡು ಬಂದಿದ್ದೀರಿ ಆ ವಾಹನಗಳಿಗೆ enquiry ಆಗುತ್ತಾ ಆಗುತ್ತಾ ಅಂತಿಮವಾಗಿ ಕದ್ದದ್ದು ತಪ್ಪು ವಾಹನ ಇಲಾಖೆಗೆ ಸೇರತಕ್ಕಂಥದ್ದು ಎಂದು ಆದೇಶ ಹೊರಬೀಳುತ್ತದೆ. ಆ ಆದೇಶ ಹೊರಬೀಳುವಾಗ ಆ ವಾಹನಕ್ಕೆ 5 ಸಾವಿರ ಹುಟ್ಟುವುದಿಲ್ಲ. ಮಳೆಯಲ್ಲಿ ಬಗೆದು ಬಗೆದು ಮಾಲೀಕನಿಗೂ ಇಲ್ಲ ಇಲಾಖೆಗೂ ಲಾಭವಿಲ್ಲ. ಅದಕ್ಕಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಈ ಕಾನೂನಿಗೆ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. ಯಾವ ದಿವಸ ನೀವು ವಾಹನವನ್ನು ಹಿಡಿಯುತ್ತೀರಿ. ಹಿಡಿದ ವಾಹನದ ಆವತ್ತಿನ ಬೆಲೆಯನ್ನು ಕಟ್ಟಿ ಮಾಲೀಕನೇ ತೆಗೆದುಕೊಂಡು ಹೋಗಲಿ Department ಗೆ ದುಡ್ಡನ್ನು

deposit ಮಾಡಿ ಕೊಡತಕ್ಕಂಥದ್ದು, ಇಲ್ಲವೆ ಅದನ್ನು sale ಮಾಡತಕ್ಕಂಥ ಕ್ರಮ ಮಾಡಿ ಆ ಹಣವನ್ನು separate ಆಗಿ ಇಟ್ಟು ಈ case ಅಂತಿಮವಾದ ನಂತರದಲ್ಲಿ ಅವರಿಗೆ ಸಿಗತಕ್ಕಂಥ ಪರಿಸ್ಥಿತಿಯನ್ನು ಮಾಡಿದರೆ ನಮ್ಮ ಇಲಾಖೆಗೆ ಒಂದು ದೊಡ್ಡ ಲಾಭವಾಗಬಹುದು. ಅದರ ಬಗ್ಗೆ ತಾವು ಒಂದು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಾವು ಸೂಚಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. 1970 ರಲ್ಲಿ Conservation Act ಬಂದ ಮೇಲೆ ಆವತ್ತಿನ ಕಾಲದಲ್ಲಿ ಎಷ್ಟು ಪ್ರದೇಶ ಅರಣ್ಯ ಇಲಾಖೆಯ ಕೈಯಲ್ಲಿತ್ತೋ ಅದಕ್ಕಿಂತ ಹಿಂದೆ ಇರತಕ್ಕಂಥ ಅರಣ್ಯ ಪ್ರದೇಶ ಅಲ್ಲದಂಥದು ಜಿಲ್ಲಾಧಿಕಾರಿಗಳು 1956 ರಿಂದ 1968 ಕ್ಕೆ ಕೊಟ್ಟಿರತಕ್ಕಂಥ ಸ್ಥಳ ಇವತ್ತು ಅರಣ್ಯ ಇಲಾಖೆಯವರು ತಮ್ಮ ಸ್ಥಳ ಎಂದು ಹೇಳುತ್ತಿದ್ದಾರೆ. ಅರಣ್ಯ ಇಲಾಖೆಯವರು ತಮ್ಮ ಸ್ಥಳ ಎಂದು ಹೇಳುತ್ತಿದ್ದಾರೆ. ಅರಣ್ಯ ಇಲಾಖೆಯ ಒಂದು ಗುಂಟೆ ಜಾಗವನ್ನು ನಾವು ತೆಗೆದುಕೊಳ್ಳುವುದಾದರೆ ನಮ್ಮ ಸರ್ಕಾರದ ಕೆಲಸಕ್ಕೂ ತೆಗೆದುಕೊಳ್ಳಬೇಕಾದರೂ ಕೂಡ 4–5 ವರ್ಷ ಕಷ್ಟ ಪಡಬೇಕು. ಅರಣ್ಯ ಇಲಾಖೆ Revenue Department ಜಾಗವನ್ನು ತನ್ನ ತಾಬಾಕ್ಕೆ ತೆಗೆದುಕೊಳ್ಳುವಾಗ ಈ ಯಾವ ಕಾನೂನುಗಳನ್ನು ಯೋಚನೆ ಮಾಡುವುದಿಲ್ಲ. ಯಾವ ಕಾನೂನನ್ನು ರಕ್ಷಣೆ ಮಾಡುವುದಿಲ್ಲ. ಇದು ಅರಣ್ಯ ಇಲಾಖೆಗೆ ಸೇರಿದ್ದು. 150–160 ಎಕರೆ ಸ್ಥಳ ಇವತ್ತು record of rights ನಲ್ಲಿ revenue ಎಂದು ಇದೆ. 1955 ರಲ್ಲಿ ಜಿಲ್ಲಾಧಿಕಾರಿಗಳು ಮಂಜೂರು ಮಾಡಿಕೊಟ್ಟಿರತಕ್ಕಂಥ ಸ್ಥಳ ಇದೆ. ಇವತ್ತು ಅದು ಅರಣ್ಯ ಇಲಾಖೆಯ ತಾಬಾದಲ್ಲಿ ಇದೆ ಇದನ್ನು ಯಾವ ಕೆಲಸಕ್ಕೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ. ಅರಣ್ಯ ಇಲಾಖೆಯ ಜಾಗವನ್ನು ತೆಗೆದುಕೊಳ್ಳುವಾಗ ಯಾವೆಲ್ಲಾ ನಿಬಂಧನೆಗಳು ಇವೆಯೋ ಹಾಗೆಯೆ revenue ಇಲಾಖೆಯ ಜಾಗವನ್ನು ತೆಗೆದುಕೊಳ್ಳುವಾಗಲೂ ಕೂಡ revenue ಇಲಾಖೆಯ ನಿಬಂಧನೆಗೆ ಒಳಪಟ್ಟು ಸ್ಥಳವನ್ನು ಪಡೆದುಕೊಳ್ಳಬೇಕು. ಅದನ್ನು ಮಾಡದೆ ತನ್ನ ಮನಸ್ಸಿಗೆ ಬಂದಂತೆ ತೆಗೆದುಕೊಳ್ಳುವಂಥ ಕ್ರಮ ಸರಿಯಲ್ಲ. ಅದಕ್ಕೆ ಸನ್ಮಾನ್ಯ ಮಂತ್ರಿಗಳು ಬಹುತೇಕ ನಮ್ಮ ಪ್ರದೇಶವನ್ನು ಪರಿಚಯ ಇರತಕ್ಕಂಥವರು ಅದಕ್ಕಾಗಿ ಆ

ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೊಂದು ಪ್ರಮುಖವಾಗಿರತಕ್ಕಂಥ ಕೆಲಸ ಅರಣ್ಯ ಇಲಾಖೆಯಿಂದ ಆಗಬೇಕಾಗಿದೆ. ನಾಟಿ ಔಷಧಿಯನ್ನು ಕೊಡತಕ್ಕಂಥ ದೊಡ್ಡ ದೊಡ್ಡ ಜನ ಅನೇಕ ವರ್ಷಗಳಿಂದ ನಮ್ಮ ಪ್ರದೇಶದಲ್ಲಿದ್ದಾರೆ. ಉದಾಹರಣೆಗೆ ತಮಗೆ ಗೊತ್ತಿರಬಹುದು. ಮಹಾತ್ಮಗಾಂಧೀಜಿಯವರಿಗೆ ಅರ್ಧಾಂಗವಾಯು ಆದಂಥ ಕಾಲದಲ್ಲಿ ದಮ್ಮು ಶಿವುಗೌಡ ಎನ್ನತಕ್ಕಂಥ ಒಬ್ಬ ವ್ಯಕ್ತಿ ಬೆಳಂಬಳದಲ್ಲಿ ಇಡೀ ದೇಶದಿಂದ ಇವತ್ತಿನತನಕ ಅರ್ಧಾಂಗವಾಯು ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ಕೇವಲ ಗಿಡಮೂಲಿಕೆಯ ಔಷಧಿಗಳಿಂದ ಅರ್ಧಾಂಗವಾಯುವನ್ನು ಗುಣ ಮಾಡತಕ್ಕಂಥ ಒಂದು ಪದ್ಧತಿಯನ್ನು ಅವರು ರೂಢಿಸಿಕೊಂಡು ಬಂದಿದ್ದಾರೆ. ಆದರೆ ಇವತ್ತು ಅವರಿಗೆ ಸ್ಥಳ ಇಲ್ಲ. ಸ್ಥಳ ಅರಣ್ಯ ಇಲಾಖೆಯವರ ತಾಬಾದಲ್ಲಿಯೆ ಇರಲಿ, ಆದರೆ ಆ ಗಿಡಮೂಲಿಕೆಯ ಔಷಧಿಗಳನ್ನು ಬೆಳೆಸುವುದಕ್ಕೆ ಅರಣ್ಯ ಇಲಾಖೆ ಪ್ರೋತ್ಸಾಹ ಕೊಟ್ಟು ಅದರ ಜೀವಂತಿಕೆಯನ್ನು ಇಡದೆ ಹೋದರೆ ಮುಂದಿನ ಸಮುದಾಯಕ್ಕೆ ಇದು ಏನು ಸಿಗಲಾರದು. ಆ ಕಾರಣಕ್ಕಾಗಿ ಇಂತಹ ಒಂದು ಕಾಡುಗಳನ್ನು ಅಂತಹ ಒಂದು ಔಷದ ಸಸ್ಯಮೂಲವನ್ನು ರಕ್ಷಣೆ ಮಾಡತಕ್ಕಂಥ ಕೆಲಸಗಳನ್ನು ಮಾಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ. ಬೆಳೆ ಹಾನಿ ಅರಣ್ಯ ಇಲಾಖೆಯ ಆನೆಗಳಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ನನ್ನ ಕ್ಷೇತ್ರದಲ್ಲಿ ಯಲ್ಲಾಪೂರ ಮತ್ತು ಮುಂಡಗೋಡದಲ್ಲಿ ಒಂದು ಕಡೆ ಅಭಯಾರಣ್ಯ ಈ ಕಡೆ ದಾಂಡೇಲಿ ಈ ಕಡೆ ಜೋಯಿಡಾ ಇದರ ನಡುವೆ ನಮ್ಮ ತಾಲ್ಲೂಕು ಸಿಕ್ಕಿಬಿದ್ದಿದೆ. ಆನೆ ಹಾವಳಿಯನ್ನು ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ನಾನು ಅನೇಕ ಸಲ ಮಾನ್ಯ ಮಂತ್ರಿಗಳಲ್ಲಿ ಕೂಡ ಪ್ರಾರ್ಥನೆಯನ್ನು ಮಾಡಿದ್ದೇನೆ. 200 ಮತ್ತು 500 ರೂ.ಗಳನ್ನು ಕೊಡುತ್ತಾರೆ. ಒಂದು ಕೂಲಿ ಆಳಿಗೆ ಇವತ್ತು 400 ರೂ.ಗಳನ್ನು ಕೊಡಬೇಕು. ಆ 500 ರೂ.ಗಳನ್ನು ತೆಗೆದುಕೊಳ್ಳಬೇಕಾದರೆ ಆ ಬಡವ ಎರಡು–ಮೂರು ತಿಂಗಳು ಅಡ್ಡಾಡಿಸುವಂಥ ಒಂದು ಕೆಟ್ಟ ಪ್ರಕ್ರಿಯೆ ನಡೆದಿದೆ. ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಅರಣ್ಯ ಇಲಾಖೆ ಇದೊಂದು open treasury. ಇದನ್ನು ಬೀಗದಲ್ಲಿ ಇಡತಕ್ಕಂಥದು ಅಲ್ಲ. ಅಧಿಕಾರಿಗಳು ಯೋಚನೆ ಮಾಡಬೇಕು. ಒಬ್ಬ ರೈತ ಸಿಟ್ಟು ಬಂದರೆ ರೈತನ ಮನಸ್ಸಿಗೆ ನೋವಾಗುವಂಥ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡಿದರೆ matchbox ನಲ್ಲಿರತಕ್ಕಂಥ ಒಂದು ಕಡ್ಡಿ ಅನೇಕ ಅಧಿಕಾರಿಗಳನ್ನು suspend ಮಾಡಿಸತಕ್ಕಂಥ ಕೆಲಸಕ್ಕೆ ಕೈ ಹಾಕುತ್ತದೆ. ಅರಣ್ಯ ಇಲಾಖೆ ಒಂದು open treasury ಇದು. ಈ open treasury ಯನ್ನು ವಿಶ್ವಾಸದ ಮೂಲಕ ಭದ್ರಪಡಿಸಿಕೊಳ್ಳಬೇಕು ಕೇವಲ ಕಾನೂನಿನ ಅಡಿಯಲ್ಲಿ ಬಗ್ಗಿಸುವುದಕ್ಕಾಗುವುದಿಲ್ಲ. ಆ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಕೂಡ ಆ ಮಾನವೀಯ ಮೌಲ್ಯಗಳನ್ನು ರಕ್ಷಣೆ ಮಾಡಬೇಕೆಂದು ಹೇಳಿ ನಾನು ವಿನಂತಿಯನ್ನು ಮಾಡುತ್ತೇನೆ. ಕೊನೆಯದಾಗಿ ಅನೇಕ ಡೋಂಗಿ ಪರಿಸರವಾದಿಗಳು. ಅನೇಕ ಜನ ಕೇವಲ ಅದನ್ನೇ ತಮ್ಮ ಉದ್ಯೋಗವನ್ನು ಮಾಡಿಕೊಂಡು ಅರಣ್ಯ ಇಲಾಖೆಯನ್ನು ರಕ್ಷಣೆ ಮಾಡಬೇಕೆಂದು ದೊಡ್ಡ ಮಾತನ್ನು ಹೇಳುತ್ತಾ ಅನೇಕ ದಿವಸಗಳಿಂದ ಅನೇಕ development ಗಳಿಗೂ ತೊಂದರೆ ಕೊಡುತ್ತಾರೆ. ನಮ್ಮ ಅರಣ್ಯ ಇಲಾಖೆಯ ಮಂತ್ರಿಗಳಿಗೆ ವಿಶ್ವಾಸ ಹುಟ್ಟಿಸತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡುತ್ತಾರೆ. ಅನೇಕ ಜನ IFS ಅಧಿಕಾರಿಗಳಿಗೆ ಅವರು ಹೇಳಿರತಕ್ಕಂಥ ಎಲ್ಲಾ ಮಾತುಗಳು ಕೂಡ ಸತ್ಯಕ್ಕೆ ಸಮೀಪ ಎಂದು ಕಂಡುಕೊಳ್ಳುತ್ತಾರೆ. ಆದರೆ ವಾಸ್ತವಿಕತೆಯನ್ನು ಅರ್ಥ ಮಾಡಿಕೊಂಡಂತಹ ಯೋಜನೆಗಳ ಬಗ್ಗೆ ತೊಂದರೆ ಆಗದಂತೆ ವಿಚಾರ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಕೊನೆಯದಾಗಿ, 1954ಕ್ಕಿಂತ ಪೂರ್ವದಲ್ಲಿ ಉತ್ತರ ಕನ್ನಡ ಜಿಲ್ಲೆಗೊಂದು ವಿಶೇಷ Act ಇದೆ. ತಮಗೆ ಗೊತ್ತಿದೆ, ತಾವು ಅರಣ್ಯ ಇಲಾಖೆಯ ಬಗ್ಗೆ ನಮ್ಮ ಜಿಲ್ಲೆಯ ಜನಕ್ಕೆ ಅತ್ಯಂತ ಹೆಚ್ಚು educate ಮಾಡಿರುವಂಥವರು, ನಮ್ಮ ಜಿಲ್ಲೆಗೆ ನಿರಂತರ ಸಂಪರ್ಕ ಇರುವಂಥವರು, ನಾವೆಲ್ಲಾ ಇಷ್ಟು ಮಾತನಾಡುವುದಕ್ಕೆ, ಅರಣ್ಯ ಇಲಾಖೆಯಲ್ಲಿ ಮಾಹಿತಿ ಪಡೆದುಕೊಳ್ಳುವುದಿದ್ದರೆ ಅದು ತಮ್ಮ ಆಶೀರ್ವಾದ ಒಂದರಿಂದ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಪ್ರಾಂಜಲ ಮನಸ್ಸಿನಿಂದ ಹೇಳುವುದಕ್ಕೆ ಬಯಸುತ್ತೇನೆ. Candoe Privilege Act ಇದೆ. ಉತ್ತರ ಕನ್ನಡ

ಜಿಲ್ಲೆಗೆ ಬ್ರಿಟಿಷರ ಕಾಲದಿಂದ ಶೇ.96, 97 ರಷ್ಟು ಅರಣ್ಯ ಇದ್ದಂತಹ ಕಾಲದಲ್ಲಿ Candor Privilege Act ಎನ್ನುವ Act ಅನ್ನು ನಮ್ಮ ಜಿಲ್ಲೆಗೆ ವಿಶೇಷವಾಗಿ ಕೊಟ್ಟಿದ್ದಾರೆ. ಇವತ್ತಿನತನಕ ಆ Candor Privilege Act ಎಲ್ಲಿಯೂ ಕೂಡ abolish ಆಗಿರುವಂತಹ ದಾಖಲೆಗಳು ಸಿಗುತ್ತಿಲ್ಲ. ಆದರೆ ಅದು ಜೀವಂತ ಇದೆ ಎನ್ನುವ ಮಾತನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಹಾಗಾಗಿ ಮಾನ್ಯ ಸಚಿವರಿಗೆ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ, ತಮ್ಮ ಉತ್ತರದಲ್ಲಿ, ಇವತ್ತಿಗೂ ಕೂಡ ರಾಜ್ಯದಲ್ಲಿ ಅತ್ಯಂತ ಹೆಚ್ಚು ಅರಣ್ಯ ಪ್ರದೇಶವಿರುವ ಅಂದರೆ ಶೇ.82% ಅರಣ್ಯ ಪ್ರದೇಶವಿರುವಂತಹ ನಮ್ಮ ಜಿಲ್ಲೆಗೆ ಅರಣ್ಯ ಇಲಾಖೆಯಲ್ಲಿ ಈ Candor Privilege Act ಜೀವಂತ ಇದೆಯೋ ಹೇಗೆ? ಇದೆ ಎಂದರೆ ಇದನ್ನು ಆಚರಣೆಗೆ ತರುವರಲ್ಲಿ ತೊಂದರೆ ಇರುವಂಥದ್ದು ಏನು ಎನ್ನುವುದನ್ನು ನಮಗೆ ತಿಳಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿ ತಾವು ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಶೂನ್ಯವೇಳೆ, ಮಾನ್ಯ ಕೆ.ಗೋಪಾಲ ಪೂಜಾರಿಯವರು ಮಾತನಾಡುವುದು.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ:- ಕುಮಾರಿ ರತ್ನ ಕೊಠಾರಿ ಕಾಣೆಯಾಗಿರುವ ಪ್ರಕರಣದ ತನಿಖೆಯ ಬಗ್ಗೆ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):- ಮಾನ್ಯ ಅಧ್ಯಕ್ಷರೆ, ನನ್ನ ಬೈಂದೂರು ಮತದಾರ ಕ್ಷೇತ್ರ ವ್ಯಾಪ್ತಿಯ ಯಡ್ತೆರೆ ಗ್ರಾಮದ ಆಲಂದೂರು ಪ್ರದೇಶದ ನಿವಾಸಿ ಶಿರೂರು ಜೂನಿಯರ್ ಕಾಲೇಜಿನ ಪ್ರಥಮ ಪಿ.ಯು.ಸಿ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಕುಮಾರಿ ರತ್ನ ಕೊಠಾರಿ ಇವರು ದಿನಾಂಕ:09.07.2014 ರಂದು ಕಾಲೇಜಿನಿಂದ ಮನೆಗೆ ತೆರಳುವ ಸಂದರ್ಭದಲ್ಲಿ ಕಾಣೆಯಾಗಿರುತ್ತಾರೆ. ಆ ವಿದ್ಯಾರ್ಥಿನಿ ದಿನನಿತ್ಯ ಮನೆಯಿಂದ ಕಾಲೇಜಿಗೆ ನಡೆದಾಡುವ ಕಾಡುಪ್ರದೇಶದ ನಿರ್ಜನ ಸ್ಥಳದಲ್ಲಿ